## ಪ್ರಕಾಶಕರ ಮಾತು

**ಈ** ವಿಶ್ವವು ಒಂದು ತೆರೆದಿಟ್ಟ ಬೃಹತ್ ಗ್ರಂಥ. ಅದು ನಮಗೆ ಕಲಿಸುತ್ತದೆ. ನಮ್ಮನ್ನು ಚಕಿತಗೊಳಿಸುತ್ತದೆ. ನಮ್ಮನ್ನು ನಿಬ್ಬೆರಗುಗೊಳಿಸುತ್ತದೆ. ಅದರ ಸೃಷ್ಟಿ-ಜೀವ-ಲಯಗಳ ಅನಂತಾನಂತ ಅಜ್ಞಾನ ಸೋಜಿಗ ಮತ್ತು ಪ್ರಕ್ರಿಯೆಗಳು ಮಾನವನ ಅಂತರ್ದೃಷ್ಟಿಯನ್ನು ತೆರೆಸಬೇಕು. ಅದಕ್ಕೆ ಹಿಂಜರಿಯುವಾತನನ್ನು ಈ ವಿಶ್ವವು ದಾರಿಗೆಡಿಸುತ್ತದೆ. ಅದನ್ನು ಅರಿಯಲು ಪ್ರಯತ್ನಿಸುವ ವಿವೇಕಶಾಲಿಯನ್ನು ಅದು ಸನ್ಮಾರ್ಗದಲ್ಲಿ ನಡೆಸುತ್ತದೆ. ಅಂತಹ ಅದ್ಭುತ ವಿಶ್ವ ಮತ್ತು ಅದರ ಸೃಷ್ಟಿಕರ್ತ ನನ್ನು ಗುರುತಿಸುವ ಶ್ರಮಫಲವೇ ಈ ಸತ್ಯಾನ್ವೇಷಣೆ. ಪ್ರಸ್ತುತ ವಿಷಯವನ್ನು ವೈಚಾ ರಿಕ ಮತ್ತು ವೈಜ್ಞಾನಿಕ ದೃಷ್ಟಿಕೋನದಿಂದ ಈ ಕೃತಿಯಲ್ಲಿ ವಹೀದುದ್ದೀನ್ ಖಾನ್‌ರು ವಿಶ್ಲೇಷಿಸಿದ್ದಾರೆ. ಅಲೀಘಢ ಮುಸ್ಲಿಮ್ ವಾರ್ಸಿಟಿಯ ವಿದ್ಯಾರ್ಥಿ ಯೂನಿ ಯನ್‌ನ ಆಶ್ರಯದಲ್ಲಿ 1958ರ ಸೆಪ್ಟೆಂಬರ್‌ನಲ್ಲಿ ಜರಗಿದ ಇಸ್ಲಾಮೀ ಭಾಷಣ ಮಾಲಿಕೆಯಲ್ಲಿ ಈ ಉಪನ್ಯಾಸವನ್ನು ಅವರು ಮಂಡಿಸಿದ್ದರು.

ಈ ಕೃತಿಯು ಪ್ರಥಮತಃ 'ಜ್ಯೋತಿ ಪ್ರಕಾಶನ, ಉಪ್ಪಿನಂಗಡಿ' ಇವರಿಂದ ಪ್ರಕಟವಾಗಿದ್ದು ಅದರ ಪರಿಷ್ಕೃತ ದ್ವಿತೀಯಾವೃತ್ತಿಯನ್ನು ಇದೀಗ ನಮ್ಮ ಸಂಸ್ಥೆ ವತಿಯಿಂದ ಪ್ರಕಟಿಸಿ ವಾಚಕರ ಮುಂದಿಡುತ್ತಿದ್ದೇವೆ.

-ಪ್ರಕಾಶಕರು

# ದಿವ್ಯವಾಣಿ

ಭೂಮಿ-ಆಕಾಶಗಳಲ್ಲಿರುವ ಪ್ರತಿಯೊಂದು ವಸ್ತುವೂ ಅಲ್ಲಾಹನನ್ನು ಜಪಿಸಿದೆ ಮತ್ತು ಅವನು ಪ್ರಬಲನೂ ಯುಕ್ತಿಪೂರ್ಣನೂ ಆಗಿರುತ್ತಾನೆ. ಭೂಮಿ-ಆಕಾಶಗಳ ಸಾಮ್ರಾಜ್ಯದ ಒಡೆಯನು ಅವನೇ ಆಗಿರುತ್ತಾನೆ, ಅವನೇ ಜೀವನ ನೀಡುತ್ತಾನೆ ಮತ್ತು ಮರಣ ಕೊಡುತ್ತಾನೆ. ಅವನು ಸಕಲ ವಿಷಯಗಳ ಸಾಮರ್ಥ್ಯವುಳ್ಳವನು. ಆದಿಯೂ ಅವನೇ ಅಂತ್ಯವೂ ಅವನೇ ಮತ್ತು ಅಭಿವ್ಯಕ್ತನೂ ಅವನೇ ರಹಸ್ಯನೂ ಅವನೇ ಮತ್ತು ಅವನು ಸಕಲ ವಿಷಯಗಳ ಜ್ಞಾನವುಳ್ಳವನು. ಭೂಮಿ-ಆಕಾಶಗಳನ್ನು ಆರು ದಿನಗಳಲ್ಲಿ ಸೃಷ್ಟಿಸಿದವನು ಅವನೇ. ಅನಂತರ ವಿಶ್ವ ಸಿಂಹಾಸನಾರೂಢನಾದನು. ಭೂಮಿಯೊಳಗೆ ಹೋಗುವ, ಅದರಿಂದ ಹೊರ ಬರುವ ಮತ್ತು ಆಕಾಶದಿಂದ ಇಳಿಯುವ ಮತ್ತು ಅದಕ್ಕೆ ಏರಿ ಹೋಗುವ ಎಲ್ಲ ವಸ್ತುಗಳ ಜ್ಞಾನ ಅವನಿಗಿದೆ. ನೀವೆಲ್ಲಿದ್ದರೂ ಅವನು ನಿಮ್ಮ ಜೊತೆಗಿದ್ದಾನೆ. ನೀವು ಮಾಡುವುದೆಲ್ಲವನ್ನೂ ಅವನು ನೋಡುತ್ತಿದ್ದಾನೆ. ಭೂಮಿ-ಆಕಾಶಗಳ ಸಾಮ್ರಾಜ್ಯದ ಒಡೆಯನು ಅವನೇ ಮತ್ತು ಸಕಲ ವಿಷಯಗಳು ತೀರ್ಮಾನಕ್ಕಾಗಿ ಅವನ ಕಡೆಗೆ ಮರಳಿಸಲ್ಪಡುತ್ತವೆ. ರಾತ್ರಿಯನ್ನು ಹಗಲಿನೊಳಗೂ ಹಗಲನ್ನು ರಾತ್ರಿಯೊಳಗೂ ಅವನೇ ಪೋಣಿಸಿರುತ್ತಾನೆ. ಹೃದಯಗಳೊಳಗೆ ಅವಿತುಕೊಂಡಿರುವ ರಹಸ್ಯಗಳನ್ನೂ ಅವನು ಬಲ್ಲನು.

**(ಪವಿತ್ರ ಕುರ್‌ಆನ್ 57: 1-6)**

# ಸತ್ಯಾನ್ವೇಷಣೆ

**ಈ** ಪ್ರಪಂಚವು ನಮ್ಮ ಮುಂದೆ ತೆರೆದಿಟ್ಟ ಒಂದು ಬೃಹತ್ ಗ್ರಂಥದಂತಿದೆ. ಆದರೆ ಅದೊಂದು ಅಸಾಮಾನ್ಯ ಗ್ರಂಥ. ವಿಷಯ ಅಥವಾ ಲೇಖಕನ ಹೆಸರು ಅದರಲ್ಲಿ ಎಲ್ಲಿಯೂ ಉಲ್ಲೇಖಿಸಲ್ಪಟ್ಟಿಲ್ಲ. ಆದೇ ವೇಳೆ ಅದರಲ್ಲಿ ಅಡಕವಾಗಿರುವ ವಿಷಯ ಮತ್ತು ಗ್ರಂಥಕರ್ತನ ಕುರಿತು ಅದರ ಪ್ರತಿಯೊಂದು ಅಕ್ಷರವೂ ಸಾರಿ ಹೇಳುತ್ತಿದೆ.

ಓರ್ವನು ಈ ಲೋಕದಲ್ಲಿ ಕಣ್ಣು ತೆರೆದು ಅತಿ ವಿಶಾಲವಾದ ಪ್ರಪಂಚದ ಮಧ್ಯದಲ್ಲಿ ನೆಲೆಸಿರುವುದನ್ನು ಮನಗಂಡಾಗ, ಆತನಲ್ಲಿ ಸ್ವಾಭಾವಿಕವಾಗಿ, ನಾನು ಯಾರು? ಮತ್ತು ಈ ಪ್ರಪಂಚ ಏನು? ಎಂಬ ಪ್ರಶ್ನೆ ಮೂಡುತ್ತದೆ. ಆತನು ತನ್ನನ್ನೂ ಈ ಪ್ರಪಂಚವನ್ನೂ ತಿಳಿಯಲಿಕ್ಕಾಗಿ ತವಕ ಪಡುತ್ತಾನೆ. ತನ್ನ ನೈಸರ್ಗಿಕತೆಯಲ್ಲಿ ವಿಲೀನವಾಗಿರುವ ದೃಷ್ಟಾಂತಗಳನ್ನು ಓದಲು ಪ್ರಯತ್ನಿಸುತ್ತಾನೆ. ತಾನು ಅನುಭವಿಸು ತ್ತಿರುವ ಸ್ಥಿತ್ಯಂತರಗಳ ನೈಜ ಕಾರಣಗಳನ್ನು ಕಂಡು ಹುಡುಕಲು ಹಂಬಲಿಸುತ್ತಾನೆ. ಸಂಕ್ಷಿಪ್ತದಲ್ಲಿ ಆತನ ಹೃದಯದಲ್ಲಿ ಅನೇಕ ಪ್ರಶ್ನೆಗಳು ಮೂಡಿ ಅವುಗಳ ಉತ್ತರಕ್ಕಾಗಿ ಆತ ಹಾತೊರೆಯುತ್ತಾನೆ. ಆದರೆ ಆ ಉತ್ತರ ಆತನಿಗೆ ತಿಳಿದಿಲ್ಲ. ಪ್ರಸ್ತುತ ಪ್ರಶ್ನೆಗಳು ಕೇವಲ ತಾತ್ವಿಕವಲ್ಲ. ಅವು ಮಾನವನ ನಿಸರ್ಗ ಮತ್ತು ಪರಿಸ್ಥಿತಿಗಳ ಸ್ವಾಭಾವಿಕ ಪರಿ ಣಾಮವಾಗಿದೆ. ಲೋಕದ ಎಲ್ಲ ಜನರಿಗೂ ಒಂದೊಮ್ಮೆ ಈ ಪ್ರಶ್ನೆಗಳನ್ನು ಎದುರಿಸ ಬೇಕಾಗುವುದೆಂದೇ ಹೇಳಬಹುದು. ಕೆಲವರು ಅವುಗಳಿಗೆ ಉತ್ತರ ದೊರೆಯದೆ ಕಂಗಾಲಾ ಗುತ್ತಾರೆ. ಕೆಲವರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಕೆಲವರು ಕಳವಳದಿಂದಲೇ ಜೀವನ ಸಾಗಿಸುತ್ತಾರೆ. ಕೆಲವರು ತಮ್ಮ ನೈಜ ಪ್ರಶ್ನೆಗಳಿಗೆ ಉತ್ತರ ದೊರೆಯದಿರುವುದರಿಂದ ಲೌಕಿಕ ಸುಖಭೋಗಗಳಲ್ಲಿ ತಲ್ಲೀನರಾಗಿ ಮಾನಸಿಕ ಕಳವಳದಿಂದ ಪಾರಾಗಲು ಹವಣಿಸು ತ್ತಾರೆ. ಸಾಧಿಸಲಾಗುವುದನ್ನು ಸಾಧಿಸುವ ಉತ್ಕಟೇಚ್ಛೆಯಿಂದ ಸಾಧಿಸಲಾಗದುದನ್ನು ಅವರು ಮರೆತು ಬಿಡುತ್ತಾರೆ!

ಪ್ರಸ್ತುತ ಪ್ರಶ್ನೆಯನ್ನು ಒಂದೇ ಮಾತಿನಲ್ಲಿ 'ಸತ್ಯಾನ್ವೇಷಣೆ' ಎಂದು ಹೇಳ ಬಹುದು. ಆದರೆ ಅದು ಹಲವು ಪ್ರಶ್ನೆಗಳ ಸಮಾಹಾರವೆಂದು ವಿಶ್ಲೇಷಣೆಯಿಂದ ವ್ಯಕ್ತ ವಾಗುತ್ತದೆ. ಆ ಪ್ರಶ್ನೆಗಳು ಯಾವುವು? ಅವುಗಳನ್ನು ವಿವಿಧ ಮಾತುಗಳಲ್ಲಿ ಅಭಿವ್ಯಕ್ತಗೊ ಳಿಸಬಹುದಾದರೂ ಅನುಕೂಲಕ್ಕಾಗಿ ಅವುಗಳನ್ನು ನಾನು ಈ ಕೆಳಗಿನ ಮೂರು

ಶೀರ್ಷಿಕೆಗಳಲ್ಲಿ ವಿವರಿಸುತ್ತೇನೆ.

1. ಸೃಷ್ಟಿಕರ್ತನ ಅನ್ವೇಷಣೆ

2. ಆರಾಧ್ಯನ ಅನ್ವೇಷಣೆ

3. ಪರಿಣಾಮದ ಅನ್ವೇಷಣೆ

ನನ್ನ ಅಭಿಪ್ರಾಯದಲ್ಲಿ, ಸತ್ಯಾನ್ವೇಷಣೆ ಎಂಬುದು ಪ್ರಸ್ತುತ ಮೂರು ಪ್ರಶ್ನೆಗಳಿಗೆ ಉತ್ತರ ಕಂಡು ಹಿಡಿಯುವ ಪ್ರಯತ್ನವಾಗಿದೆ. ಈ ಮೂರು ಪ್ರಶ್ನೆಗಳನ್ನು ನಾವು ಯಾವ ರೀತಿಯಲ್ಲಿ ವಿವರಿಸಿದರೂ, ವಾಸ್ತವದಲ್ಲಿ ಅವೆಲ್ಲವೂ ಇವುಗಳ ವಿಭಿನ್ನ ರೀತಿಯ ವ್ಯಾಖ್ಯಾನಗಳಾಗಿರಬಹುದು. ಈ ಮೂರು ಶೀರ್ಷಿಕೆಗಳಲ್ಲಿಯೇ ಅವುಗಳನ್ನು ಕ್ರೋಢೀಕರಿಸಬಹುದು.

ಈ ಪ್ರಶ್ನೆಗಳ ಬಗ್ಗೆ ಪ್ರತ್ಯಕ್ಷ ತಿಳುವಳಿಕೆಯೂ ನಮಗಿಲ್ಲ. ಅವುಗಳ ಉತ್ತರವನ್ನು ಬರೆದಿಟ್ಟ ಫಲಕವು ಯಾವುದಾದರೊಂದು ಪರ್ವತ ಶಿಖರದಲ್ಲಿ ನಾಟಿರುವುದನ್ನೂ ನಾವು ಕಂಡಿಲ್ಲ. ಆದರೆ ಪ್ರಶ್ನೆಯಲ್ಲಿಯೇ ಅದರ ಉತ್ತರ ಅಡಕವಾಗಿದೆಯೆನ್ನುವುದೇ ನಿಜ. ಪ್ರಪಂಚವು ಅದರ ವಾಸ್ತವಿಕತೆಯತ್ತ ಸ್ವಯಂ ಬೊಟ್ಟು ಮಾಡುತ್ತದೆ. ಅದು ನಮ್ಮನ್ನು ಖಚಿತ ಜ್ಞಾನದ ತನಕ ತಲಪಿಸದಿರಬಹುದು. ಆದರೆ ಯಾವ ರೀತಿಯಿಂದಲಾದರೂ ನಾವು ನೈಜ ಜ್ಞಾನವನ್ನು ಹೊಂದಿದರೆ ಖಂಡಿತವಾಗಿಯೂ ಇದುವೇ ವಾಸ್ತವಿಕತೆಯಾಗಿದ್ದು ಇನ್ನಾವ ವಾಸ್ತವಿಕತೆಯೂ ಲೋಕದಲ್ಲಿಲ್ಲವೆಂದು ನಮ್ಮ ಹೃದಯವು ಸಾಕ್ಷ್ಯ ವಹಿಸುವಷ್ಟರ ಮಟ್ಟಿಗೆ ಪ್ರಸ್ತುತ ಮಾಹಿತಿಯು ಸ್ಪಷ್ಟ ಮತ್ತು ಖಚಿತವಾಗಿರಬಹುದು.

# ಸೃಷ್ಟಿಕರ್ತನ ಅನ್ವೇಷಣೆ

ನಾವು ಈ ಪ್ರಪಂಚದ ಮೇಲೊಮ್ಮೆ ದೃಷ್ಟಿ ಹಾಯಿಸಿದಾಗ, ಈ ಮಹಾ ಕಾರ್ಯಾಗಾರವನ್ನು ಯಾರು ನಿರ್ಮಿಸಿದರೆಂಬ ಪ್ರಶ್ನೆಯು ನಮ್ಮ ಮನದಲ್ಲಿ ಪ್ರಪ್ರಥಮವಾಗಿ ಮೂಡುತ್ತದೆ. ಅನೇಕ ಅಗೋಚರ ಶಕ್ತಿಗಳು ಈ ಪ್ರಪಂಚದ ಒಡೆಯ ರಾಗಿರಬಹುದೆಂದು ಹಿಂದಿನ ಕಾಲದ ಜನರು ಭಾವಿಸಿದ್ದರು. ಓರ್ವ ದೊಡ್ಡ ದೇವನ ಆಶ್ರಯದಲ್ಲಿ, ಅನೇಕ ಸಣ್ಣ ದೇವತೆಗಳು ಅದನ್ನು ನಿಯಂತ್ರಿಸುತ್ತಿವೆಯೆಂದು ಅನೇಕ ಮಂದಿ ಇಂದಿಗೂ ನಂಬುತ್ತಾರೆ. ಆದರೆ ವೈಜ್ಞಾನಿಕ ಲೋಕವು ಈ ಸಿದ್ಧಾಂತವನ್ನು ಕೈ ಬಿಟ್ಟಿವೆ. ಇಂದು ಈ ಸಿದ್ಧಾಂತವು ನಿಸ್ತೇಜಗೊಂಡಿದೆ. ಪ್ರಗತಿಪರ ಮತ್ತು ನಾಗರಿಕ ರೆಂದು ಸ್ವಯಂ ನಟಿಸುವ ಆಧುನಿಕ ಮಾನವರು ಬಹುದೇವ ವಿಶ್ವಾಸಿಗಳಲ್ಲ. ನಾಸ್ತಿಕ ರಾಗಿದ್ದಾರೆ. ಪ್ರಪಂಚವು ಯೋಜನಾಬದ್ಧವಾಗಿರದೆ ಆಕಸ್ಮಿಕವಾಗಿದೆಯೆಂಬುದು ಅವರ ಅಭಿಪ್ರಾಯವಾಗಿದೆ. ಒಂದು ಘಟನೆಯು ನಡೆಯುವಾಗ ತನ್ನಿಮಿತ್ತ ಇತರ ಅನೇಕ ಘಟನೆಗಳು ಗೋಚರವಾಗುತ್ತದೆ. ಹೀಗೆ ಫಲಹೇತು ಸಂಬಂಧದ ಸುದೀರ್ಘ ಸರಣಿ ಆರಂಭವಾಗುತ್ತವೆ. ಈ ಸರಣಿಯೇ ಪ್ರಪಂಚವನ್ನು ನಡೆಸುತ್ತಿದೆ. ಈ ವಿವರಣೆಗೆ ಎರಡು ಆಧಾರಗಳಿವೆ. 1) ಆಕಸ್ಮಿಕತೆ. 2) ಫಲಹೇತು ಸಂಬಂಧ ನಿಯಮ (Law of Causation).

ಈ ವಿವರಣೆಯಂತೆ, ಸುಮಾರು 200 ಲಕ್ಷ ಕೋಟಿ ವರುಷಗಳ ಹಿಂದೆ ಪ್ರಪಂಚವು ಇರಲಿಲ್ಲ. ಅಂದು ನಕ್ಷತ್ರ ಅಥವಾ ಗ್ರಹಗಳಿರಲಿಲ್ಲ.

ಆದರೆ ವಸ್ತು ಅಸ್ತಿತ್ವದಲ್ಲಿತ್ತು. ಅಂದು ಅದು ಘನ ಸ್ಥಿತಿಯಲ್ಲಿರಲಿಲ್ಲ. ಬಾಹ್ಯಾಕಾಶದಲ್ಲಿ ಪ್ರಾರಂಭಿಕ ಅಣು ಎಲೆಕ್ಟ್ರೋನ್ ಮತ್ತು ಪ್ರೊಟೋನ್‌ಗಳ ರೂಪದಲ್ಲಿ ಏಕಪ್ರಕಾರವಾಗಿ ವ್ಯಾಪಿಸಿತ್ತು. ಅರ್ಥಾತ್ ಪ್ರಪಂಚವು ಅತಿ ಸೂಕ್ಷ್ಮ ಅಣು-ಕಣಗಳಿಂದ ತುಂಬಿತ್ತು. ಅಂದು ಪರಮಾಣು ಸಂಪೂರ್ಣ ಸಮತೋಲನದಲ್ಲಿತ್ತು. ಅವರಲ್ಲಿ ಯಾವ ಸ್ಪಂದನವೂ ಇರಲಿಲ್ಲ. ಗಣಿತಶಾಸ್ತ್ರದ ದೃಷ್ಟಿಯಂತೆ, ಈ ಸಂತುಲಿತ ಸ್ಥಿತಿಯಲ್ಲಿ ಕಿಂಚಿತ್ ವ್ಯತ್ಯಾಸವುಂಟಾದರೆ ಸಂತುಲಿತತೆ ಉಳಿಯಲಾರದು. ಮಾತ್ರವಲ್ಲ ವ್ಯತ್ಯಾಸವು ಹೆಚ್ಚುತ್ತಲೇ ಹೋಗುವುದು. ಈ ಪ್ರಾರಂಭಿಕ ಸ್ಥಿತ್ಯಂತರವನ್ನು ಒಂದು ವೇಳೆ ಅಂಗೀಕ ರಿಸಿದರೆ, ಅನಂತರ ಪ್ರತಿಕ್ರಿಯೆಗಳು ಗಣಿತ ಶಾಸ್ತ್ರದ ಮೂಲಕ ದೃಢೀಕೃತವಾಗುತ್ತದೆ.

ಆ ಪ್ರಕಾರವೇ ಸಂಭವಿಸಿದೆಯೆಂದು ಗಣಿತ ಶಾಸ್ತ್ರಜ್ಞರ ಅಭಿಪ್ರಾಯ. ನಿಶ್ಚಲವಾಗಿರುವ ಸರೋವರಕ್ಕೆ ಕೈ ಹಾಕಿ ಕಲಕಿದಂತೆ ಪರಮಾಣು ಕಣದಲ್ಲಿ ಲಘು ಕಂಪನವುಂಟಾಯಿತು. ಆದರೆ ಪ್ರಪಂಚದ ಪ್ರಶಾಂತ ವಾತಾವರಣದಲ್ಲಿ ಈ ಕೋಲಾಹಲವನ್ನು ಯಾರು ನಿರ್ಮಿಸಿದರು? ಆ ಕುರಿತು ಏನೂ ತಿಳಿಯದು! ಅದೇನಿದ್ದರೂ, ಈ ವ್ಯತ್ಯಾಸವು ಸಂಭವಿಸಿ ಏರುತ್ತಲೇ ಹೋಯಿತು. ತತ್ಪರಿಣಾಮವಾಗಿ, ಪರಮಾಣು ಕುಗ್ಗುತ್ತಾ ವಿವಿಧ ಸ್ಥಳಗಳಲ್ಲಿ ಸಂಚರಿಸಲಾರಂಭಿಸಿತು. ಹೀಗೆ ಸಂಗ್ರಹವಾದ ವಸ್ತುವನ್ನು ನಕ್ಷತ್ರವೆಂದೋ ಗ್ರಹವೆಂದೋ ಹೇಳಲಾಗುತ್ತಿದೆ.

ಪ್ರಪಂಚಕ್ಕೆ ಸಂಬಂಧಿಸಿದ ಈ ವಿವರಣೆಯನ್ನು ವಿಜ್ಞಾನವೇ ನೀಡಿದ್ದರೂ, ವಾಸ್ತವದಲ್ಲಿ ಇದು ನಿರರ್ಥಕ ಮತ್ತು ನಿರಾಧಾರ ವಿವರಣೆಯಾಗಿದೆ. ಸ್ವಯಂ ವಿಜ್ಞಾನಿಗಳಿಗೆ ಅದರಲ್ಲಿ ಸಂತೃಪ್ತಿಯಿಲ್ಲ. ಪ್ರಪಂಚವನ್ನು ಪ್ರಥಮ ಭಾರಿ ಯಾರು ಸಕ್ರಿಯಗೊಳಿಸಿದರೆಂಬ ವಾಸ್ತವಿಕತೆ ಅಜ್ಞಾತವೆಂದು ಈ ವಿವರಣೆ ಸಮ್ಮತಿಸುತ್ತದೆ. ಆದರೂ ಅದು ಪ್ರಪಂಚದ ಪ್ರಥಮ ಕ್ರಿಯಾ ನಿರ್ಮಾತೃವನ್ನು ಕಂಡು ಹಿಡಿದಿದೆಯೆಂದು ಹೆಮ್ಮೆ ಪಡುತ್ತದೆ!

'ಆಕಸ್ಮಿಕ'ವೆಂಬುದು ಆ ಕ್ರಿಯಾಕರ್ತನ ಹೆಸರು! ನಿಶ್ಚಲ ವಸ್ತುವಿನ ವಿನಾ ಪ್ರಪಂಚದಲ್ಲಿ ಬೇರೇನೂ ಇರಲಿಲ್ಲವೆಂದಾದರೆ ಸಂಪೂರ್ಣ ಪ್ರಪಂಚವನ್ನು ಸಕ್ರಿಯಗೊಳಿಸಿದ ವಿಚಿತ್ರ ಹಾಗೂ ಸ್ವಾರಸ್ಯಮಯವಾದ ಈ 'ಆಕಸ್ಮಿಕ' ಎಲ್ಲಿಂದ ಮೊಳಕೆಯೊಡೆಯಿತೆಂದು ಪ್ರಶ್ನಿಸಬೇಕಾಗುವುದು. ವಸ್ತುವಿನ ಒಳ ಹೊರಗುಗಳಲ್ಲಿ ಕಾರಣವು ಅಸ್ತಿತ್ವದಲ್ಲಿಲ್ಲದಂತಹ ಆ ಘಟನೆ ಹೇಗೆ ಸಂಭವಿಸಿತು? ಇದು ಪ್ರಸ್ತುತ ವಿವರಣೆಯ ಸ್ವಾರಸ್ಯಪೂರ್ಣ ವಿರೋಧಾಭಾಸವಾಗಿದೆ. ಪ್ರತಿಯೊಂದು ಘಟನೆಗಿಂತ ಮುಂಚೆ ಅದು ಸಂಭವಿಸಲು ಹೇತುವಾದ ಬೇರೊಂದು ಘಟನೆ ನಡೆದಿರಬೇಕೆಂದು ನಿರ್ಧರಿಸಲಾಗುತ್ತದೆ. ಆದರೆ ಈ ವಿವರಣೆಯು ನೈಜ ಕಾರಣವಿಲ್ಲದ ಘಟನೆಯಿಂದಲೇ ಆರಂಭವಾಗುತ್ತದೆ! ಪ್ರಪಂಚದ ಕುರಿತು ಈ ಆಕಸ್ಮಿಕ ಸಿದ್ಧಾಂತದ ಸೌಧವನ್ನು ಪೂರ್ಣ ನಿರಾಧಾರ ಕಲ್ಪನೆಯ ಬುನಾದಿಯಲ್ಲಿ ಕಟ್ಟಲಾಗಿದೆ.

ಈ ಪ್ರಪಂಚವು ಕೇವಲ ಆಕಸ್ಮಿಕವಾಗಿದ್ದರೆ, ಘಟನೆಗಳು ಇಂದು ಕಾಣಿಸುತ್ತಿರುವಂತಹ ಸ್ಥಿತಿಯನ್ನೇ ಅಂಗೀಕರಿಸಲು ನಿರ್ಬಂಧಿತವಾಗಿದ್ದುವೇ? ಅಲ್ಲಿ ಬೇರೇನಾದರೂ ಸಂಭಾವ್ಯವಾಗಿರಲಿಲ್ಲವೇ? ಗೋಳಗಳು ಪರಸ್ಪರ ಡಿಕ್ಕಿ ಹೊಡೆದು ನಾಶವಾಗಬಹುದಾಗಿರ

ಲಿಲ್ಲವೇ ವಸ್ತುವಿನಲ್ಲಿ ಚಲನೆ ಆರಂಭಗೊಂಡು, ಅದು ಕೇವಲ ಚಲನೆಯಾಗಿ ಉಳಿಯದೆ ಅದರ ಸ್ಥಿತ್ಯಂತರ ಅನಿವಾರ್ಯವಾಗಿತ್ತೇ?. ನಾವು ಇಂದು ಕಾಣುತ್ತಿರುವ ಪ್ರಪಂಚದ ಅಸ್ತಿತ್ವಕ್ಕೆ ಅದು ವಿಸ್ಮಯಕಾರಿ ಮತ್ತು ಅವಿರತ ಕ್ಷಿಪ್ರಯಾನ ಮಾಡ ಬೇಕಾಗಿತ್ತೇ? ನಕ್ಷತ್ರಗಳ ಹುಟ್ಟಿನೊಂದಿಗೆ ಅನಂತ ವಿಶಾಲವಾದ ಶೂನ್ಯಾಕಾಶದಲ್ಲಿ ಸಂಪೂರ್ಣ ಕ್ರಮಬದ್ಧವಾಗಿ ಅವುಗಳನ್ನು ತಿರುಗಿಸಲಾರಂಭಿಸಿದ ಮೇಧಾಶಕ್ತಿ ಯಾವುದು? ಪ್ರಪಂಚದಿಂದ ಅತೀ ದೂರವಿರುವ ಮೂಲೆಯೊಂದರಲ್ಲಿ ಸೌರಮಂಡಲಕ್ಕೆ ಅಸ್ತಿತ್ವ ನೀಡಿದ ಕರ್ಮ ಸಿದ್ಧಾಂತ ಯಾವುದು? ನಮ್ಮ ಭೂಗೋಳದಲ್ಲಿ ಜೀವನವನ್ನು ಸುಗಮ ಗೊಳಿಸಿ ಪ್ರಪಂಚದ ಯಾವೊಂದು ಗೋಳದಲ್ಲಿಯೂ ಈ ತನಕ ಸಂಶೋಧಿಸಲಸಾ ಧ್ಯವಾಗಿರುವ ಅತುಲ್ಯ ಮತ್ತು ವಿಸ್ಮಯಕಾರೀ ಬದಲಾವಣೆಗೆ ಪ್ರೇರಕವಾದ ಸಿದ್ಧಾಂತ ಯಾವುದು? ಒಂದು ವಿಶಿಷ್ಟ ಸಂದರ್ಭದಲ್ಲಿ ನಿರ್ಜೀವ ವಸ್ತುವಿನಿಂದ ಜೀವದ ಉದ್ಭವಕ್ಕೆ ಹೇತುವಾದ ವಿಚಾರವಾದ ಯಾವುದು? ಭೂಮಿಯಲ್ಲಿ ಜೀವನವು ಯಾಕೆ ನಿರಂತರವಾಯಿತು? ಹೇಗೆ ಮತ್ತು ಯಾವ ನಿಯಮ ಪ್ರಕಾರ ಪ್ರತ್ಯಕ್ಷವಾಗುತ್ತಿದೆಯೆಂಬ ಬಗ್ಗೆ ವಿವೇಕ ಪೂರ್ಣ ವ್ಯಾಖ್ಯಾನ ಸಾಧ್ಯವೇ?

ಪ್ರಪಂಚದ ಒಂದು ಸಣ್ಣ ಭಾಗದಲ್ಲಿ ನಮ್ಮ ಜೀವನವನ್ನೂ ನಾಗರಿಕತೆಗೆ ಅಗತ್ಯವಾದ ಸಕಲ ವಸ್ತುಗಳನ್ನೂ ವಿಚಿತ್ರ ರೀತಿಯಲ್ಲಿ ಉತ್ಪಾದಿಸಿದ ನೀತಿ ಸೂತ್ರ ಯಾವುದು? ಪ್ರಸ್ತುತ ಸ್ಥಿತಿಯನ್ನು ನಮಗಾಗಿ ಉಳಿಸಿ ಕಾಪಾಡಿದ ಸಿದ್ಧಾಂತ ಯಾವುದು? ಈ ಎಲ್ಲ ಘಟನೆಗಳೂ ಸುಸೂತ್ರ ಮತ್ತು ಶಿಸ್ತು ಬದ್ಧವಾಗಿ ಸದಾ ಸಂಭವಿಸುತ್ತಿವೆ: ಕೋಟಿಗಟ್ಟಲೆ ವರುಷಗಳಿಂದ ಈ ಪ್ರಕ್ರಿಯೆ ಮುಂದುವರಿಯುತ್ತಿದೆ. ಈ ತನಕ ಅದರಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಇವೆಲ್ಲಕ್ಕೂ ಕೇವಲ ಆಕಸ್ಮಿಕತೆಯು ಸೂಕ್ತ ಕಾರಣವೇ? ಆಕಸ್ಮಿಕವಾಗಿ ಸಂಭವಿಸಿದಂತಹ ಕ್ರಿಯೆಯಲ್ಲಿ ಅನಿವಾರ್ಯತೆಯ ಗುಣ ಎಲ್ಲಿಂದ ಸೇರಿಕೊಂಡಿತು? ಇಷ್ಟೊಂದು ವಿಚಿತ್ರ ರೀತಿಯಲ್ಲಿ ನಿರಂತರ ವಿಕಾಸದ ಪ್ರಕ್ರಿಯೆ ಎಲ್ಲಿಂದ ದೊರೆಯಿತು? ಇದಕ್ಕೆ ನ್ಯಾಯೋಚಿತವಾದ ವ್ಯಾಖ್ಯಾನವನ್ನು ನೀಡು ವುದು ಹೇಗೆ?

ಇದು ಪ್ರಪಂಚವು ಹೇಗೆ ಉದ್ಭವಿಸಿತು ಎಂಬ ಪ್ರಶ್ನೆಯ ಉತ್ತರವಾಗಿತ್ತು. ತರುವಾಯ ಪ್ರಪಂಚವನ್ನು ಯಾರು ನಡೆಸುತ್ತಿದ್ದಾರೆ. ಈ ಅದ್ಭುತ ಹಾಗೂ ಮಹತ್ತರ ಕಾರ್ಯಾಗಾರವನ್ನು ಸಂಪೂರ್ಣ ಕ್ರಮಬದ್ಧವಾಗಿ ಯಾರು ನಡೆಸುತ್ತಿದ್ದಾರೆ ಎಂಬ

ಪ್ರಶ್ನೆ ಹುಟ್ಟಿಕೊಂಡಿತು. ಈ ಕುರಿತು ವಿಜ್ಞಾನವು ನೀಡಿರುವ ವಿವರಣೆಯಲ್ಲಿ, ಪ್ರಪಂಚದ ಸೃಷ್ಟಿಕರ್ತನೆಂದು ನಿರ್ಧರಿಸಿರುವುದನ್ನೇ ಪ್ರಪಂಚದ ವಿಧಿಕರ್ತನೆಂದು ನಿರ್ಧರಿಸಲು ಸಾಧ್ಯವಿಲ್ಲ. ಪ್ರಸ್ತುತ ವಿವರಣೆಯು ಸ್ವಾಭಾವಿಕವಾಗಿ ಈರ್ವರು 'ದೇವ'ರನ್ನು ಅಪೇಕ್ಷಿಸುತ್ತದೆ. ಯಾಕೆಂದರೆ, ಪ್ರಥಮ ಚಲನೆಯನ್ನು 'ಆಕಸ್ಮಿಕ'ವೆಂದು ಹೆಸರಿಸಬಹುದಾದರೂ ಅನಂತರದ ನಿರಂತರ ಚಲನೆಯನ್ನು ಆಕಸ್ಮಿಕವೆನ್ನಲಸಾಧ್ಯ. ಅದರ ವಿವರಣೆಗೆ ಇನ್ನೊಂದು 'ದೇವ'ನನ್ನು ಹುಡುಕಬೇಕಾಗುವುದು!

ಈ ತೊಂದರೆ ನಿವಾರಣೆಗೆ ಫಲಹೇತು ಸಿದ್ಧಾಂತ (Law of causation)ವನ್ನು ಪ್ರತಿಪಾದಿಸಲಾಯಿತು. ಅದರ ಸಾರಾಂಶ ಹೀಗಿದೆ: ಪ್ರಥಮ ಚಲನೆಯ ಬಳಿಕ ಪ್ರಪಂಚದಲ್ಲಿ ಫಲಹೇತು ಸಂಬಂಧದ ಸರಣಿ ಆರಂಭಗೊಂಡತು. ತನ್ನಿಮಿತ್ತ ಸರದಿ ಪ್ರಕಾರ ಎಲ್ಲ ಕ್ರಿಯೆಗಳೂ ನಡೆಯುತ್ತಿವೆ. ಒಂದು ಮಗುವು ಹಲವು ಇಟ್ಟಿಗೆಗಳನ್ನು ಮೇಲೆ ಮೇಲೆ ಯಿರಿಸಿ, ಕೆಳಗಿನ ಸಾಲಿನಿಂದ ಒಂದು ಇಟ್ಟಿಗೆಯನ್ನು ಹಿಡಿದೆಳೆವಾಗ ಇಟ್ಟಿಗೆಗಳು ಸ್ವಯಂ ಒಂದೊಂದೇ ಉರುಳುವಂತೆ! ಪ್ರಪಂಚವಲ್ಲಿ ಗೋಚರವಾಗುವ ಘಟನೆಗಳ ಹೇತುವು ಪ್ರಪಂಚದ ಹೊರಗೆ ಎಲ್ಲಿಯೂ ಅಸ್ತಿತ್ವದಲ್ಲಿಲ್ಲ. ಬದಲಾಗಿ ಅದು ಅಚೇಯ ನಿಯಮಗಳನ್ವಯ ಪೂರ್ವ ಸ್ಥಿತಿಗತಿಗಳ ಅನಿವಾರ್ಯ ಪರಿಣಾಮಗಳಾಗಿವೆ. ಇಂತಹ ಫಲಹೇತುಗಳ ಅವ್ಯಾಹತ ಸರಣಿಯು ಪ್ರಪಂಚದಲ್ಲಿ ಸ್ಥಾಪಿಸಲ್ಪಟ್ಟಿತು. ಮಾತ್ರವಲ್ಲ, ಜಾಗತಿಕ ಇತಿಹಾಸದ ಮೂಲ ರೂಪವು ಭವಿಷ್ಯತ್ ಘಟನಾವಳಿಗಳ ಕುರಿತು ನಿರ್ದಿಷ್ಟ ತೀರ್ಮಾನವನ್ನು ಕೈಗೊಂಡಿದೆ. ಮೂಲ ರೂಪವು ಒಮ್ಮೆ ನಿಗದಿಯಾಗಿರುವುದರಿಂದ, ನಿಸರ್ಗಕ್ಕೆ ಕೇವಲ ಒಂದೇ ಹಾದಿಯಿಂದ ಧ್ಯೇಯದೆಡೆಗೆ ತಲಪಲು ಸಾಧ್ಯವಿತ್ತು. ಅಂದರೆ, ಪ್ರಪಂಚವು ಉದ್ಭವಿಸಿದ ಪ್ರಥಮ ದಿನವೇ ಅದರ ಭಾವೀ ಚರಿತ್ರೆಯೂ ನಿಗದಿಯಾಗಿತ್ತು. ಈ ಸಿದ್ಧಾಂತವನ್ನು ನಿಸರ್ಗದ ಮೂಲಭೂತ ನಿಯಮವಾಗಿ ನಿರ್ಣಯಿಸುವುದೇ, 17ನೇ ಶತಮಾನದ ಮಹಾ ಘಟನೆಯಾಗಿತ್ತು. ಹೀಗೆ ಸಮಗ್ರ ಪ್ರಪಂಚವನ್ನು ಒಂದು ಯಂತ್ರವೆಂದು ಸಮರ್ಥಿಸುವ ಆಂದೋಲನ ಆರಂಭವಾಯಿತು. ಅದು 19ನೇ ಶತಮಾನದ ಕೊನೆಯಲ್ಲಿ ಅದರ ಉತ್ತುಂಗ ಶಿಖರಕ್ಕೇರಿತು. ಅದು ಮನಃಪೂರ್ವಕವಾಗಿ ನಿಸರ್ಗದ ಮಾದರಿಯನ್ನು ನಿರ್ಮಿಸ ಬಯಸಿದ ವಿಜ್ಞಾನಿಗಳ ಮತ್ತು ತಾಂತ್ರಿಕ ತಜ್ಞರ ಕಾಲವಾಗಿತ್ತು. ನಿಸರ್ಗ ವಿಜ್ಞಾನಿಗಳ ಅಂತಿಮ ಧ್ಯೇಯವು ಅವುಗಳನ್ನು ಯಾಂತ್ರಿಕವಾಗಿ ಬದಲಾಯಿಸುವುದೆಂದು ಹೆಲಮ್ ಹೋಲ್ಸ್ (Halem Holtz)

ಅಂದು ಹೇಳಿದ್ದನು. ಪ್ರಸ್ತುತ ಸಿದ್ಧಾಂತದಂತೆ ಪ್ರಪಂಚದ ಎಲ್ಲ ಪ್ರಕ್ರಿಯೆಗಳನ್ನು ವ್ಯಾಖ್ಯಾನಿಸುವುದರಲ್ಲಿ ವಿಜ್ಞಾನಿಗಳು ಅಂದೂ ಯಶಸ್ವಿಯಾಗಿರಲಿಲ್ಲ. ಆದರೆ ಯಾಂತ್ರಿಕ ಸ್ವರೂಪದಲ್ಲಿ ಪ್ರಪಂಚದ ವಿವರಣೆ ಸಾಧ್ಯವೆಂದು ಅವರಿಗೆ ಭರವಸೆಯಿತ್ತು. ಒಂದು ವೇಳೆ ಇನ್ನೂ ಸ್ವಲ್ಪ ಪ್ರಯತ್ನಿಸಿದರೆ, ಇಡೀ ವಿಶ್ವವು ಚಲಿಸುತ್ತಿರುವ ಒಂದು ಸಂಪೂರ್ಣ ಯಂತ್ರವೆಂದು ಸಾಬೀತುಪಡಿಸಬಹುದೆಂದು ಅವರು ಭಾವಿಸಿದ್ದರು.

ಈ ವಿಷಯಗಳಿಗೆ ಮಾನವ ಜೀವನದೊಂದಿಗಿರುವ ಸಂಬಂಧವು ಸುಸ್ಪಷ್ಟವಾಗಿತ್ತು. ಫಲಹೇತು ಸಂಬಂಧದ ಪ್ರತಿಯೊಂದು ಸಮರ್ಥನೆಯೂ ನಿಸರ್ಗದ ಪ್ರತಿಯೊಂದು ಯಶಸ್ವಿ ಯಾಂತ್ರಿಕ ವ್ಯಾಖ್ಯಾನವೂ ಮಾನವನ ನಿರ್ಧಾರ ಸ್ವಾತಂತ್ರ್ಯದ ವಿಶ್ವಾಸವನ್ನು ಅಸಾಧ್ಯಗೊಳಿಸಿತ್ತು. ಯಾಕೆಂದರೆ ಈ ಸಿದ್ಧಾಂತವು ನಿಸರ್ಗವನ್ನು ಸಂಪೂರ್ಣ ಆವರಿಸಿದ್ದರೂ, ಕೇವಲ ಮಾನವ ಜೀವನವನ್ನು ಅದರಿಂದ ಮುಕ್ತಗೊಳಿಸುವುದಕ್ಕೆ ಯಾವೊಂದು ಕಾರಣವೂ ಇಲ್ಲ. ಈ ವಿಚಾರಧಾರೆಯ ನಿಮಿತ್ತ 17 ಮತ್ತು 18ನೇ ಶತಮಾನಗಳ ಯಾಂತ್ರಿಕ ತತ್ವ ಸಿದ್ಧಾಂತ ಅಸ್ತಿತ್ವಕ್ಕೆ ಬಂತು. ನಿರ್ಜೀವ ವಸ್ತುಗಳಂತೆ, ಜೀವಕೋಶ(Living cell)ಗಳೂ ಒಂದು ರೀತಿಯ ರಾಸಾಯನಿಕ ಮೂಲಗಳ ನಿರ್ಮಾಣಗಳೆಂದು ಸಂಶೋಧಿಸಲ್ಪಟ್ಟಾಗ, ನಮ್ಮ ದೇಹ ಮತ್ತು ಮಸ್ತಿಷ್ಕಗಳು ನಿರ್ಮಿಸಲ್ಪಟ್ಟಿರುವ ವಿಶಿಷ್ಟ ಅಂಶಗಳು ಫಲಹೇತು ಸಂಬಂಧ ಸಿದ್ಧಾಂತದ ಮೇರೆಯಿಂದ ಹೊರ ಹೋಗಲು ಕಾರಣವೇನೆಂಬ ಪ್ರಶ್ನೆ ಉದ್ಭವಿಸಿತು. ತನ್ನಿಮಿತ್ತ ಜೀವನವೂ ಕೇವಲ ಒಂದು ಯಂತ್ರವೆಂದು ಊಹಿಸಲಾಯಿತು. ಅತಿ ಭಾವುಕತೆಯಿಂದ ಹಾಗೆಂದೇ ವಾದಿಸಲಾಯಿತು. ಮಾತ್ರವಲ್ಲ ನ್ಯೂಟನ್, ಬೇಕ್ (Bach), ಮೈಕಲ್ ಏಂಜಲೊ (Michel Angelo) ಮುಂತಾದವರ ಮಸ್ತಿಷ್ಕಗಳು ಕೇವಲ ಅಚ್ಚು ಯಂತ್ರದ ಸಂಕೀರ್ಣತೆಯಲ್ಲಿ ವಿಭಿನ್ನವಾಗಿತ್ತೆಂದೂ ಅವುಗಳ ಕಾರ್ಯವು ಹೊರಗಿನ ಪ್ರೇರಕಗಳಿಗೆ ಕೇವಲ ಸಮಗ್ರ ಉತ್ತರ ನೀಡುವುದಾಗಿತ್ತೆಂದೂ ಹೇಳಲಾಯಿತು.

ಆದರೆ ಇಂತಹ ತೀವ್ರ ಹಾಗೂ ನಿರ್ಣಾಯಕ ಫಲಹೇತು ಸಿದ್ಧಾಂತವನ್ನು ವಿಜ್ಞಾನವು ಇಂದು ನಂಬುವುದಿಲ್ಲ. ಆ ಸಿದ್ಧಾಂತವನ್ನು ಅಪೇಕ್ಷಕ ಸಿದ್ಧಾಂತವು ಮಿಥ್ಯೆ (Illusion) ಎಂದು ಕರೆಯುತ್ತದೆ. ಪ್ರಪಂಚದ ಅನೇಕ ಸೋಜಿಗಗಳು, ಮುಖ್ಯವಾಗಿ ಬೆಳಕು, ಗುರುತ್ವಾಕರ್ಷಣೆಗಳು ಯಾಂತ್ರಿಕ ವ್ಯಾಖ್ಯಾನದ ಎಲ್ಲ ಪ್ರಯತ್ನಗಳನ್ನು ವಿಫಲ ಗೊಳಿಸಿದೆಯೆಂದು 19ನೇ ಶತಮಾನದ ಕೊನೆಯಲ್ಲಿಯೇ ವಿಜ್ಞಾನವು ಮನಗಂಡಿತ್ತು.

ನ್ಯೂಟನ್‌ನ ವಿಚಾರಗಳನ್ನೂ ಬೇಕ್‌ನ (Bach) ಭಾವನೆಗಳನ್ನೂ ಮೈಕಲ್‌ನ (Michel Angelo) ತತ್ವಗಳನ್ನೂ ಪುನರಾವರ್ತಿಸಬಲ್ಲ ಯಂತ್ರ ನಿರ್ಮಾಣ ಸಾಧ್ಯವೇ ಎಂಬ ಕುರಿತು ಆ ವೇಳೆಯೂ ಚರ್ಚೆ ನಡೆಯುತ್ತಿತ್ತು. ಆದರೆ ಮೇಣದ ಬತ್ತಿಯ ಬೆಳಕನ್ನೂ ಸೇಬು ಹಣ್ಣಿನ ಬೀಳುವಿಕೆಯೂ ಯಾವೊಂದು ತಂತ್ರದಿಂದಲೂ ಬದಲಿಸಲು ಸಾಧ್ಯವಿಲ್ಲವೆಂದು ವಿಜ್ಞಾನಿಗಳಿಗೆ ಶೀಘ್ರವೇ ಮನವರಿಕೆಯಾಗತೊಡಗಿತು. ಫಲಹೇತು ಸಂಬಂಧಗಳ ಪ್ರೇರಕ ಸರಣಿಗನುಸಾರವಾಗಿ ಪ್ರಥಮ ದಿನದಿಂದ ಈ ತನಕ ನಿರ್ಧಾರವಾಗಿರುವ ಏಕೈಕ ಮಾರ್ಗವನ್ನೇ ನಿಸರ್ಗಕ್ಕೆ ಅವಲಂಬಿಸಲು ಸಾಧ್ಯವೆಂದು ಹಳೆಯ ವಿಜ್ಞಾನವು ದೃಢ ಸ್ವರದಿಂದ ಘೋಷಿಸಿತ್ತು. ಆದರೆ, ಪ್ರಪಂಚದ ಭೂತ ಕಾಲವು ಅದರ ಭವಿಷ್ಯಕ್ಕೆ ಈ ಹಿಂದೆ ಭಾವಿಸಿರುವಷ್ಟು ಕ್ಲಪ್ತವಾಗಿ ಪ್ರೇರಕವಲ್ಲವೆಂದು ವಿಜ್ಞಾನವು ಸ್ವಯಂ ಒಪ್ಪಿಕೊಳ್ಳಬೇಕಾಯಿತು. ಇಂದು ವಿಜ್ಞಾನ ಪ್ರವಾಹವು ನಮ್ಮ ಅಯಾಂತ್ರಿಕ ವಾಸ್ತವಿಕತೆ ಯತ್ತ (Non Mechanical Reality) ಒಯ್ಯುತ್ತಿದೆಯೆಂದು ಆಧುನಿಕ ತಿಳುವಳಿಕೆಗಳ ಆಧಾರದಲ್ಲಿ ಬಹು ಮಂದಿ ವಿಜ್ಞಾನಿಗಳು ಒಪ್ಪಿದ್ದಾರೆ.*

ಪ್ರಪಂಚದ ಉತ್ಪತ್ತಿ ಮತ್ತು ಚಲನೆಯ ಕುರಿತು ವಿಜ್ಞಾನದ ಪ್ರಗತಿಯೊಂದಿಗೆ ಜನ್ಮ ತಾಳಿದ ಪೂರ್ವೋಕ್ತ ಸಿದ್ಧಾಂತಗಳಲ್ಲಿ ಒಂದಕ್ಕೂ ಈ ತನಕ ಸಂದೇಹಾತೀತವಾದ ದೃಢ ವಿಶ್ವಾಸದ ಸ್ಥಾನವನ್ನು ಗಳಿಸಲಾಗಿಲ್ಲ. ನವೀನ ಸಂಶೋಧನೆಗಳು ಅವುಗಳ ಬುನಾದಿಯನ್ನು ಬಲಪಡಿಸುವ ಬದಲಿಗೆ ಇನ್ನಷ್ಟು ದುರ್ಬಲಗೊಳಿಸುತ್ತಿವೆ. ಹೀಗೆ ವಿಜ್ಞಾನವೇ ಆ ಸಿದ್ಧಾಂತವನ್ನು ತಳ್ಳಿ ಹಾಕಿದೆ. ಈಗ ಮಾನವನು ತನ್ನ ಮೂಲ ಸ್ಥಾನದಲ್ಲಿಯೇ ನಿಂತಿದ್ದಾನೆ. ಪ್ರಪಂಚವನ್ನು ಯಾರು ನಿರ್ಮಿಸುತ್ತಾರೆ. ಮತ್ತು ಯಾರು ಅದನ್ನು ನಡೆಸುತ್ತಿದ್ದಾರೆ ಎಂಬ ಪ್ರಶ್ನೆ ಪುನಃ ನಮ್ಮ ಮುಂದೆ ಬರುತ್ತದೆ. ಇದು ಸೃಷ್ಟಿಗೆ ಸಂಬಂಧಿಸಿದ ಜಿಜ್ಞಾಸೆಯ ಪ್ರಶ್ನೆಯಾಗಿತ್ತು. ಮಾನವನು ಎರಡನೆಯದಾಗಿ ತಿಳಿಯಬಯಸುವ ವಿಚಾರವು, 'ನನ್ನ ಆರಾಧ್ಯ ಯಾರು' ಎಂಬುದಾಗಿದೆ. ನಮ್ಮ ಜೀವನದಲ್ಲಿ ಒಂದು ಬಿರುಕು ನಮಗೆ ಪ್ರತ್ಯಕ್ಷವಾಗಿ ಗೋಚರಿಸುತ್ತಿದೆ. ಅದನ್ನು ಹೇಗೆ ತುಂಬುವುದೆಂದು ನಮಗೆ ತಿಳಿಯದು. ಈ ಶೂನ್ಯತಾ ಪ್ರಜ್ಞೆಯನ್ನೇ ನಾನು 'ಆರಾಧ್ಯನ ಅನ್ವೇಷಣೆ' ಎಂದು ಹೇಳುತ್ತೇನೆ. ಈ ಪ್ರಜ್ಞೆ ಎರಡು ದಿಕ್ಕಿನಲ್ಲಿದೆ.

---

** ಕಾರ್ಯಕಾರಣ ಅಥವಾ ಫಲಹೇತು ಸಂಬಂಧದ ಈ ವಿವರಣೆಯ ಬಲು ಪಾಲನ್ನು ಜೇಮ್ಸ್ ಜೀನ್ಸ್‌ರ 'ಮಿಸ್ಟೀರಿಯಸ್ ಯುನಿವರ್ಸ್' ಎಂಬ ಗ್ರಂಥದಿಂದಲೇ ಆರಿಸಲಾಗಿದೆ.*

# ಆರಾಧ್ಯನ ಅನ್ವೇಷಣೆ

ನಮ್ಮ ಅಸ್ತಿತ್ವ ಮತ್ತು ಬಾಹ್ಯಲೋಕದ ಬಗ್ಗೆ ಆಲೋಚಿಸಿದಾಗ ನಮ್ಮ ಅಂತರಾಳದಲ್ಲಿ ಪ್ರಬಲವಾದ ಎರಡು ಭಾವನೆಗಳು ಎದ್ದೇಳುತ್ತವೆ.

1. ಋಣ ಮತ್ತು ಕೃತಜ್ಞತೆಯ ಭಾವನೆ.

2. ದೌರ್ಬಲ್ಯ ಮತ್ತು ಅಸಾಮರ್ಥ್ಯದ ಭಾವನೆ.

ನಮ್ಮ ಜೀವನದ ಯಾವ ರಂಗವನ್ನು ಅವಲೋಕಿಸಿದರೂ ಅದು ಯಾರದೋ ಅಪಾರ ಅನುಗ್ರಹಗಳಿಂದ ಆವರಿಸಲ್ಪಟ್ಟಿದೆಯೆಂದು ವ್ಯಕ್ತವಾಗುತ್ತದೆ. ವಿಧಾತನ ಬಗ್ಗೆ ನಿಸ್ಸೀಮ ಕೃತಜ್ಞತಾಭಾವನೆ ತುಂಬಿ ತುಳುಕುತ್ತದೆ. ನಮ್ಮ ಉದಾತ್ತ ಭಕ್ತ್ಯಾದರಗಳನ್ನು ಆ ಅನುಗ್ರಹದಾತನಿಗೆ ಅರ್ಪಿಸಬಯಸುತ್ತೇವೆ. ನಮ್ಮ ಮಟ್ಟಿಗೆ ಆರಾಧ್ಯನ ಅನ್ವೇಷಣೆಯು ಕೇವಲ ತತ್ವಶಾಸ್ತ್ರವಲ್ಲ, ಬದಲಾಗಿ ಅದಕ್ಕೆ ನಮ್ಮ ಮನೋವೃತ್ತಿಗಳೊಂದಿಗೆ ಅಭೇದ್ಯ ಸಂಬಂಧವಿದೆ. ಅದು ಕೇವಲ ಬಾಹ್ಯ ಸಮಸ್ಯೆಯ ಪರಿಹಾರವಲ್ಲ. ನಮ್ಮ ಅಂತರಾಳ ದಿಂದಲೇ ಎಚ್ಚರಗೊಂಡಿರುವ ಬೇಡಿಕೆಯಾಗಿದೆ. ನಮ್ಮ ಸಂಪೂರ್ಣ ಅಸ್ತಿತ್ವವು ಆ ಪ್ರಶ್ನೆಯ ಉತ್ತರಕ್ಕಾಗಿ ಹಂಬಲಿಸುತ್ತಿದೆ.

ಆಲೋಚಿಸಿ ನೋಡಿರಿ, ನಾನು ಸುಸ್ಥಿರ ವಾಸ್ತವಿಕತೆಯೆಂಬ ನೆಲೆಯಲ್ಲಿ ಪರಪಂಚದಲ್ಲಿ ಜೀವಿಸುತ್ತಿದ್ದೇನೆ. ಆದರೆ ಅದರಲ್ಲಿ ತನ್ನ ಪ್ರಯತ್ನಗಳಿಗೆ ಯಾವ ಪಾತ್ರವೂ ಇಲ್ಲವೆಂಬ ವಾಸ್ತವಿಕತೆಯನ್ನು, ಕಿಂಚಿತ್ ಸಭ್ಯತೆಯಿರುವ ವ್ಯಕ್ತಿಗೆ ನಿರಾಕರಿಸಲು ಸಾಧ್ಯವಿದೆಯೇ? ಅತ್ಯಂತ ನಿಸ್ತುಲವಾದ ಒಂದು ದೇಹವು ಮಾನವನಿಗೆ ದೊರೆತಿದೆ. ಅದಕ್ಕಿಂತ ಉತ್ತಮವಾದ ದೇಹವೊಂದನ್ನು ಊಹಿಸಲು ಆತನಿಗೆ ಸಾಧ್ಯವಿಲ್ಲ. ಆದರೆ ಆ ದೇಹವನ್ನು ಆತನು ನಿರ್ಮಿಸಿಲ್ಲ. ಇತರ ಜೀವಿಗಳಿಗೆ ಲಭ್ಯವಾಗಿಲ್ಲದ ವಿಸ್ಮಯಕಾರಿ ಮಾನಸಿಕ ಸಾಮರ್ಥ್ಯಗಳು ಆತನಿಗೆ ಲಭಿಸಿವೆ. ಆದರೆ ಆ ಸಾಮರ್ಥ್ಯಗಳನ್ನು ಗಳಿಸಲು ಆತ ಯಾವ ಪ್ರಯತ್ನವನ್ನೂ ಮಾಡಿಲ್ಲ. ಆತನಿಗೆ ಅದು ಸಾಧ್ಯವೂ ಅಲ್ಲ. ನಮ್ಮ ಅಸ್ತಿತ್ವವು ಸ್ವಕೀಯವಲ್ಲ. ದಾನವಾಗಿದೆ. ಇದನ್ನು ಯಾರು ದಾನ ಮಾಡಿದರು? ಮಾನವ ಪ್ರಕೃತಿಯು ಈ ಪ್ರಶ್ನೆಯ ಉತ್ತರ ತಿಳಿಯಬಯಸುತ್ತದೆ. ಯಾಕೆಂದರೆ ಆ ಮಹಾ ವಿಧಾತನಿಗೆ ಕೃತಜ್ಞತೆ ಸಲ್ಲಿಸಲು ಆತನಿಗೆ ಸಾಧ್ಯವಾಗಬೇಕು.

ಇನ್ನು ದೇಹದ ಹೊರಗೊಮ್ಮೆ ನೋಡಿರಿ. ನಮ್ಮ ಬಳಿ ನಮ್ಮದೆಂದು ಹೇಳಿಕೊಳ್ಳಲು ಏನೂ ಇಲ್ಲದಂತಹ ಸ್ಥಿತಿಯಲ್ಲಿ ನಾವು ಈ ಲೋಕದಲ್ಲಿ ಜೀವಿಸುತ್ತೇವೆ. ಪ್ರಪಂಚವನ್ನು ನಮ್ಮ ಅಗತ್ಯಕ್ಕೆ ಅನುಕೂಲಗೊಳಿಸುವ ಯಾವೊಂದು ಅಧಿಕಾರವನ್ನೂ ಅದರ ಮೇಲೆ ನಾವು ಹೊಂದಿಲ್ಲ. ನಮಗೆ ಅನೇಕ ಅಗತ್ಯಗಳಿವೆ. ಆದರೆ ಆ ಪೈಕಿ ಯಾವುದನ್ನೂ ಸ್ವಯಂ ಪೂರೈಸಿಕೊಳ್ಳಲು ನಮ್ಮಿಂದ ಸಾಧ್ಯವಿಲ್ಲ. ಅದೇ ವೇಳೆ ನಮ್ಮ ಎಲ್ಲ ಅಗತ್ಯಗಳನ್ನು ಸೂಕ್ತವಾಗಿ ಈಡೇರಿಸುವ ಎಲ್ಲ ವ್ಯವಸ್ಥೆಗಳನ್ನೂ ಇಲ್ಲಿ ಅದ್ಭುತ ರೀತಿಯಲ್ಲಿ ಏರ್ಪಡಿಸಿರುವುದನ್ನು ನಾವು ಕಾಣುತ್ತಿದ್ದೇವೆ. ಮಾನವನು ಜನಿಸಿದಾಗ, ಪ್ರಪಂಚವು ಆತನ ಸೇವೆಗಾಗಿ ಸರ್ವ ಸನ್ನಾಹಗಳಿಂದ ಕಾಯುತ್ತಿರುವಂತೆ ಭಾಸವಾಗುತ್ತದೆ! ಉದಾಹರಣೆಗಾಗಿ ಧ್ವನಿಯನ್ನು ನೋಡೋಣ. ನಮ್ಮ ಅನಿಸಿಕೆ ಮತ್ತು ಅಭಿಪ್ರಾಯಗಳನ್ನು ಧ್ವನಿಯ ಮೂಲಕ ಇತರರಿಗೆ ತಿಳಿಸುತ್ತೇವೆ. ನಮ್ಮ ಹೃದಯದಲ್ಲಿ ಅಂಕುರಿಸುವ ಅಭಿಪ್ರಾಯಗಳು ನಾಲಗೆಯ ಸ್ಪಂದನವಾಗಿ ಮಾರ್ಪಟ್ಟು ಇತರರ ಕಿವಿಗಳಿಗೆ ತಲಪಿ, ಗ್ರಾಹ್ಯ ಧ್ವನಿಗಳ ರೂಪದಲ್ಲಿ ಅವರು ಅದನ್ನು ಆಲಿಸಲು ಹೇಗೆ ಸಾಧ್ಯವಾಯಿತು? ಅದಕ್ಕಾಗಿ ನಮ್ಮ ಒಳ ಹೊರಗುಗಳಲ್ಲಿ ಅನೇಕ ವ್ಯವಸ್ಥೆಗಳನ್ನು ಮಾಡಲಾಗಿದೆ. ನಾವು ವಾಯು ಎಂದು ಹೇಳುವ ಮಾಧ್ಯಮವು ಅವುಗಳಲ್ಲೊಂದು. ನೀರಿನ ಮೇಲ್ಭಾಗದಲ್ಲಿ ಅಲೆಗಳುಂಟಾಗಿ ಚಲಿಸುವಂತೆ ನಾವು ಉಚ್ಚರಿಸುವ ಶಬ್ದಗಳು ಶಬ್ದರಹಿತ ಅಲೆಗಳ ರೂಪದಲ್ಲಿ ಮಂಡಲದಲ್ಲಿ ಸಂಚರಿಸುತ್ತವೆ. ನನ್ನ ಬಾಯಿಯಿಂದ ಹೊರಡುವ ಧ್ವನಿಯು ನಿಮ್ಮ ಬಳಿ ತಲಪಲು ಮಧ್ಯದಲ್ಲಿ ವಾಯುವಿನ ಅಗತ್ಯವಿದೆ. ಈ ಮಾಧ್ಯಮವಿಲ್ಲದಿದ್ದರೆ ನನ್ನ ತುಟಿಯ ಸ್ಪಂದನ ನಿಮಗೆ ಕಾಣಿಸಿದರೂ, ಶಬ್ದ ಕೇಳಿಸಲಾರದು. ಉದಾ: ಮುಚ್ಚಿದ ಗಾಜಿನ ಬಿರಡೆಯೊಳಗೆ ವಿದ್ಯುತ್ ಗಂಟೆಯನ್ನಿರಿಸಿ ಬಾರಿಸಿದರೆ ಅದರ ಸ್ವರವು ನಿಮಗೆ ಸ್ಪಷ್ಟವಾಗಿ ಕೇಳಿಸಬಹುದು: ಆದರೆ ಬುರುಡೆಯೊಳಗಿನ ಗಾಳಿಯನ್ನು ಸಂಪೂರ್ಣವಾಗಿ ಹೊರ ತೆಗೆದು ಗಂಟೆ ಬಾರಿಸಿದರೆ, ಅದರೊಳಗೆ ಘಂಟೆ ಬಾರಿಸುತ್ತಿರುವುದನ್ನು ಕಾಣಬಹುದಾದರೂ ಅದರ ಶಬ್ದ ಸ್ವಲ್ಪವೂ ನಿಮಗೆ ಕೇಳಿಸಲಾರದು. ಯಾಕೆಂದರೆ ಗಂಟೆಯ ಬಾರಿಸುವಿಕೆಯಿಂದಾಗುವ ಸ್ಪಂದನವನ್ನು ಸ್ವೀಕರಿಸಿ ನಿಮ್ಮ ಕಿವಿಗಳಿಗೆ ತಲುಪಿಸಲು ಅದರೊಳಗೆ ವಾಯುವಿಲ್ಲ! ಆದರೆ ಈ ಮಾರ್ಗವೂ ಅಪರ್ಯಾಪ್ತವಾಗಿದೆ. ಯಾಕೆಂದರೆ ವಾಯುವಿನ ಮೂಲಕ ನಮ್ಮ ಧ್ವನಿಯು 5 ಸೆಕೆಂಡಿನಲ್ಲಿ ಕೇವಲ ಒಂದು ಮೈಲು ಸಂಚರಿಸುತ್ತದೆ. ಅರ್ಥಾತ್ ಹತ್ತಿರದ ಪರಿಸರದಲ್ಲಿ ಮಾತನಾಡಲು ವಾಯು

ಸಮರ್ಥವಾಗಿದ್ದರೂ, ನಮ್ಮ ಧ್ವನಿಯನ್ನು ಹೆಚ್ಚು ದೂರಕ್ಕೆ ಸಾಗಿಸಲು ಅದಕ್ಕೆ ಸಾಧ್ಯವಿಲ್ಲ. ಧ್ವನಿಯು ಕೇವಲ ವಾಯುವಿನಿಂದಲೇ ವ್ಯಾಪಿಸುತ್ತಲಿದ್ದರೆ ಅದನ್ನು ಒಂದೆಡೆಯಿಂದ ದೂರದ ಇನ್ನೊಂದೆಡೆ ತಲಪಿಸುವುದು ಅಸಾಧ್ಯವಾಗುತ್ತಿತ್ತು. ಆದರೆ ನಿಸರ್ಗವು ಅದಕ್ಕಾಗಿ ನಮಗೆ ಅತಿ ಕ್ಷಿಪ್ರ ವೇಗದ ಇನ್ನೊಂದು ಸಾಧನವನ್ನೂ ನೀಡಿದೆ. ಅದುವೇ ವಿದ್ಯುತ್ ಅಲೆಗಳು. ಅದು ಸೆಕೆಂಡಿಗೆ ಒಂದು ಲಕ್ಷದ ಎಂಭತ್ತಾರು ಸಾವಿರ ಮೈಲು ವೇಗದಲ್ಲಿ ಚಲಿಸುತ್ತದೆ. ನಿಸ್ತಂತು ಸಂದೇಶಗಳಲ್ಲಿ ಇದೇ ವಿಧಾನ ಬಳಕೆಯಲ್ಲಿದೆ. ಬಾನುಲಿ ಕೇಂದ್ರದಲ್ಲಿ ಜೋಡಿಸಿರುವ ಧ್ವನಿವರ್ಧಕದ ಮುಂದೆ ನಿಂತು ಓರ್ವರು ಭಾಷಣ ಮಾಡುವಾಗ, ಧ್ವನಿವರ್ಧಕವು ಆ ಧ್ವನಿಯನ್ನು ಹೀರಿ, ಅದನ್ನು ವಿದ್ಯುತ್ ಅಲೆಗಳಾಗಿ ಪರಿವರ್ತಿಸಿ, ತಂತಿಗಳ ಮೂಲಕ 'ಪ್ರಕ್ಷೇಪಕ'ಗಳಿಗೆ ತಲಪಿಸುತ್ತವೆ. ಧ್ವನಿ ತಲಪಿದಾಗ ಅದರಲ್ಲಿ ಕಂಪನವುಂಟಾಗಿ ಅದೇ ಕಂಪನವು ವಾತಾವರಣದಲ್ಲಿ ನಿರ್ಮಾಣ ವಾಗುತ್ತದೆ. ಹೀಗೆ 5 ಸೆಕೆಂಡಿನಲ್ಲಿ ಕೇವಲ ಒಂದು ಮೈಲು ಸಂಚರಿಸಬಹುದಾಗಿದ್ದ ಧ್ವನಿಯು, ವಿದ್ಯುತ್ ಅಲೆಗಳಾಗಿ ಮಾರ್ಪಟ್ಟು, ಸೆಕೆಂಡಿಗೆ ಸುಮಾರು ಎರಡು ಲಕ್ಷ ಮೈಲು ಸಂಚರಿಸಿ, ಕ್ಷಣ ಮಾತ್ರದಲ್ಲಿ ಲೋಕದಾದ್ಯಂತ ವ್ಯಾಪಿಸುತ್ತದೆ. ಈ ನಿಸ್ತಂತು ಅಲೆಗಳನ್ನೇ ನಮ್ಮ ರೇಡಿಯೋ ಸೆಟ್‌ನ ಶಬ್ದವಾಹಿನಿ ಯಂತ್ರವು ಸ್ವೀಕರಿಸಿ ದೊಡ್ಡ ಧ್ವನಿಯಲ್ಲಿ ಪುನರಾವರ್ತಿಸುತ್ತದೆ. ಹೀಗೆ ಸಹಸ್ರಾರು ಮೈಲುಗಳಾಚೆಯ ಧ್ವನಿಯು ಕ್ಷಿಪ್ರವಾಗಿ ನಮಗೆ ಕೇಳಿಸುತ್ತದೆ. ಇದು ನಮ್ಮ ಅವಶ್ಯಕತೆಗಾಗಿ ಏರ್ಪಡಿಸಿರುವ ಅಸಂಖ್ಯಾತ ವ್ಯವಸ್ಥೆಗಳಲ್ಲಿ ಕೇವಲ ಒಂದು ಉದಾಹರಣೆಯಾಗಿದೆ. ನಾನು ಅದೊಂದನ್ನೇ ಇಲ್ಲಿ ಸಂಪೂರ್ಣವಾಗಿ ವಿವರಿಸಿಲ್ಲ. ಕೇವಲ ಅದನ್ನು ಸೂಚಿಸಿದ್ದೇನಷ್ಟೆ. ಇಂತಹ ಇನ್ನೂ ಅನೇಕ ಏರ್ಪಾಡುಗಳ ಕುರಿತು ವಿವರಿಸಬೇಕಾದರೆ ಸಾವಿರಗಟ್ಟಲೆ ಪುಟಗಳು ಬೇಕು. ಆದರೂ ಇದರ ವಿವರಣೆ ಪೂರ್ಣವಾಗದು!

ಮಾನವನು ಪ್ರತಿಕ್ಷಣವೂ ಈ ಸೌಲಭ್ಯಗಳನ್ನು ಅನುಭವಿಸುತ್ತಿದ್ದಾನೆ. ಅವುಗಳ ವಿನಾ ಭೂಮಿಯಲ್ಲಿ ಮಾನವೀಯ ಜೀವನ ಮತ್ತು ಮಾನವೀಯ ನಾಗರಿಕತೆಯು ಕುರಿತು ಊಹಿಸಲೂ ಸಾಧ್ಯವಿಲ್ಲ. ಅದನ್ನು ಯಾರು ನೀಡಿದರೆಂದರಿಯಲು ಮಾನವ ತವಕಿಸುತ್ತಾನೆ. ಯಾವುದಾದರೊಂದು ಅನುಗ್ರಹವನ್ನು ಪ್ರತಿ ಕ್ಷಣ ಅನುಭವಿಸುತ್ತಿರುವಾಗ ನಿಸ್ಸೀಮ ಕೃತಜ್ಞತಾ ಭಾವನೆಯು ಆತನ ಹೃದಯಾಂತರಾಳದಲ್ಲಿ ಉಕ್ಕೇರುತ್ತದೆ. ತನ್ನ ವಿಧಾತನನ್ನು ಗುರುತಿಸಿ, ಆತನ ಪವಿತ್ರ ಪಾದಗಳಿಗೆ ಸ್ವಯಂ ಅರ್ಪಿತನಾಗಲು

ಮಾನವನು ಬಯಸುತ್ತಾನೆ. ಉಪಕಾರ ಮಾಡಿದವರ ಉಪಕಾರವನ್ನು ಸ್ಮರಿಸಿ, ಅವರಿಗೆ ಹೃದಯಾಂತರಾಳದಲ್ಲಿ ಸ್ಥಾನ ನೀಡಿ, ಆತನ ಮುಂದೆ ತನ್ನ ಉತ್ತಮ ಭಾವನೆಗಳನ್ನು ಸಮರ್ಪಿಸುವುದು ಮಾನವೀಯ ಸ್ವಭಾವದ ಅತ್ಯುತ್ಕೃಷ್ಟ ಹಂಬಲವಾಗಿದೆ. ಸ್ವ ಜೀವನ ಮತ್ತು ಪ್ರಪಂಚದ ಕುರಿತು ಆಲೋಚಿಸುವ ಪ್ರತಿಯೊಬ್ಬ ಮಾನವನ ಹೃದಯದಲ್ಲಿಯೂ ಪ್ರಸ್ತುತ ಭಾವನೆಯು ಉತ್ಕಟವಾಗಿ ಉಕ್ಕೇರುವುದು. ಹೀಗಿರುತ್ತಾ ಆ ಉತ್ತಮ ಭಾವನೆಗೆ ಯಾವ ಪ್ರತ್ಯುಪಕಾರವೂ ಇರಲಾರದೆಂದು ಹೇಳಬಹುದೇ? ಪ್ರಪಂಚದಲ್ಲಿ ಮಾನವನು ಹೃದಯಾಂತರಾಳದಲ್ಲಿ ಅಲೆಯೆಬ್ಬಿಸುತ್ತಿರುವ ಪ್ರೀತಿಯ ಭಾವನೆಗಳ ಜೋಕಾಲಿಯಾಡಲು ಯಾರೂ ಇಲ್ಲದ ಅನಾಥ ಬಾಲಕನೇ? ಉಪಕಾರ ಲಭ್ಯವಿರುವ, ಆದರೆ ಉಪಕಾರಿಯನ್ನು ಕಾಣದಿರುವ ಹಾಗೂ ಭಾವನೆಗಳಿರುವ ಆದರೆ ಭಾವನೆಗಳನ್ನು ಶಮನಗೊಳಿಸುವ ಯಾವ ಹಾದಿಯೂ ಇಲ್ಲದಿರುವಂತಹ ಒಂದು ಲೋಕವೇ ಇದು?

ಇದು ಆರಾಧನೆಯ ಅನ್ವೇಷಣೆಯ ಒಂದು ಅಂಶ. ಇದಕ್ಕೆ ಇನ್ನೊಂದು ಅಂಶವಿದೆ. ಪ್ರಪಂಚದಲ್ಲಿ ತನಗೊಂದು ಅಭಯ ಮತ್ತು ಅವಲಂಬವಿರಬೇಕೆಂಬುದು ಮಾನವ ಸ್ಥಿತಿಯ ನೈಸರ್ಗಿಕ ಬೇಡಿಕೆಯಾಗಿದೆ. ಕಣ್ಣು ತೆರೆದು ನೋಡಿದರೆ, ನಾವು ಈ ಲೋಕದಲ್ಲಿ ಅತ್ಯಂತ ಅಶಕ್ತ, ದುರ್ಬಲ ಮತ್ತು ಅಸಾಹಯಕ ಸೃಷ್ಟಿಗಳೆಂದು ಭಾಸವಾಗುತ್ತದೆ. ನಮ್ಮ ಭೂಮಿಯು ಸೂರ್ಯನ ಸುತ್ತ ತಿರುಗುತ್ತಿರುವ ಬಾಹ್ಯಾಂತರಿಕ್ಷವನ್ನೊಮ್ಮೆ ಊಹಿಸಿರಿ. ಭೂಮಿಯ ಸುತ್ತಳತೆ 25,000 ಮೈಲುಗಳೆಂದು ನೀವು ತಿಳಿದಿರುವಿರಲ್ಲವೇ? ಪ್ರತಿ 24 ಗಂಟೆಗಳಿಗೊಮ್ಮೆ ಒಂದು ಸುತ್ತು ಪೂರ್ಣಗೊಳ್ಳುವಂತೆ ಭೂಮಿಯು ಅದರ ಅಕ್ಷದಲ್ಲಿ ಬುಗರಿಯಂತೆ ತಿರುಗುತ್ತಿದೆ. ಅಂದರೆ ಗಂಟೆಗೆ ಸುಮಾರು 1000 ಮೈಲು ವೇಗದಲ್ಲಿ ಅದು ಚಲಿಸುತ್ತದೆ. ಅದೇ ವೇಳೆ ಭೂಮಿಯು ಸೂರ್ಯನ ಸುತ್ತ ಹದಿನೆಂಟು ಕೋಟಿ ಅರುವತ್ತು ಲಕ್ಷ ಮೈಲು ದೂರದಲ್ಲಿ ಅತಿ ಶೀಘ್ರವಾಗಿ ಸಂಚರಿಸುತ್ತಲಿದೆ.

ಬಾಹ್ಯಾಂತರಿಕ್ಷದಲ್ಲಿ ಇಷ್ಟೊಂದು ವೇಗದಲ್ಲಿ ಚಲಿಸುತ್ತಿರುವ ಭೂಮಿಯಲ್ಲಿ ನಮ್ಮ ಅಸ್ತಿತ್ವವನ್ನು ಉಳಿಸಲಿಕ್ಕಾಗಿ ಭೂಮಿಯ ವೇಗವನ್ನು ನಿರ್ದಿಷ್ಟ ಪ್ರಮಾಣದಲ್ಲಿ ವ್ಯವಸ್ಥೆಗೊಳಿಸಲಾಗಿದೆ. ಹಾಗಿಲ್ಲದಿರುತ್ತಿದ್ದರೆ, ಮಾನವನು ಭೂಮಿಯ ಮೇಲೆ ವೇಗವಾಗಿ ತಿರುಗುತ್ತಿರುವ ಚಕ್ರದ ಮೇಲಿರಿಸಿದ ಜಲ್ಲಿಕಲ್ಲಿನಂತಾಗುತ್ತಿದ್ದನು. ಭೂಮಿಯ ಗುರುತ್ವಾಕರ್ಷಣೆಯ ಬಲವು ಒಂದೆಡೆಯಿಂದ ನಮ್ಮನ್ನು ಸೆಳೆದಿಡುವಾಗ, ಇನ್ನೊಂದೆಡೆಯಿಂದ

ಮೇಲ್ಭಾಗದ ವಾಯುವು ನಮ್ಮ ಮೇಲೆ ಒತ್ತಡ ಹಾಕುವ ವ್ಯವಸ್ಥೆ ಇದೆ. ದೇಹದ ಪ್ರತಿಯೊಂದು ಚ. ಇಂಚು ಭಾಗದಲ್ಲಿ 15 ಪೌಂಡು ವಾಯುವಿನ ಒತ್ತಡವಿದೆಯೆಂದು ಲೆಕ್ಕ ಹಾಕಲಾಗಿದೆ. ಅಂದರೆ ಓರ್ವ, ಸಾಮಾನ್ಯ ಮಾನವನ ಮೇಲೆ ಸುಮಾರು 280 ಹಂಡ್ರಡ್ ವೈಟ್ ಒತ್ತಡ ಇದೆ! ಇಂತಹ ಅದ್ಭುತ ವ್ಯವಸ್ಥೆಯು, ಅಂತರಿಕ್ಷದಲ್ಲಿ ನಿರಂತರ ಸಂಚರಿಸುತ್ತಿರುವ ಭೂಮಿಯ ನಾನಾ ಭಾಗಗಳಲ್ಲಿ ನಮ್ಮನ್ನು ಉಳಿಸುತ್ತದೆ!

ಇನ್ನು ಸೂರ್ಯನ ಬಗ್ಗೆ ಸ್ವಲ್ಪ ಆಲೋಚಿಸೋಣ. ಸೂರ್ಯನ ವ್ಯಾಸವು 8,65,000 ಮೈಲು. ಅದು ನಮ್ಮ ಭೂಮಿಗಿಂತ 10 ಲಕ್ಷ ಪಟ್ಟು ದೊಡ್ಡದಾಗಿದೆ. ಸೂರ್ಯನು ಉರಿಯುತ್ತಿರುವ ಒಂದು ಅಗ್ನಿ ಸಾಗರ. ಅದರ ಸಮೀಪದಲ್ಲಿ ಯಾವ ವಸ್ತುವೂ ಘನ ರೂಪದಲ್ಲಿ ಉಳಿಯಲಾರದು. ಭೂಮಿ ಮತ್ತು ಸೂರ್ಯನ ಅಂತರವು ಸುಮಾರು ಒಂಭತ್ತೂವರೆ ಕೋಟಿ ಮೈಲುಗಳಷ್ಟಿವೆ. ಅವುಗಳ ಮಧ್ಯಂತರವು ಇದರ ಅರ್ಧದಷ್ಟಿರುತ್ತಿದ್ದರೆ, ಸೂರ್ಯನ ತಾಪದಿಂದ ಕಾಗದವು ಸುಟ್ಟು ಹೋಗುತ್ತಿತ್ತು. ಎರಡು ಲಕ್ಷದ ನಲ್ವತ್ತು ಸಾವಿರ ಮೈಲು ದೂರದಲ್ಲಿದ್ದರೆ ಭೂಮಿಯು ಕರಗಿ ಆವಿಯಾಗಿ ಹೋಗುತ್ತಿತ್ತು. ಆದರೆ ಈ ಸೂರ್ಯನಿಂದಾಗಿಯೇ ಭೂಮಿಯ ಎಲ್ಲಾ ಜೀವ ಜಾಲಗಳೂ ಅಸ್ತಿತ್ವದಲ್ಲಿವೆ. ಅದಕ್ಕಾಗಿ ಅದನ್ನು ಒಂದು ನಿರ್ದಿಷ್ಟ ದೂರದಲ್ಲಿ ನಿಲ್ಲಿಸಲಾಗಿದೆ. ಈ ಸ್ಥಾನದಿಂದ ಸೂರ್ಯನು ದೂರ ಹೋದರೆ ಭೂಮಿಯು ಹಿಮಗಡ್ಡೆಯಂತೆ ಗಟ್ಟಿಯಾಗುವುದು. ಅಥವಾ ಒಂದು ವೇಳೆ ಹತ್ತಿರ ಬಂದರೆ ಜೀವ ಜಾಲಗಳೆಲ್ಲವೂ ಸುಟ್ಟು ಬೂದಿಯಾದೀತು.

ಇನ್ನು ಈ ಮಹಾ ವಿಸ್ತಾರ ಮತ್ತು ಅದನ್ನು ನಿಯಂತ್ರಿಸುತ್ತಿರುವ ಆಕರ್ಷಣ ಶಕ್ತಿಯ ಕುರಿತು ಆಲೋಚಿಸಿ ನೋಡಿರಿ: ಈ ವಿಶ್ವವು ಅತೀ ವಿಶಾಲವಾದ ಒಂದು ಯಂತ್ರಾಗಾರ. ಅದರ ವಿಶಾಲತೆಯನ್ನು ಭೂಗೋಳ ಶಾಸ್ತ್ರಜ್ಞರು, ನಿಮಿಷಕ್ಕೆ 1,86,000 ಮೈಲು ವೇಗದ ಬೆಳಕಿಗೆ ವಿಶ್ವವನ್ನು ಒಂದು ಬಾರಿ ಸುತ್ತಲು ನೂರು ಕೋಟಿ ವರ್ಷಗಳು ಬೇಕು ಎಂದು ಲೆಕ್ಕ ಹಾಕಿದ್ದಾರೆ! ನಮ್ಮ ಭೂಮಿಯನ್ನೊಳಗೊಂಡಿರುವ ಸೌರಮಂಡಲವು ತೋರಿಕೆಗೆ ಬಹಳ ದೊಡ್ಡದಾಗಿದ್ದರೂ ಅಖಿಲ ವಿಶ್ವದೊಡನೆ ಹೋಲಿಸಿದಾಗ ತೀರಾ ನಗಣ್ಯವಾಗಿದೆ. ಅದಕ್ಕಿಂತ ಎಷ್ಟೋ ಪಾಲು ದೊಡ್ಡ ಲಕ್ಷಗಟ್ಟಲೆ ನಕ್ಷತ್ರಗಳು ಅನಂತ ವಿಶಾಲವಾದ ವಿಶ್ವದಲ್ಲಿ ವ್ಯಾಪಿಸಿಕೊಂಡಿವೆ. ಅವುಗಳಲ್ಲಿ ಕೆಲವು ನಮ್ಮ ಸೌರ ಮಂಡಲವನ್ನು ಹಾಗೆಯೇ ನುಂಗಿ ಬಿಡುವಷ್ಟು ದೊಡ್ಡದಾಗಿವೆ. ಈ ಅಸಂಖ್ಯ

ಲೋಕಗಳನ್ನು ನಿಯಂತ್ರಿಸುತ್ತಿರುವ ಆಕರ್ಷಣ ಬಲವೆಂಬ ಮಹಾ ಅದ್ಭುತವನ್ನೊಮ್ಮೆ ಊಹಿಸಿ ನೋಡಿರಿ. ಸೂರ್ಯನು ಭೂಮಿಯನ್ನು ಎಂತಹ ಪ್ರಬಲ ಶಕ್ತಿಯಿಂದ ತನ್ನೆಡೆಗೆ ಸೆಳೆಯುತ್ತಿದೆ! ಅಂತರಿಕ್ಷದ ಅನಂತತೆಯಲ್ಲಿ ಬಿದ್ದು ನಾಶವಾಗದಂತೆ ಅದನ್ನು ಕಾಪಾಡುತ್ತಿದೆ! ಈ ಅದೃಶ್ಯ ಶಕ್ತಿಯನ್ನು ಹೀಗೆ ಗ್ರಹಿಸಬಹುದು. ಇದೇ ಅಗತ್ಯಕ್ಕಾಗಿ ಭೂಮಿಯನ್ನು ಯಾವುದಾದರೂ ಭೌತಿಕ ಉಪಕರಣಗಳಿಂದ ಕಟ್ಟಿ ಹಾಕುತ್ತಿದ್ದರೆ, ಹುಲ್ಲಿನ ಕದಿಕೆಯನ್ನು ಕಟ್ಟಿದಂತೆ ಇಡೀ ಭೂಗೋಳವೇ ಲೋಹ ಸರಳುಗಳಿಂದ ಸಂಪೂರ್ಣ ಮುಚ್ಚಲ್ಪಡುತ್ತಿತ್ತು.

ನಮ್ಮ ಜೀವನವು ಆಮೂಲಾಗ್ರವಾಗಿ ಇಂತಹ ಶಕ್ತಿಗಳ ಔದಾರ್ಯ ಮತ್ತು ದಾಕ್ಷಿಣ್ಯವನ್ನು ಅವಲಂಬಿಸಿದೆ. ಅವುಗಳ ಮೇಲೆ ನಮಗೆ ಯಾವ ಅಧಿಕಾರವೂ ಇಲ್ಲ. ಮಾನವ ಜೀವನಕ್ಕಾಗಿ ಈ ಲೋಕದಲ್ಲಿ ಏರ್ಪಡಿಸಿರುವ ಸನ್ನಾಹಗಳು ಅತ್ಯುಚ್ಚ ಪ್ರಮಾಣದಲ್ಲಿ ನಡೆಯುತ್ತಿವೆ. ಅದರ ಹೊರತು ಜೀವನವನ್ನು ಊಹಿಸಲೂ ಸಾಧ್ಯವಿಲ್ಲ. ಅವುಗಳನ್ನು ಸಾಕ್ಷಾತ್ಕರಿಸುವುದಕ್ಕೆ ಅತ್ಯಮೂಲ್ಯ ಮತ್ತು ಅಸಾಮಾನ್ಯ ನಿಯಂತ್ರಣ ಶಕ್ತಿಯ ಅಗತ್ಯವಿದೆ. ಆ ಶಕ್ತಿಯನ್ನು ಸ್ವಯಂ ಉತ್ಪಾದಿಸುವ ಕುರಿತು ಮಾನವನಿಗೆ ಊಹಿಸಲೂ ಸಾಧ್ಯವಿಲ್ಲ. ಪ್ರಾಪಂಚಿಕ ವಸ್ತುಗಳ ಕಾರ್ಯ ವಿಧಾನವನ್ನು ನಿರ್ಣಯಿಸುವ ಮಾತಂತಿರಲಿ. ಅವುಗಳ ನಿಯಂತ್ರಣವೂ ಮಾನವನಿಂದ ಸಾಧ್ಯವಿಲ್ಲ. ಪ್ರಪಂಚದ ಅತಿ ಕ್ಷುಲ್ಲಕ ಶಕ್ತಿಗಳು ಅಸಹಕಾರ ತೋರಿದರೂ ತನಗೆ ಭೂಮಿಯಲ್ಲಿ ಉಳಿಯಲು ಸಾಧ್ಯವೇ ಇಲ್ಲವೆಂದು ಮಾನವನು ಅರಿಯುತ್ತಾನೆ. ಹೀಗಿರುತ್ತಾ ಭೂಮಿಯಲ್ಲಿ ನಾಗರಿಕ ಜೀವನ ವನ್ನು ಕಟ್ಟಿ ಬೆಳೆಸುವ ಕುರಿತು ಬೇರೆ ಹೇಳಬೇಕಾಗಿಲ್ಲವಷ್ಟೆ.

ಇಂತಹ ಪ್ರಪಂಚದಲ್ಲಿ ಮಾನವನು ತನ್ನ ತುಚ್ಛ ಅಸ್ತಿತ್ವವನ್ನು ಸಮುದ್ರದ ಅಲೆಗಳ ಮಧ್ಯೆ ಸಿಲುಕಿ ಮುಳುಗಿ ಸಾಯುವುದರಿಂದ ಉಳಿಯಲು ಪೇಚಾಡುತ್ತಿರುವ ಇರುವೆಗಿಂತಲೂ ಅಸಹಾಯಕವೆಂದು ಭಾವಿಸುತ್ತಾನೆ. ಈ ದಡ ಕಾಣದ ಪ್ರಪಂಚದಲ್ಲಿ ತನಗೆ ಆಶ್ರಯವಾಗಿ ಓರ್ವನು ದೊರೆಯುತ್ತಿದ್ದರೆ ಎಂದು ಆತ ಹಂಬಲಿಸುತ್ತಾನೆ! ತನಗೆ ಸಂಪೂರ್ಣ ರಕ್ಷಣೆ ಮತ್ತು ಶಾಂತಿ ದೊರೆಯುವ ಅಭಯ ಕೇಂದ್ರವನ್ನು ಆತ ಹುಡುಕುತ್ತಾನೆ!

ಪ್ರಸ್ತುತ ಎರಡು ಭಾವನೆಗಳಿಗೆ, 'ಆರಾಧ್ಯನ ಅನ್ವೇಷಣೆ' ಎಂಬ ಶೀರ್ಷಿಕೆಯನ್ನು ನಾನು ನೀಡಿದ್ದೇನೆ. ಆರಾಧ್ಯನ ಅನ್ವೇಷಣೆಯು ವಾಸ್ತವದಲ್ಲಿ ಒಂದು ನೈಸರ್ಗಿಕ

ಭಾವನೆಯಾಗಿದೆ. ಮಾನವನ ಪ್ರೀತಿ ವಿಶ್ವಾಸಗಳ ಕೇಂದ್ರವಾಗಬಲ್ಲ ಅಸ್ತಿತ್ವದ ಅನ್ವೇಷಣೆಯೇ ಅದರ ತಿರುಳು. ಇಂದು ಪ್ರಸ್ತುತ ಬೇಡಿಕೆಗಳಿಗೆ ಪರಿಹಾರವಾಗಿ ಜನತೆ, ಸಮುದಾಯ, ರಾಷ್ಟ್ರ ಮುಂತಾದುವುಗಳನ್ನು ಸೂಚಿಸಲಾಗುತ್ತದೆ. "ನಿನ್ನ ಪ್ರೀತಿ ವಿಶ್ವಾಸ ಕೇಂದ್ರವೆಂಬ ಸ್ಥಾನವನ್ನು ಸ್ವಜನತೆಗೂ, ಸ್ವ ಸಮುದಾಯಕ್ಕೂ ರಾಷ್ಟ್ರಕ್ಕೂ ನೀಡು. ಅವುಗಳೊಂದಿಗಿನ ಸಂಬಂಧವನ್ನು ಸರ್ವಾವಲಂಬವಾಗಿ ಅಂಗೀಕರಿಸು" ಇದು ನವನಾಗರಿಕತೆಯ ಸಾರೋಪದೇಶ. ಪ್ರಸ್ತುತ ವಸ್ತುಗಳನ್ನು 'ಆರಾಧ್ಯ'ನೆಂಬ ಹೆಸರಿನಲ್ಲಿ ಸೂಚಿಸದಿರಬಹುದು. ಆದರೆ ಜೀವನದಲ್ಲಿ ಅವುಗಳಿಗೆ ನೀಡಲಾಗಿರುವ ಸ್ಥಾನವು ಬಹುವಂಶ ಆರಾಧ್ಯನಿಗೆ ಇರಬೇಕಾದ ಸ್ಥಾನವೇ ಆಗಿದೆ. ಇಂತಹ ವಸ್ತುಗಳಿಗೆ ಆರಾಧ್ಯನ ಸ್ಥಾನ ನೀಡುವುದೆಂದರೆ ಬಾಳ ಸಂಗಾತಿಯ ಅಗತ್ಯವಿರುವ ಓರ್ವನಿಗೆ ಶಿಲಾಪ್ರತಿಮೆಯನ್ನು ನೀಡುವುದಕ್ಕೆ ಸಮಾನವಾಗಿದೆ. ಮಾನವನ ಅಂತರಾಳದಲ್ಲಿ ಒಡಮೂಡುವ ಅನ್ವೇಷಣಾ ಪ್ರಜ್ಞೆಯ ಪ್ರೇರಕಗಳು ಮಾನವೀಯ ಮನಃಶಾಸ್ತ್ರದಲ್ಲಿ ಬಹಳ ಗಾಢವಾಗಿ ವ್ಯಾಪಿಸಿದೆಯೆಂಬುದು ದಿಟ. ಅಖಿಲ ಪ್ರಪಂಚವನ್ನು ವ್ಯಾಪಿಸುವಂತಹ ಅಸ್ತಿತ್ವವನ್ನು ಮಾನವನು ಅರಸುತ್ತಾನೆ. ಆತನ ಅಭಿಲಾಷೆಯ ಉತ್ತರವು ಯಾವುದಾದರೊಂದು ಭೌಗೋಳಿಕ ಮಿತಿಯಲ್ಲಿ ಆತನಿಗೆ ದೊರೆಯಲಸಾಧ್ಯ. ಹೆಚ್ಚೆಂದರೆ ಅದು ಒಂದು ಸಾಮೂಹಿಕ ವ್ಯವಸ್ಥೆಗೆ ಸ್ವಲ್ಪಂಶ ನೆರವಾಗಬಹುದಾದರೂ ಮಾನವೀಯ ಭಾವನೆಗಳನ್ನು ಸಂತೃಪ್ತಗೊಳಿಸಲು ಅದು ಪರ್ಯಾಪ್ತವಲ್ಲ. ಅದಕ್ಕೆ ಒಂದು ಸಮಗ್ರ ಅಸ್ತಿತ್ವದ ಅಗತ್ಯವಿದೆ. ಮಾನವನ ಪ್ರೀತಿ ವಿಶ್ವಾಸಗಳ ಕೇಂದ್ರವಾಗಿರಲು ಆಕಾಶ-ಭೂಮಿಗಳ ವಿಧಾಯಕ ಅಸ್ತಿತ್ವದ ಅಗತ್ಯವಿದೆ. ಪ್ರಪಂಚದ ಮೇಲೆ ಸಂಪೂರ್ಣ ಅಧಿಕಾರವನ್ನು ಹೊಂದಿರುವ ಶಕ್ತಿಯ ಅಭಯವನ್ನು ಮಾನವನು ಹುಡುಕುತ್ತಾನೆ. ಅಂತಹ ಅಸ್ತಿತ್ವವನ್ನು ಗುರುತಿಸದೆ ಆ ಬಿರುಕು ಉಳಿದೇ ತೀರುವುದು. ಬೇರಾವ ವಸ್ತುವಿನಿಂದಲೂ ಅದನ್ನು ತುಂಬಲು ಸಾಧ್ಯವಿಲ್ಲ!

# ಪರಿಣಾಮದ ಅನ್ವೇಷಣೆ

ಮಾನವನ ಅಂತಿಮ ಪರಿಣಾಮದ ಅನ್ವೇಷಣೆಯು ಸತ್ಯಾನ್ವೇಷಣೆಯ ಮೂರನೆಯ ಘಟಕವಾಗಿದೆ. ಮಾನವನು ತಾನು ಎಲ್ಲಿಂದ ಬಂದೆ, ಎಲ್ಲಿಗೆ ಹೋಗುತ್ತೇನೆಂದು ತಿಳಿಯಲು ಹಂಬಲಿಸುತ್ತಾನೆ. ಅದರ ಜ್ಞಾನವು ಎಲ್ಲಿ ದೊರೆಯುವುದೆಂದು ಆತನಿಗೆ ತಿಳಿಯದು, ತನ್ನಲ್ಲಿ ಅಂತರ್ಲೀನವಾಗಿರುವ ನೈತಿಕ ಮತ್ತು ಮಾನವೀಯ ಪ್ರಶ್ನೆಗಳು ಭೂಮಿಯಲ್ಲಿ ಶೋಚನೀಯವಾಗಿ ದಮನಿಸಲ್ಪಡುತ್ತಿವೆ. ತನಗೆ ಮೆಚ್ಚುಗೆಯಾಗುವಂತಹ ಒಂದು ಲೋಕವನ್ನು ಸಾಧಿಸಲು ಸಾಧ್ಯವಿಲ್ಲವೇ ಎಂಬ ಪ್ರಶ್ನೆ ಆತನ ಹೃದಯದಲ್ಲಿ ಏಳುತ್ತದೆ. ಇಂತಹ ಪ್ರಶ್ನೆಗಳು ಮಾನವನ ಹೃದಯದಲ್ಲಿ ಹೇಗೆ ಮೂಡುತ್ತವೆ. ಪ್ರಪಂಚದ ಶಿಕ್ಷಣವು ಪ್ರಸ್ತುತ ಪ್ರಶ್ನೆಗಳನ್ನು ಆತನಲ್ಲಿ ಹೇಗೆ ರೂಪಿಸುತ್ತದೆಂಬ ಬಗ್ಗೆ ಸ್ವಲ್ಪ ವಿವರಿಸುವುದು ಸೂಕ್ತವೆನಿಸುತ್ತದೆ.

ಜೀವ ಶಾಸ್ತ್ರಜ್ಞರ ಅಭಿಪ್ರಾಯದಂತೆ ಮಾನವನು ತನ್ನ ಇಂದಿನ ರೂಪದಲ್ಲಿ ಮೂರು ಲಕ್ಷ ವರ್ಷಗಳಿಂದ ಈ ಭೂಮಿಯಲ್ಲಿ ವಾಸಿಸುತ್ತಿದ್ದಾನೆ. ಇದಕ್ಕೆ ಹೋಲಿಸಿದಾಗ ಪ್ರಪಂಚದ ಪ್ರಾಯವು ಇನ್ನೂ ಅಧಿಕವಿದೆ. ಅರ್ಥಾತ್ 200 ಲಕ್ಷ ಕೋಟಿ ವರ್ಷ. ಅದಕ್ಕಿಂತ ಮುಂಚೆ ಪ್ರಪಂಚವು ವಿದ್ಯುತ್ ಕಣಗಳ ಪದರವಾಗಿತ್ತು. ಅನಂತರ ಅದರಲ್ಲಿ ಚಲನೆ ಆರಂಭಗೊಂಡಿತು. ಪರಮಾಣುಗಳು ಪರಸ್ಪರ ಸೇರಿ ವಿವಿಧ ಸ್ಥಳಗಳಲ್ಲಿ ಜಮೆಯಾಗಲಾರಂಭಿಸಿದುವು. ಈ ರೀತಿ ಜಮೆಯಾದ ಅಣು ಸಮೂಹಗಳನ್ನು ನಕ್ಷತ್ರ, ಗ್ರಹ, ಉಪಗ್ರಹಗಳೆಂದು ಕರೆಯಲಾಗುತ್ತದೆ. ಈ ಅಣು ಸಮೂಹಗಳು ಭೀಕರ ಸ್ವರೂಪದ ವಾಯುಗೋಳಗಳಾಗಿ ಅಜ್ಞಾತ ಕಾಲದ ತನಕ ವಾತಾವರಣದಲ್ಲಿ ಸಂಚರಿಸುತ್ತಿದ್ದುವು. ಸುಮಾರು 200 ಕೋಟಿ ವರುಷಗಳ ಹಿಂದೆ ಪ್ರಪಂಚದ ಯಾವುದೋ ದೊಡ್ಡ ನಕ್ಷತ್ರವೊಂದು ವಾತಾವರಣದಲ್ಲಿ ಪಯಣಿಸುತ್ತಾ ಸೂರ್ಯನ ಸಮೀಪಕ್ಕೆ ತಲಪಿತು. ಅಂದು ಸೂರ್ಯವು ಇಂದಿಗಿಂತ ಎಷ್ಟೋ ಹಿರಿದಾಗಿತ್ತು. ಚಂದ್ರನ ಆಕರ್ಷಣ ಬಲದಿಂದ ಸಮುದ್ರದಲ್ಲಿ ಬೃಹತ್ ಅಲೆಗಳೇಳುವಂತೆ ಪ್ರಸ್ತುತ ನಕ್ಷತ್ರದ ಆಕರ್ಷಣ ಬಲದಿಂದ ಸೂರ್ಯನಲ್ಲಿ ಭಾರೀ ಕೋಲಾಹಲವುಂಟಾಯಿತು. ಪ್ರಬಲ ಕಂಪನಗಳುಂಟಾದುವು. ಕ್ರಮೇಣ ಅದು ದೊಡ್ಡದಾಗುತ್ತಾ ಬಂತು. ಸೂರ್ಯನಿಂದ ದೂರವಾಗುವುದಕ್ಕಿಂತ ಮುಂಚೆಯೇ ಅದರ ಆಕರ್ಷಣ ಶಕ್ತಿಯು ಅತಿ

ಪ್ರಬಲಗೊಂಡಿತು. ತನ್ನಿಮಿತ್ತ ಸೂರ್ಯನ ಶಕ್ತಿಯುತವಾದ ಪ್ರಸ್ತುತ ವಾಯು ತರಂಗಗಳ ಒಂದು ಭಾಗವು ಭಯಂಕರ ಸ್ಫೋಟದೊಂದಿಗೆ ಸೂರ್ಯನಿಂದ ಸಿಡಿದು ಅಂತರಿಕ್ಷದಲ್ಲಿ ದೂರ ಹೋಗಿ ಬಿತ್ತು. ಹೀಗೆ ಬೇರ್ಪಟ್ಟ ಭಾಗವು ಅನಂತರ ತಣಿದು ಸೌರ ಮಂಡಲದ ಉಪಗ್ರಹವಾಗಿ ಮಾರ್ಪಟ್ಟಿತು. ಈಗ ಇವೆಲ್ಲವೂ ಸೂರ್ಯನ ಸುತ್ತ ತಿರುಗುತ್ತಿದೆ. ನಮ್ಮ ಭೂಮಿಯೂ ಆ ಉಪಗ್ರಹಗಳಲ್ಲೊಂದಾಗಿದೆ.

ಭೂಮಿಯು ಆರಂಭದಲ್ಲಿ ಒಂದು ಬೆಂಕಿಯ ಕೆಂಡದಂತೆ ಸೂರ್ಯನ ಸುತ್ತಲೂ ತಿರುಗುತ್ತಿತ್ತು. ಆದರೆ ಅಂತರಿಕ್ಷದಲ್ಲಿ ಸದಾ ತಾಪವನ್ನು ಹೊರಗೆಡಹುತ್ತಿದ್ದುದ ರಿಂದ ಅದು ಕ್ರಮೇಣ ತಣಿಯಲಾರಂಭಿಸಿತು. ಕಟ್ಟಕಡೆಗೆ ಅದು ಸಂಪೂರ್ಣವಾಗಿ ತಣಿದರೂ, ಸೂರ್ಯ ತಾಪವು ಅದರ ಮೇಲೆ ಬೀಳುತ್ತಲಿತ್ತು. ತನ್ನಿಮಿತ್ತ ನೀರಾವಿಯು ಮೇಲೆದ್ದು ಕರಿಮೋಡಗಳಾಗಿ ಮಾರ್ಪಟ್ಟು ಮೇಲ್ಭಾಗದಲ್ಲಿ ದಟ್ಟವಿಸಿತು. ತರುವಾಯ ಮಳೆಯಾಗಿ ಸುರಿಯಿತು. ಭೂಮಿಯಲ್ಲಿ ನೀರು ತುಂಬಿತು. ಭೂಮಿಯ ಮೇಲ್ಭಾಗವು ತಣಿದಿದ್ದರೂ, ಒಳಭಾಗವು ಆಗಲೂ ಬಿಸಿಯಾಗಿತ್ತು. ತನ್ನಿಮಿತ್ತ ಭೂಮಿಯು ಕುಗ್ಗಿ ಸಂಕುಚಿಸಲಾರಂಭಿಸಿತು. ಇದರಿಂದಾಗಿ ಅದರ ಒಳಭಾಗದಲ್ಲಿರುವ ಬಿಸಿ ಅನಿಲಗಳ ಮೇಲೆ ಒತ್ತಡ ಬಿದ್ದು ಅವು ಬಹಿರ್ಗಮಿಸಲು ನೂಕು ನುಗ್ಗಲು ಪ್ರಾರಂಭಿಸಿದುವು. ಪದೇ ಪದೇ ಭೂಮಿ ಬಿರಿಯಲಾರಂಭಿಸಿತು. ಅಲ್ಲಲ್ಲಿ ಭಾರೀ ಬಿರುಕುಗಳು ನಿರ್ಮಾಣಗೊಂಡುವು. ಹೀಗೆ ಪ್ರಳಯ, ಭೀಕರ ಕಂಪನ, ಅಗ್ನಿಪರ್ವತ ಸ್ಫೋಟ ಮುಂತಾದ ಘಟನೆಗಳು ಹಲವು ವರ್ಷಗಳ ತನಕ ನಡೆದುವು. ಈ ಕಂಪನಗಳ ನಿಮಿತ್ತ ಭೂಮಿಯ ಕೆಲವು ಭಾಗಗಳು ಉಬ್ಬಿದುವು; ಕೆಲವು ಭಾಗಗಳು ತಗ್ಗಿದುವು. ತಗ್ಗಿದ ಪ್ರದೇಶಗಳಲ್ಲಿ ನೀರು ತುಂಬಿ ಸಮುದ್ರಗಳೆನಿಸಿಕೊಂಡುವು. ಉಬ್ಬಿದ ಭಾಗವು ನೆಲವಾಯಿತು. ಕೆಲವೊಮ್ಮೆ ಈ ಉಬ್ಬುವಿಕೆಗಳು ದೊಡ್ಡ ಗೋಡೆಗಳಂತಾಗಿ ಆರಂಭದ ಪರ್ವತಗಳೆನಿಸಿದುವು.

ಭೂಗರ್ಭ ಶಾಸ್ತ್ರಜ್ಞರ ಅಭಿಪ್ರಾಯದಂತೆ, ಭೂಮಿಯಲ್ಲಿ ಪ್ರಥಮ ಜೀವಿ ಹುಟ್ಟಿ 123 ಕೋಟಿ ವರ್ಷಗಳು ಕಳೆದಿವೆ. ತೀರ ಪ್ರದೇಶಗಳಲ್ಲಿ ಗೋಚರಿಸಿದ ಸಣ್ಣ ಕ್ರಿಮಿಗಳೇ ಆರಂಭ ಜೀವಿಗಳು. ತರುವಾಯ ವಿವಿಧ ರೀತಿಯ ಜಂತುಗಳು ಹುಟ್ಟಿ ಸತ್ತುವು. ಸಾವಿರಾರು ವರುಷಗಳ ತನಕ ಭೂಮಿಯಲ್ಲಿ ಕೇವಲ ಜಂತುಗಳೇ ಇದ್ದುವು. ತರುವಾಯ ಸಮುದ್ರ ಗಿಡಗಳು ಗೋಚರಿಸಿದುವು. ನೆಲದಲ್ಲಿಯೂ ಹುಲ್ಲು ಬೆಳೆಯಲಾ ರಂಭಿಸಿತು. ಹೀಗೆ ಸುದೀರ್ಘ ಕಾಲದ ತನಕ ಅನೇಕ ಘಟನೆಗಳು ಜರಗಿ ಪರಿಸರವು

ಮಾನವ ಜೀವನಕ್ಕೆ ಅನುಕೂಲವಾದ ಬಳಿಕ ಭೂಮಿಯಲ್ಲಿ ಮಾನವನು ಜನಿಸಿದನು.

ಈ ಸಿದ್ಧಾಂತದಂತೆ ಈ ಭೂಮಿಯಲ್ಲಿ ಮಾನವನ ಹುಟ್ಟು 3 ಲಕ್ಷ ವರುಷಗಳ ಹಿಂದೆ ನಡೆದಿದೆ. ಈ ಕಾಲಾವಧಿಯು ತೀರಾ ಸಂಕ್ಷಿಪ್ತವಾಗಿದೆ. ಪ್ರಪಂಚ ಹುಟ್ಟಿದ ಕಾಲದ ದೀರ್ಘತೆಗೆ ಹೋಲಿಸಿದಾಗ ಮಾನವೇತಿಹಾಸಕ್ಕೆ ಕೇವಲ ಕ್ಷಣಗಳಷ್ಟೇ ಸಂದಿವೆ. ಮಾನವಕುಲವನ್ನು ಒಟ್ಟಾಗಿ ತೆಗೆದು ನೋಡಿದರೆ ಓರ್ವ ಮಾನವನ ಸರಾಸರಿ ಆಯುಷ್ಯವು 100 ವರ್ಷಗಳಿಗಿಂತ ಕಡಿಮೆಯೆಂದು ಕಂಡು ಬರುತ್ತದೆ. ಒಂದೆಡೆಯಿಂದ ಈ ಘಟನೆಯನ್ನು ಗಮನದಲ್ಲಿರಿಸಿ, ಇನ್ನೊಂದೆಡೆಯಿಂದ ಈ ಪ್ರಪಂಚದಲ್ಲಿ ಮಾನವನಿಗಿಂತ ಉತ್ಕೃಷ್ಟವಾದ ಯಾವುದೇ ಸೃಷ್ಟಿ ಕಂಡು ಬಂದಿಲ್ಲವೆಂಬ ಸತ್ಯವನ್ನು ಆಲೋಚಿಸಿ ನೋಡಿರಿ. ಆಕಾಶ-ಭೂಮಿಗಳ ಕೋಟಿಗಟ್ಟಲೆ ವರ್ಷಗಳ ತಿರುಗುನಿಕೆಯ ಬಳಿಕ ಪ್ರಪಂಚದಲ್ಲಿ ಪ್ರತ್ಯಕ್ಷಗೊಂಡ ಪರಮೋನ್ನತ ಸೃಷ್ಟಿ ಮಾನವನೇ ಆಗಿದ್ದಾನೆ. ಆದರೆ ಅಖಿಲ ವಿಶ್ವದ ಅತ್ಯುನ್ನತ ಸ್ಥಾನದ ಯೋಗ್ಯತೆಯಿರುವ ಸರ್ವಶ್ರೇಷ್ಠನಾದ ಈ ವಿಚಿತ್ರ ಮಾನವನ ಜೀವನ ಕೇವಲ ಕೆಲವು ಸಂಕ್ಷಿಪ್ತ ವರ್ಷಗಳಿಗೆ ಸೀಮಿತವಾಗಿದೆ! ನಮ್ಮ ಅಸ್ತಿತ್ವಕ್ಕೆ ಪೂರಕವಾಗಿರುವ ಸಂಯುಕ್ತ ಲೌಕಿಕ ಅಂಶಗಳ ಪ್ರತಿಯೊಂದು ವಸ್ತುವಿನ ವಯಸ್ಸು ಕೋಟಿಗಟ್ಟಲೆ ವರುಷಗಳಾಗಿವೆ. ನಮ್ಮ ಮರಣದ ಬಳಿಕವೂ ಅವು ಉಳಿದು ಕೊಳ್ಳುವುವು. ಆದರೆ ಲೌಕಿಕ ವಸ್ತುಗಳ ಸಂಯೋಜನೆಯಿಂದಲೇ ಜನ್ಮ ತಾಳಿದ ಸರ್ವೋತ್ಕೃಷ್ಟ ಅಸ್ತಿತ್ವವು ಕೇವಲ ನೂರು ವರ್ಷ ಜೀವಿಸುತ್ತದೆ! ಪ್ರಪಂಚದ ಸಾರಸಂಪೂರ್ಣವಾಗಿರುವ ಮಾನವನ ಆಯುಷ್ಯವು ಪ್ರಪಂಚಕ್ಕಿಂತ ಬಹಳ ಕಡಿಮೆ. ಇತಿಹಾಸದ ಸುದೀರ್ಘ ಕಾಲ ಘಟ್ಟದಲ್ಲಿ ಸಮ್ಮಿಲನಗೊಂಡ ಅನೇಕ ಘಟನಾವಳಿಗಳೆಲ್ಲವೂ ಕೇವಲ ಮಾನವನೆಂಬ ಒಂದು ಜೀವಿಯನ್ನು ಕೆಲವಾರು ದಿನಗಳಿಗಾಗಿ ಸೃಷ್ಟಿಸಿ ನಾಶಪಡಿಸುವುದಾಗಿತ್ತೇ?

ಇಂದು ಭೂಮಿಯಲ್ಲಿರುವ ಪ್ರತಿಯೊಬ್ಬ ಮನುಷ್ಯನೂ ಆರು ಅಡಿ ಎತ್ತರ, ಎರಡೂವರೆ ಅಡಿ ಅಗಲ ಮತ್ತು ಒಂದು ಅಡಿ ದಪ್ಪಗಿರುವನೆಂದು ಭಾವಿಸೋಣ.

---

* *ಜೀವನದ ಆರಂಭ ಮತ್ತು ಪ್ರಪಂಚದ ಹುಟ್ಟಿನ ಕುರಿತು ವಿಭಿನ್ನ ಸಿದ್ಧಾಂತಗಳು ಪ್ರತಿಪಾದಿಸಲ್ಪಟ್ಟಿವೆ. ಆ ಪೈಕಿ ಅತ್ಯಂತ ಸೂಕ್ತ ಮತ್ತು ಪ್ರಖ್ಯಾತವಾದ ಸಿದ್ಧಾಂತದ ಸಾರಾಂಶವನ್ನು ಇಲ್ಲಿ ವಿವರಿಸಲಾಗಿದೆ.*

ಹಾಗಿದ್ದರೆ ಕೇವಲ ಒಂದು ಮೈಲು ಚಚ್ಚೌಕವಿರುವ ಒಂದು ಪೆಟ್ಟಿಗೆಯಲ್ಲಿ ಅವರೆಲ್ಲರನ್ನು ಸುಲಭದಲ್ಲಿ ತುಂಬಬಹುದು. ಈ ವಿಷಯವು ವಿಚಿತ್ರವೆಂದು ತೋರಿದರೂ ಅದುವೇ ವಾಸ್ತವಿಕತೆಯಾಗಿದೆ. ತರುವಾಯ ಆ ಪೆಟ್ಟಿಗೆಯನ್ನು ಯಾವುದಾದರೂ ಕಡಲ ಕಿನಾರೆಗೆ ತಂದು, ಸ್ವಲ್ಪ ದೂಡಿ ಬಿಟ್ಟರೆ ಅದು ಹಾಗೆಯೇ ನೀರಿನ ತಳ ಸೇರುವುದು. ಆ ಮುಚ್ಚಿದ ಶವ ಪೆಟ್ಟಿಗೆಯ ಮೇಲೆ ಶತಮಾನಗಳು ದಾಟಿ ಹೋಗುವುವು. ಒಂದೊಮ್ಮೆ ಮಾನವನೆಂಬ ವಂಶವು ವಾಸವಾಗಿತ್ತೆಂಬ ವಿಷಯವನ್ನೇ ಲೋಕವು ಮರೆತೀತು; ಸಮುದ್ರದ ಮೇಲ್ಭಾಗ ದಲ್ಲಿ ಕೋಲಾಹಲ ಮತ್ತು ಅಲೆಗಳು ಮೊದಲಿನಂತೆಯೇ ಬರುತ್ತಾ ಹೋಗುತ್ತಾ ಇರುವುವು. ಸೂರ್ಯನು ಇಂದಿನಂತೆಯೇ ಪ್ರಕಾಶಿಸುತ್ತಿರಬಹುದು: ಭೂಮಿ ತನ್ನ ಅಕ್ಷದಲ್ಲಿ ಇಂದಿನಂತೆಯೇ ತಿರುಗುತ್ತಲಿರಬಹುದು. ವಿಶ್ವದ ಅನಂತ ವಿಶಾಲತೆಯಲ್ಲಿ ವ್ಯಾಪಿಸಿರುವ ಅಸಂಖ್ಯಾತ ಲೋಕಗಳು, ಇಂತಹ ಭಾರೀ ದುರಂತಕ್ಕೆ ಒಂದು ಕ್ಷುಲ್ಲಕ ಘಟನೆಗಿಂತ ಹೆಚ್ಚಿನ ಪ್ರಾಮುಖ್ಯತೆಯನ್ನೂ ನೀಡಲಾರವು. ಶತಮಾನಗಳು ಕಳೆದು ಹೋದ ಬಳಿಕ ಒಂದು ಸಣ್ಣ ಮಣ್ಣ ದಿನ್ನೆಯು ಮೂಕ ಭಾಷೆಯಲ್ಲಿ ಲೋಕದೊಡನೆ ಹೇಳುವುದು. "ಇದು ಮಾನವ ವಂಶದ ಶವ ಕುಟೀರವಾಗಿದೆ. ಶತಮಾನಗಳ ಹಿಂದೆ ಅವರನ್ನು ಒಂದು ಸಣ್ಣ ಪೆಟ್ಟಿಗೆಯಲ್ಲಿ ಹಾಕಿ ಇಲ್ಲಿ ದಫನ ಮಾಡಲಾಗಿದೆ!"

ಇಲ್ಲಿ ಮಾನವನ ಬೆಲೆ ಇಷ್ಟು ಮಾತ್ರವೇ? ಪರಮಾಣುವನ್ನು ಜಜ್ಜಿ ಪುಡಿ ಮಾಡಿದರೂ ತುಂಡರಿಸಿದರೂ ಸುಟ್ಟರೂ ಅದು ಅಳಿಯುವುದಿಲ್ಲ. ಅದು ಎಲ್ಲ ಸ್ಥಿತಿಯ ಲ್ಲಿಯೂ ಅಸ್ತಿತ್ವದಲ್ಲಿ ಉಳಿಯುತ್ತದೆ. ಹಾಗಾದರೆ ಸರ್ವೋತ್ಕೃಷ್ಟವಾದ ಮಾನವ ಸೃಷ್ಟಿಗೆ ಅಸ್ತಿತ್ವವಿಲ್ಲವೇ? ಅಖಿಲ ಪ್ರಪಂಚದ ಒಟ್ಟು ಸಾರವಾಗಿರುವ ಈ ಜೀವನವು ಹೀಗೆ ನಿರಾಯಾಸವಾಗಿ ಅಳಿದು ಹೋಗುವಷ್ಟು ವ್ಯರ್ಥವೇ? ಪ್ರಪಂಚದ ಒಂದು ಸಣ್ಣ ಭಾಗದಲ್ಲಿ ಕೆಲವಾರು ದಿನ ಬದುಕಿ ಶಾಶ್ವತವಾಗಿ ಅಳಿದು ಹೋಗುವುದಷ್ಟೇ ಮಾನವ ಜೀವನದ ಮಹಾ ಧ್ಯೇಯವೇ? ಎಲ್ಲ ಮಾನವೀಯ ವಿಜ್ಞಾನಗಳೂ, ಕಲಾಶಾಸ್ತ್ರಗಳೂ, ನಮ್ಮ ಯಶಸ್ವೀ ಪ್ರಯತ್ನಗಳ ಎಲ್ಲ ಸಾಧನೆಗಳೂ ನಮ್ಮೊಂದಿಗೆ ಅಳಿದು ಮಾನವ ವಂಶವೆಂಬುದು ಅಸ್ತಿತ್ವದಲ್ಲಿಯೇ ಇರಲಿಲ್ಲವೆಂಬ ರೀತಿಯಲ್ಲಿ ಪ್ರಪಂಚವು ಉಳಿದು ಕೊಳ್ಳುವಂತಹ ಅವಸ್ಥೆಯೆ?

ಈ ಬಗ್ಗೆ ಸ್ಪಷ್ಟವಾಗಿ ಭಾಸವಾಗುವ ಇನ್ನೊಂದು ವಿಷಯವಿದೆ: ಜೀವನವು ಕೇವಲ ಐಹಿಕ ಜೀವನವೆಂದಾದರೆ, ಇದು ನಮ್ಮ ಆಶೆ ಆಕಾಂಕ್ಷೆಗಳನ್ನು ಈಡೇರಿಸಲು

ಪರ್ಯಾಪ್ತವಲ್ಲದ ಜೀವನವಾಗಿದೆ. ಪ್ರತಿಯೊಬ್ಬ ಮಾನವನೂ ಚಿರಕಾಲ ಬದುಕಬಯಸುತ್ತಾನೆ. ಮರಣವನ್ನು ಯಾರೂ ಮೆಚ್ಚುವುದಿಲ್ಲ. ಆದರೆ ಅಂತಹ ಜೀವನ ಸಾಧ್ಯವಲ್ಲವೆಂದು ಹುಟ್ಟುವ ಪ್ರತಿಯೊಬ್ಬ ಮಾನವನಿಗೂ ತಿಳಿದಿದೆ. ಮಾನವನು ಸುಖ ಪಡೆಯಬಯಸುತ್ತಾನೆ. ಎಲ್ಲ ರೀತಿಯ ನೋವು ಸಂಕಷ್ಟಗಳಿಂದ ಮುಕ್ತನಾಗಿ ಜೀವಿಸಬೇಕೆಂದು ಪ್ರತಿಯೊಬ್ಬ ಮಾನವನೂ ಸ್ವಾಭಾವಿಕವಾಗಿ ಹಂಬಲಿಸುತ್ತಾನೆ. ಆದರೆ ಯಥಾರ್ಥದಲ್ಲಿ ಅಂತಹ ಜೀವನ ಯಾರಿಗಾದರೂ ದೊರೆಯುತ್ತಿದೆಯೇ? ಪ್ರತಿಯೊಬ್ಬ ಮನುಷ್ಯನೂ ತನ್ನ ಆಶೆ-ಆಕಾಂಕ್ಷೆಗಳ ಅಂತಿಮ ಈಡೇರಿಕೆಯ ತನಕ ಅವಕಾಶ ದೊರೆಯಬೇಕೆಂದು ಆಸೆ ಪಡುತ್ತಾನೆ. ತನ್ನ ಆಶೆಗಳೆಲ್ಲವನ್ನೂ ಕಾರ್ಯರೂಪದಲ್ಲಿ ನೋಡಲು ಹಂಬಲಿಸುತ್ತಾನೆ. ಆದರೆ ಈ ಪರಿಮಿತ ಲೋಕದಲ್ಲಿ ಅದು ಆತನಿಗೆ ಸಾಧ್ಯವಾಗುವುದಿಲ್ಲ. ನಮ್ಮ ಎಲ್ಲ ಆಶೆಗಳ ಈಡೇರಿಕೆಗೆ ಈ ಲೋಕದ ವಾತಾವರಣವು ಅನುಕೂಲವಾಗಿಲ್ಲವೆಂದು ಭಾಸವಾಗುತ್ತದೆ. ಕೆಲವು ಹೆಜ್ಜೆಗಳನ್ನು ಮುಂದಿಟ್ಟಾಗ ಪ್ರಪಂಚವು ನಮ್ಮ ಹಾದಿಯನ್ನು ತಡೆಯುತ್ತದೆ. ಅದು ಕೇವಲ ಒಂದು ಮಿತಿಯ ತನಕ ನಮ್ಮೊಂದಿಗೆ ಸಹಕರಿಸುತ್ತದೆ. ಅದರಾಚೆ, ಅದು ನಮ್ಮನ್ನು ಹತಾಶರು ಮತ್ತು ಪರಾಜಿತರನ್ನಾಗಿ ಮರಳಿಸುತ್ತದೆ.

ವಾಸ್ತವದಲ್ಲಿ, ಮಾನವ ಜೀವನಕ್ಕಾಗಿ ನಿರ್ಮಿಸಿದ, ಜೀವನ ಮತ್ತು ಅದಕ್ಕೆ ಸಂಬಂಧಿಸಿದವರೊಡನೆ ತೀರಾ ಹೊಂದಾಣಿಕೆಯಿಲ್ಲದಂತಹ ಲೋಕಕ್ಕೆ ಪ್ರಮಾದವಶಾತ್ ಮಾನವ ಜೀವನವು ಧುಮುಕಿತೇ? ನಮ್ಮ ಭಾವ, ವಿಚಾರ, ಆಶೆ-ಆಕಾಂಕ್ಷೆಗಳು ಕೇವಲ ಅವಾಸ್ತವಿಕತೆಗಳೇ? ಈ ಲೋಕದೊಂದಿಗೆ ಅವುಗಳಿಗೆ ಯಾವ ನೈಜ ಸಂಬಂಧವೂ ಇಲ್ಲವೇ? ನಮ್ಮ ಉತ್ತಮ ಭಾವನೆಗಳೆಲ್ಲವೂ ಪ್ರಪಂಚದ ಸ್ಥಿತಿಗತಿಗಳಿಂದ ಮುಕ್ತವಾಗಿವೆಯೇ? ಸಹಸ್ರಾರು ವರುಷಗಳಿಂದ ಇಲ್ಲಿ ಹುಟ್ಟುತ್ತಿರುವ ಮಾನವ ವಂಶವು ಇರಿಸಿಕೊಂಡಿದ್ದ ಆಶೆ-ಆಕಾಂಕ್ಷೆಗಳೆಲ್ಲವನ್ನೂ ತಮ್ಮ ಹೃದಯದಲ್ಲಿಯೇ ಹುದುಗಿಟ್ಟು ಅವುಗಳನ್ನು ಈಡೇರಿಸಲಾಗದೆ ಅವರು ಇಲ್ಲಿ ಮೃತರಾಗುತ್ತಾರೆ. ಹಾಗಿದ್ದರೆ ಪ್ರಸ್ತುತ ಆಶೆ-ಆಕಾಂಕ್ಷೆಗಳನ್ನು ಸಫಲಗೊಳಿಸುವ ಅವಕಾಶವಿಲ್ಲವೇ? ಅವು ಭೂತ ಕಾಲದ ಆಧಾರವಾಗಲೀ ಭವಿಷ್ಯ ಕಾಲದ ಸ್ಥಾನವಾಗಲೀ ಇಲ್ಲದೇ ಮಾನವ ಹೃದಯದಲ್ಲಿ ವೃಥಾ ಅಂಕುರಿಸಿದುವೇ?

ಅಖಿಲ ಲೋಕದಲ್ಲಿ ಮಾನವನೇ 'ನಾಳೆ'ಯ ಬಗ್ಗೆ ಯೋಚಿಸುವ ಏಕೈಕ ಜೀವಿ.

ಭವಿಷ್ಯದ ಬಗ್ಗೆ ಚಿಂತಿಸಿ, ಅದನ್ನು ಉಜ್ವಲಗೊಳಿಸಬಯಸುವುದು ಮಾನವನ ವೈಶಿಷ್ಟ್ಯವಾಗಿದೆ. ಇರುವೆ ಮತ್ತು ಗುಬ್ಬಿಯಂತಹ ಕೆಲವು ಜೀವಿಗಳೂ ಆಹಾರ ಸಂಗ್ರಹಿಸುತ್ತವೆ. ಗೂಡು ಕಟ್ಟುತ್ತವೆ. ಆದರೆ ಅದು ಪ್ರಜ್ಞಾರಹಿತವಾಗಿ ಮತ್ತು ನೈಸರ್ಗಿಕ ನಿಯಮದಂತೆ ನಡೆಯುತ್ತವೆ. ನಾಳೆಯ ಉಪಯೋಗಕ್ಕಾಗಿ ಆಹಾರ ಶೇಖರಿಸಬೇಕು ಅಥವಾ ಋತು ಬದಲಾವಣೆ ಮತ್ತು ತೊಂದರೆಗಳಿಂದ ಪಾರಾಗಲಿಕ್ಕಾಗಿ ಗೂಡು ನಿರ್ಮಿಸಬೇಕೆಂದು ಅವುಗಳ ಬುದ್ಧಿ ನಿರ್ಧರಿಸುವುದಿಲ್ಲ. ಮಾನವ ಮತ್ತು ಇತರ ಸೃಷ್ಟಿಗಳ ಈ ಪರಸ್ಪರ ಅಂತರವು, ಮಾನವನಿಗೆ ಇತರೆಲ್ಲ ಸೃಷ್ಟಿಗಳಿಗಿಂತ ಹೆಚ್ಚು ಅವಕಾಶ ದೊರೆಯಬೇಕೆಂಬುದನ್ನು ಸಾಬೀತುಪಡಿಸುತ್ತದೆ. ಇತರ ಜೀವಿಗಳ ಮಟ್ಟಿಗೆ ಜೀವನವು ಇಂದಿಗೆ ಸೀಮಿತವಾಗಿದೆ. ನಾಳೆಯದೆಂಬ ಜೀವನ ಅವುಗಳಿಗಿಲ್ಲ. ಅದೇ ರೀತಿ ಮಾನವ ಜೀವನಕ್ಕೂ ನಾಳೆಯೆಂಬುದಿಲ್ಲವೇ? ಅದು ಅಸ್ವಾಭಾವಿಕ ಅನೈಸರ್ಗಿಕವಾಗಿದೆ. ನಾಳೆಯ ಕುರಿತು ಮಾನವನಿಗಿರುವ ಕಲ್ಪನೆಯು, ಮಾನವ ಜೀವನವು ಇಂದು ಇರುವುದಕ್ಕಿಂತ ಎಷ್ಟೋ ಪಾಲು ದೊಡ್ಡದಾಗಿರಬೇಕೆಂದು ಸ್ಪಷ್ಟವಾಗಿ ಅಪೇಕ್ಷಿಸುತ್ತದೆ. ಮಾನವನು 'ನಾಳೆ'ಯನ್ನು ಆಶಿಸುತ್ತಾನೆ. ಆದರೆ ಕೇವಲ 'ಇಂದು' ಆತನಿಗೆ ನೀಡಲ್ಪಟ್ಟಿದೆ.

ಇದೇ ರೀತಿ ನಾವು ಸಾಮಾಜಿಕ ಜೀವನವನ್ನು ಪರಿಶೀಲಿಸಿದಾಗ ಪ್ರಬಲವಾದ ಶೂನ್ಯತೆ ಭಾಸವಾಗುತ್ತದೆ. ಒಂದೆಡೆ ಭೌತಿಕ ಲೋಕ. ಅದು ಸ್ವಯಂಪೂರ್ಣವೆಂದು ತೋರುತ್ತದೆ. ಅದು ನಿರ್ದಿಷ್ಟ ನಿಯಮದಿಂದ ಬಂಧಿತವಾಗಿದೆ. ಅದರ ಪ್ರತಿಯೊಂದು ವಸ್ತುವೂ ನಿರ್ದಿಷ್ಟ ಮಾರ್ಗದಲ್ಲಿ ಚಲಿಸುತ್ತಿದೆ. ಇನ್ನೊಂದರ್ಥದಲ್ಲಿ, ಭೌತಿಕ ಲೋಕವು ಹೇಗಿರಬೇಕೋ ಹಾಗೆಯೇ ಇದೆ. ಆದರೆ ಮಾನವಲೋಕದ ಸ್ಥಿತಿಯು ಭಿನ್ನವಾಗಿದೆ. ಅಲ್ಲಿ ಪರಿಸ್ಥಿತಿಗಳು ಹೇಗಿರಬೇಕಿತ್ತೋ ಅದಕ್ಕೆ ವಿರುದ್ಧವಾಗಿವೆ. ಇದು ಸ್ಪಷ್ಟ ಅನುಭವ. ಓರ್ವ ಮಾನವನು ಇನ್ನೋರ್ವನನ್ನು ಆಕ್ರಮಿಸುತ್ತಾನೆ. ಓರ್ವನು ಮರ್ದಕನಾಗಿಯೂ ಇನ್ನೊಬ್ಬನು ಮರ್ದಿತನಾಗಿಯೂ ಸಾಯುತ್ತಾನೋ. ಆಲೋಚಿಸಿ ನೋಡಿರಿ. ಮರ್ದಕನಿಗೆ ಮರ್ದನದ ಶಿಕ್ಷೆಯೂ ಮರ್ದಿತನಿಗೆ ಮರ್ದಿಸಲ್ಪಟ್ಟುದರ ಪರಿಹಾರವೂ ದೊರೆಯದೆ ಜೀವನವು ಸಂಪೂರ್ಣವಾಯಿತೆಂದು ಹೇಳಬಹುದೇ? ಓರ್ವನು ಕೇವಲ ಸತ್ಯವನ್ನೇ ನುಡಿಯುತ್ತಾನೆ. ಹಕ್ಕುದಾರರಿಗೆ ಅವರವರ ಹಕ್ಕುಗಳನ್ನು ನೀಡುತ್ತಾನೆ. ತನ್ನಿಮಿತ್ತ ಅವನ ಜೀವನವು ಶೋಚನೀಯವಾಗುತ್ತದೆ. ಇನ್ನೊಬ್ಬನು ಸುಳ್ಳು ಹೇಳಿ ವಂಚಿಸುತ್ತಾನೆ. ಕಂಡದ್ದನ್ನೆಲ್ಲಾ ಕಬಳಿಸುತ್ತಾನೆ. ಅದರಿಂದಾಗಿ ಅವನ ಜೀವನವು ಸುಖಮಯವಾಗುತ್ತದೆ.

ಲೋಕವು ಇದೇ ಸ್ಥಿತಿಯಲ್ಲಿ ಕೊನೆಗೊಂಡರೆ, ಆ ಉಭಯ ವ್ಯಕ್ತಿಗಳ ಭಿನ್ನ ಪರಿಣಾಮಗಳಿಗೆ ಏನಾದರೂ ಸ್ಪಷ್ಟೀಕರಣ ನೀಡಲು ಸಾಧ್ಯವಿದೆಯೇ? ಒಂದು ಜನತೆಯು ಇನ್ನೊಂದು ಜನತೆಯನ್ನು ಸುಲಿಗೆ ಮಾಡುತ್ತಿದೆ. ಅವರ ಜೀವನೋಪಾಧಿಗಳನ್ನು ದೋಚುತ್ತವೆ. ಆದರೂ ಅವರೇ ಇಹಲೋಕದಲ್ಲಿ ಒಳ್ಳೆಯ ಹೆಸರು ಮತ್ತು ಸ್ಥಾನಮಾನಗಳನ್ನು ಗಳಿಸುತ್ತಾರೆ. ಯಾಕೆಂದರೆ ವಿಪುಲ ಪ್ರಚಾರ ಮಾಧ್ಯಮಗಳು ಅವರ ಬಳಿ ಇದೆ. ದಮನಿಸಲ್ಪಟ್ಟ ಜನತೆಯ ಶೋಚನೀಯಾವಸ್ಥೆಯ ಕುರಿತು ಜಗತ್ತು ತಿಳಿಯುವುದಿಲ್ಲ. ಯಾಕೆಂದರೆ ತಮ್ಮ ಅಹವಾಲನ್ನು ಜಗತ್ತಿಗೆ ತಿಳಿಸುವಂತಹ ಯಾವೊಂದು ಮಾರ್ಗವೂ ಅವರ ವಶವಿಲ್ಲ. ಈ ಎರಡು ಜನತೆಯ ನೈಜ ಸ್ಥಿತಿಯು ಎಂದಾದರೂ ಬಹಿರಂಗವಾಗುವುದಿಲ್ಲವೇ? ಇಬ್ಬರು ಅಥವಾ ಎರಡು ಸಮುದಾಯಗಳು ಒಂದು ಸಮಸ್ಯೆಯ ಕುರಿತು ಭಿನ್ನವಾಗುತ್ತವೆ. ಭೀಕರ ಸಂಘರ್ಷ ಮತ್ತು ಎಳೆದಾಟ ನಡೆಯುತ್ತದೆ. ಪ್ರತಿಯೊಂದು ಪಕ್ಷವೂ ಸ್ವಯಂ ಸತ್ಯವಂತರೆಂದೂ ಇದಿರು ಪಕ್ಷವೇ ನಿಷ್ಪ್ರಯೋಜಕವೆಂದೂ ಸಮರ್ಥಿಸುತ್ತವೆ. ಆದರೆ ಇಹಲೋಕದಲ್ಲಿ ಅವರ ಫಿರ್ಯಾದಿಗೆ ತೀರ್ಮಾನ ದೊರೆಯುವುದಿಲ್ಲ. ಅವರ ಮಧ್ಯೆ ಯೋಗ್ಯ ಮತ್ತು ಸ್ಪಷ್ಟ ತೀರ್ಪು ನೀಡುವ ನ್ಯಾಯಾಲಯವು ಇರಬೇಡವೇ? ಆಧುನಿಕ ಯುಗವನ್ನು ಅಣು ಯುಗವೆಂದು ಕರೆಯಲಾಗುತ್ತದೆ. ಆದರೆ ಅದನ್ನು 'ಕುತರ್ಕ'ದ ಯುಗವೆಂದು ಕರೆಯುವುದೇ ಸೂಕ್ತವೆನಿಸುತ್ತದೆ. ಆಧುನಿಕ ಮಾನವನು ಸ್ವಂತ ಅಭಿಪ್ರಾಯ ಮತ್ತು ಸ್ವೇಚ್ಛೆಯನುಸಾರ ಜೀವಿಸಬಯಸುತ್ತಾನೆ. ತನ್ನ ಅಭಿಪ್ರಾಯ ಮತ್ತು ಇಚ್ಛೆಯು ಎಷ್ಟೇ ಅಸಂಬದ್ಧವಾಗಿದ್ದರೂ ಸರಿ. ಪ್ರತಿಯೊಬ್ಬ ವ್ಯಕ್ತಿಯೂ ತಪ್ಪು ಮಾಡುತ್ತಾನೆ. ಆದರೂ ತಾನು ಮಾಡಿದ್ದೇ ಸರಿಯೆಂದು ಸಕಲ ಶಕ್ತಿಯನ್ನು ಬಳಸಿ ಸಮರ್ಥಿಸುತ್ತಾನೆ. ನಾಯಕರ ಮತ್ತು ಆಡಳಿತಗಾರರ ಪತ್ರಿಕಾ ಹೇಳಿಕೆಗಳನ್ನು ನೋಡಿರಿ. ಪ್ರತಿಯೊಬ್ಬರೂ ತಂತಮ್ಮ ಅನ್ಯಾಯಗಳನ್ನು ನ್ಯಾಯವೆಂದೂ ತಪ್ಪುಗಳನ್ನು ಒಪ್ಪುಗಳೆಂದೂ ದರ್ಪದಿಂದ ಸಮರ್ಥಿಸುವುದನ್ನು ಕಾಣಬಹುದು. ಈ ಕಾಪಟ್ಯದ ಪರದೆಯು ಎಂದೂ ಸರಿಯಲಿಕ್ಕಿಲ್ಲವೇ?

ಈ ಪರಿಸ್ಥಿತಿಯು ಲೋಕವು ಅಪೂರ್ಣವೆಂದು ಡಂಗುರ ಸಾರುತ್ತಿದೆ. ಇದರ ಸಂಪೂರ್ಣತೆಗಾಗಿ ಪ್ರತಿಯೊಬ್ಬರಿಗೂ ತಮ್ಮ ನೈಜ ಸ್ಥಾನ ದೊರೆಯುವಂತಹ ಇನ್ನೊಂದು ಲೋಕದ ಅಗತ್ಯವಿದೆ. ಭೌತಿಕ ಲೋಕದಲ್ಲಿರುವ ಕೊರತೆಗಳನ್ನು ಅಲ್ಲಿ ತುಂಬುವಂತಹ ಉಪಾಧಿಗಳಿರುವುದನ್ನು ನಾವು ಕಾಣುತ್ತಿದ್ದೇವೆ. ಭೌತಿಕ ಲೋಕದಲ್ಲಿ ಯಾವೊಂದು

ಲೋಪವನ್ನೂ ನಾವು ಕಾಣುತ್ತಿಲ್ಲ. ಬದಲಾಗಿ ಮಾನವ ಲೋಕದಲ್ಲಿ ಭಾರೀ ಕೊರತೆಯಿದೆ. ಭೌತಿಕ ಲೋಕಕ್ಕೆ ಸಂಪೂರ್ಣ ಪ್ರಗತಿಯನ್ನು ನೀಡಿರುವ ನಿಸರ್ಗವು ಮಾನವ ಜೀವನದ ಶೂನ್ಯತೆಯನ್ನು ತುಂಬುವುದಕ್ಕೆ ಯಾವ ವ್ಯವಸ್ಥೆಯನ್ನೂ ಮಾಡಲಿಲ್ಲವೇ? ನಮ್ಮ ಪ್ರಜ್ಞೆಯು ಕೆಲವು ಚಟುವಟಿಕೆಗಳನ್ನು ಉತ್ತಮವೆಂದೂ ಕೆಲವನ್ನು ಕೆಟ್ಟವೆಂದೂ ಭಾವಿಸುತ್ತದೆ. ಕೆಲವು ವಿಷಯಗಳು ಜರಗಬೇಕು. ಕೆಲವು ಜರಗಬಾರದೆಂದು ನಾವು ಆಶಿಸುತ್ತೇವೆ. ಆದರೆ ನಮ್ಮ ಅಭಿಲಾಷೆಗಳಿಗೆ ವಿರುದ್ಧವಾಗಿ ಮಾನವ ಪ್ರಕೃತಿಯು ಕೆಡುಕೆಂದು ಭಾವಿಸುವುದೆಲ್ಲವೂ ಇಲ್ಲಿ ನಡೆಯುತ್ತದೆ. ಮಾನವನಲ್ಲಿ ಅಂತಹ ಭಾವನೆ ಮೂಡಿರುವುದಕ್ಕೆ ಪ್ರಪಂಚವು ಸತ್ಯದಲ್ಲಿ ಅಧಿಷ್ಠಿತವಾಗಿದೆಯೆಂಬುವೇ ಕಾರಣವಾಗಿದೆ. ಇಲ್ಲಿ ಅಸತ್ಯದ ಬದಲಾಗಿ ಸತ್ಯವೇ ಜಯಗಳಿಸಬೇಕು. ಹೀಗಿರುತ್ತಾ, ಸತ್ಯವು ಪ್ರತ್ಯಕ್ಷಗೊಳ್ಳಲಿಕ್ಕಿಲ್ಲವೇ? ಭೌತಿಕ ಲೋಕದಲ್ಲಿ ಈಡೇರುತ್ತಿರುವ ವಿಷಯವು ಮಾನವ ಲೋಕದಲ್ಲಿ ಪೂರ್ಣವಾಗಲಿಕ್ಕಿಲ್ಲವೇ?

ಇಂತಹ ಪ್ರಶ್ನೆಗಳ ಸಮುಚ್ಚಯವನ್ನು "ಮಾನವ ಕುಲದ ಪರಿಣಾಮದ ಅನ್ವೇಷಣೆ"ಯೆಂದು ನಾನು ಹೆಸರಿಸಿದ್ದೇನೆ. ಈ ಪರಿಸ್ಥಿತಿಗಳನ್ನು ನೋಡುವ ಪ್ರತಿಯೊಬ್ಬನೂ ಅತ್ಯಂತ ಕಳವಳಪಡುತ್ತಾನೆ. ಕೇವಲ ಇಲ್ಲಿ ದೃಶ್ಯವಾಗುತ್ತಿರುವುದೇ ಜೀವನವೆಂದಾದರೆ 'ಅದೆಷ್ಟು ನಿರರ್ಥಕ'ವೆಂಬ ಪ್ರಜ್ಞೆ ಆತನನ್ನು ಬಲವಾಗಿ ಕಾಡುತ್ತದೆ. ಒಂದೆಡೆಯಲ್ಲಿ ಮಾನವ ಜೀವನಕ್ಕಾಗಿ ಲೋಕದಲ್ಲಿ ಅಪಾರ ಸವಲತ್ತುಗಳನ್ನು ಸಿದ್ಧಪಡಿಸಿರುವುದನ್ನೂ ಪ್ರಪಂಚದಲ್ಲಿರುವ ಸಕಲವೂ ಮಾನವನನ್ನು ಗಮನದಲ್ಲಿರಿಸಿ ಅಸ್ತಿತ್ವದಲ್ಲಿರುವುದನ್ನೂ ಆತನು ಕಾಣುತ್ತಾನೆ. ಇನ್ನೊಂದೆಡೆಯಲ್ಲಿ, ಮಾನವನನ್ನು ಏತಕ್ಕಾಗಿ ಸೃಷ್ಟಿಸಲಾಗಿದೆಯೆಂಬುದನ್ನೂ ತಿಳಿಯದಿರುವಷ್ಟರ ಮಟ್ಟಿಗೆ ಮಾನವ ಜೀವನವು ಸಂಕ್ಷಿಪ್ತವೆಂದೂ ನಿರರ್ಥಕವೆಂದೂ ಆತನಿಗೆ ಅನಿಸುತ್ತಿದೆ.

ಸಾಮಾನ್ಯವಾಗಿ ಈ ಪ್ರಶ್ನೆಗಳ ಬಗ್ಗೆ, ಅಂತಹ ಗೋಜಲಿನಲ್ಲಿ ಸಿಲುಕುವುದು ವ್ಯರ್ಥವೆಂಬ ಮನೋಭಾವ ಕಂಡು ಬರುತ್ತಿದೆ. ಇವೆಲ್ಲವೂ ತಾತ್ವಿಕ ಪ್ರಶ್ನೆಗಳು. ನಮಗೆ ಇಲ್ಲಿ ದೊರೆತಿರುವ ಜೀವನದ ಅವಕಾಶವನ್ನು ಸಾಧ್ಯವಿದ್ದಷ್ಟು ಸುಖಮಯಗೊಳಿಸಲು ಪ್ರಯತ್ನಿಸುವುದೇ ಬುದ್ಧಿವಂತಿಕೆ. ಮುಂದೇನಾದೀತು, ಈಗ ಆಗುತ್ತಿರುವುದು ಸರಿಯೋ ತಪ್ಪೋ ಎಂಬ ಚಿಂತೆಯಲ್ಲಿ ಕಾಲಹರಣ ಮಾಡಬೇಕಾಗಿಲ್ಲ. ಇವೆಲ್ಲವೂ ಮನೋಭಾವದ ಕೂಸು!

ಇಂತಹ ವಿಚಾರಧಾರೆಗಳ ಕುರಿತು ಚುಟುಕಾಗಿ ಹೇಳುವುದಿದ್ದರೆ ಅವರು ಮಾನವೀಯತೆಯನ್ನು ಚೆನ್ನಾಗಿ ಇನ್ನೂ ಅರ್ಥ ಮಾಡಿಕೊಂಡಿಲ್ಲ. ಅವರು ಮಿಥ್ಯೆಯನ್ನು ಸತ್ಯವೆಂದು ಭಾವಿಸಬಯಸುತ್ತಾರೆ. ಘಟನಾವಳಿಗಳು ಅವರನ್ನು ಅನಶ್ವರ ಜೀವನದ ರಹಸ್ಯಗಳನ್ನು ಕಂಡುಕೊಳ್ಳಲು ಆಹ್ವಾನಿಸುತ್ತದೆ. ಆದರೆ ಅವರು ಅನಶ್ವರ ಜೀವನದಿಂದಲೇ ಸಂತೃಪ್ತರಾಗಿದ್ದಾರೆ. ಮಾನವ ಪ್ರಕೃತಿಯು ತಮ್ಮ ಆಶೆ-ಆಕಾಂಕ್ಷೆಗಳ ಸಾಕ್ಷಾತ್ಕಾರಕ್ಕೆ ಪೂರಕವಾದ ಲೋಕವೊಂದರ ಅನ್ವೇಷಣೆಗಾಗಿ ವಿನಂತಿಸುತ್ತದೆ. ಆದರೆ ಮೂರ್ಖರು ಬೆಳಕಿನ ಬದಲಾಗಿ ಇರುಳಿನಿಂದಲೇ ಸಂತೃಪ್ತರಾಗಿದ್ದಾರೆಯೇ? ನಿಮ್ಮ ಮಟ್ಟಿಗೆ ಇಹಲೋಕವು ಅಪೂರ್ಣ. ಸಂಪೂರ್ಣವಾದ ಪರಲೋಕವನ್ನು ಗುರುತಿಸಿರೆಂದು ಪ್ರಪಂಚವು ಕೂಗಿ ಹೇಳುತ್ತಿದೆ. ಆದರೆ ಈ ಅಪೂರ್ಣ ಲೋಕದಲ್ಲಿಯೇ ಜೀವನ ಸೌಧ ಕಟ್ಟಿದರೆ ಸಾಕು, ನಮಗೆ ಪರಿಪೂರ್ಣ ಲೋಕದ ಅಗತ್ಯವಿಲ್ಲವೆಂದು ಮಾನವನು ನಿರ್ಧರಿಸಿದ್ದಾನೆ. ಜೀವನಕ್ಕೊಂದು ಪರಿಣಾಮವಿರಬೇಕೆಂದು ಪರಿಸ್ಥಿತಿಗಳು ಸ್ಪಷ್ಟಪಡಿಸುತ್ತವೆ. ಆದರೆ ಮಾನವನು ಕೇವಲ ಪ್ರಾರಂಭವನ್ನು ಅಪ್ಪಿಕೊಂಡು ಪರಿಣಾಮವನ್ನು ಕಾಣುವುದಿಲ್ಲ. ಇದು ಉಷ್ಟ್ರಪಕ್ಷಿಯು ಹೇಳುವಂತಹ ಶತಮೂರ್ಖತನವಾಗಿದೆ. ಜೀವನಕ್ಕೊಂದು ಪರಿಣಾಮವಿದ್ದರೆ ಅದು ಬಂದೇ ತೀರುವುದು. ಯಾರ ಅಸಡ್ಡೆಯೂ ಅದನ್ನು ತಡೆಗಟ್ಟ ಲಾರದು. ಆದರೆ ಅದು ಅಂತವರ ಮಟ್ಟಿಗೆ ದೌರ್ಭಾಗ್ಯವೇ ಆಗಿರುವುದು. ಇಂದಿನ ಜೀವನವನ್ನು ಸಂಪೂರ್ಣ ಜೀವನವೆಂದು ಭ್ರಮಿಸಿ, ಕೇವಲ ಇದನ್ನು ಸುಖಮಯ ಗೊಳಿಸುವ ಪ್ರಯತ್ನವನ್ನು ಜೀವನದ ಧ್ಯೇಯವಾಗಿ ಅಂಗೀಕರಿಸುವುದು ಮಿತಿ ಮೀರಿದ ಹೇಡಿತನ ಮತ್ತು ಅವಿವೇಕವಾಗಿದೆ. ಜೀವನ ಮತ್ತು ಪ್ರಪಂಚದ ಕುರಿತು ಆಲೋಚಿಸುವ ಪ್ರತಿಯೊಬ್ಬರಿಗೂ ಈ ದೃಷ್ಟಿಕೋನದ ಅರ್ಥಶೂನ್ಯತೆ ತಕ್ಷಣ ಸ್ಪಷ್ಟವಾಗದಿರದು. ವಾಸ್ತವಿಕತೆಗಳ ಮುಂದೆ ಕಣ್ಣು ಮುಚ್ಚಿ ಪ್ರಜ್ಞಾಹೀನ ಜೀವನ ಸಾಗಿಸುವವರಿಗೆ ಮಾತ್ರ ಇಂತಹ ನಿರ್ಧಾರ ಕೈಗೊಳ್ಳಲು ಸಾಧ್ಯ!

ಪ್ರಪಂಚವನ್ನು ವೀಕ್ಷಿಸಿದಾಗ ನಮ್ಮ ಹೃದಯದಲ್ಲಿ ತೀವ್ರವಾಗಿ ಏಳುವ ಪ್ರಶ್ನೆಗಳಿವು. ಪ್ರಪಂಚಕ್ಕೆ ಓರ್ವ ಸೃಷ್ಟಿಕರ್ತನಿರಬೇಕು. ಆದರೆ ಆತನ ಬಗ್ಗೆ ನಮಗೇನೂ ತಿಳಿಯದು. ಪ್ರಪಂಚಕ್ಕೆ ಓರ್ವ ನಿಯಾಮಕ ಮತ್ತು ನಿಯಂತ್ರಕನ ಅಗತ್ಯವಿದೆ. ಆದರೆ ಆತ ಯಾರೆಂದು ನಮಗೆ ತಿಳಿಯದು. ನಮ್ಮ ಮೇಲೆ ಯಾರದೋ ಅಪಾರ ಅನುಗ್ರಹಗಳ ಮಳೆ ಸುರಿಯುತ್ತಿದೆ. ಆತನಿಗೆ ಕೃತಜ್ಞತೆ ಮತ್ತು ಭಕ್ತ್ಯಾದರಗಳನ್ನು ಮುಡಿಪಾಗಿರಿಸಿ

ಆತನನ್ನು ಕಂಡು ಹಿಡಿದು, ಆತನ ಪಾದಕಮಲಗಳಲ್ಲಿ ಆದರಾಂಜಲಿಯರ್ಪಿಸಲು ನಾವು ತವಕಿಸುತ್ತೇವೆ. ಆದರೆ ಅಂತಹ ಅಸ್ತಿತ್ವ ನಮ್ಮ ದೃಷ್ಟಿಗೆ ಗೋಚರಿಸುವುದಿಲ್ಲ. ಪ್ರಪಂಚದಲ್ಲಿ ನಾವು ಅತ್ಯಂತ ದುರ್ಬಲ ಮತ್ತು ಅಸಹಾಯಕರಾಗಿ ಬದುಕುತ್ತಿದ್ದೇವೆ. ಒಂದು ಸುರಕ್ಷಿತ ಅಭಯ ಸ್ಥಾನವನ್ನು ಹುಡುಕುತ್ತೇವೆ. ಆದರೆ ಅಂತಹ ಕೇಂದ್ರ ನಮ್ಮ ಮುಂದೆ ಕಾಣುವುದಿಲ್ಲ. ನಮ್ಮ ಜೀವನ ಮತ್ತು ಆಯುಷ್ಯವನ್ನು ಪ್ರಪಂಚದೊಂದಿಗೆ ಹೋಲಿಸಿದಾಗ, ಅನೂಹ್ಯವಾದ ವಿರೋಧಾಭಾಸವನ್ನು ನಾವು ಕಾಣುತ್ತಿದ್ದೇವೆ. ಪ್ರಪಂಚದ ಆಯುಷ್ಯವು ಕೋಟಿಗಟ್ಟಲೆ ವರ್ಷಗಳಿರುವಾಗ ಪ್ರಪಂಚದ ಸಾರಾಂಶವಾಗಿರುವ ಮಾನವನ ಆಯುಷ್ಯವು ಕೇವಲ ಕೆಲವೇ ವರ್ಷಗಳು! ನಿಸರ್ಗವು ಅನೇಕ ಆಶೆ ಆಕಾಂಕ್ಷೆಗಳನ್ನು ಹುಟ್ಟಿಸಿವೆ. ಆದರೆ ಅವುಗಳನ್ನೆಲ್ಲಾ ಪೂರ್ಣಗೊಳಿಸುವ ಅವಕಾಶವಾಗಲೀ ಹಿನ್ನೆಲೆಯಾಗಲೀ ಈ ಲೋಕದಲ್ಲಿಲ್ಲ. ಭೌತಿಕ ಲೋಕ ಮತ್ತು ಮಾನವ ಲೋಕದಲ್ಲಿ ಇದಕ್ಕಿಂತ ಹಿರಿದಾದ ವಿರೋಧಾಭಾಸ ಕಂಡು ಬರುತ್ತಿದೆ. ಭೌತಿಕ ಲೋಕವು ಸ್ವಯಂ ಪರಿಪೂರ್ಣವಾಗಿದೆ. ಅದರಲ್ಲಿ ಯಾವೊಂದು ಲೋಪವೂ ಕಾಣಿಸುವುದಿಲ್ಲ. ಆದರೆ ಮಾನವ ಜೀವನವಲ್ಲಿ ಪ್ರಬಲ ಲೋಪವಿದೆ. ಸರ್ವೋತ್ಕೃಷ್ಟ ಸೃಷ್ಟಿಯಾದ ಮಾನವನ ಸ್ಥಿತಿಯು ಇತರೆಲ್ಲ ಸೃಷ್ಟಿಗಳಿಗಿಂತ ಹೀನವಾಗಿದೆ. ಒಂದು ಹೊಸ ತೈಲ ನಿಕ್ಷೇಪವನ್ನು ಸಂಶೋಧಿಸಿದಾಗ ಅಥವಾ ಜಾನುವಾರು ವರ್ಗವು ಬೆಳೆದು ಹೆಚ್ಚಿದಾಗ ಮಾನವನು ಸಂತೋಷಪಡುತ್ತಾನೆ. ಆದರೆ ಮಾನವಕುಲದ ಸಂಖ್ಯಾ ಹೆಚ್ಚಳವು ಮಾನವನಿಗೆ ಸಹ್ಯವಲ್ಲ. ಇದೆಂತಹ ದೌರ್ಭಾಗ್ಯ! ನಾವು ಸಂಕಷ್ಟಗಳಿಂದ ಕಳವಳಪಟ್ಟು ಸಂತಾನೋತ್ಪತ್ತಿಯನ್ನು ತಡೆಯಬಯಸುತ್ತೇವೆ!

ಇವು ನಮ್ಮನ್ನು ನಾನಾ ಭಾಗಗಳಿಂದ ಆವರಿಸಿರುವ ಪ್ರಶ್ನೆಗಳು. ನಮ್ಮ ಒಳ-ಹೊರಗುಗಳಿಂದ ಅವು ತೇಲಿ ಬರುತ್ತವೆ. ಆದರೆ, ಅವುಗಳ ಉತ್ತರ ನಮಗೆ ತಿಳಿದಿಲ್ಲ. ಜೀವನದ ವಾಸ್ತವಿಕತೆಯನ್ನು ತಿಳಿಯುವುದೇ ಸಮಸ್ಯೆಯಾಗಿದೆ. ಆದರೆ ಜೀವನ ಲಭ್ಯವಾಗಿರುವ ನಮಗೆ, ಜೀವನದ ವಾಸ್ತವಿಕತೆಯನ್ನು ತಿಳಿಸಿಲ್ಲವೆಂದಾದರೆ ಅದೆಷ್ಟೊಂದು ವಿಚಿತ್ರ!

ಈ ವಾಸ್ತವಿಕತೆಯನ್ನು ಕಂಡುಹಿಡಿಯಲಿಕ್ಕಾಗಿ ನಾವು ನಮ್ಮ ಬುದ್ಧಿ ಮತ್ತು ಅನುಭವಗಳನ್ನು ಅವಲಂಬಿಸಿದಾಗ, ನಮಗೆ ಕೆಲವು ವಿಷಯಗಳು ವ್ಯಕ್ತವಾಗುತ್ತವೆ. ಸಮಸ್ಯೆಯ ನೈಜ ಮತ್ತು ನಿರ್ದಿಷ್ಟ ಉತ್ತರವನ್ನು ಬುದ್ಧಿ ಅಥವಾ ಅನುಭವದಿಂದ

ಕಂಡುಹಿಡಿಯಲು ಸಾಧ್ಯವಿಲ್ಲ. ಈ ಬಗ್ಗೆ ನಾವು ಈ ತನಕ ಇರಿಸಿಕೊಂಡಿರುವ ಅಭಿಪ್ರಾಯಗಳಿಗೆ ಕತ್ತಲೆಯ ಬಾಣ ಪ್ರಯೋಗಕ್ಕಿಂತ ಹೆಚ್ಚಿನ ಮಹತ್ವವಿಲ್ಲ. ಒಂದು ನಿರ್ದಿಷ್ಟ ಗಾತ್ರಕ್ಕಿಂತ ಸಣ್ಣ ವಸ್ತುಗಳನ್ನು ನೋಡಲು ನಮ್ಮಿಂದ ಸಾಧ್ಯವಿಲ್ಲ. ಒಂದು ನಿರ್ದಿಷ್ಟ ದೂರಕ್ಕಿಂತ ಆಚೆಯಿರುವ ವಸ್ತುಗಳು ನಮ್ಮ ದೃಷ್ಟಿಗೆ ಗೋಚರಿಸುವುದಿಲ್ಲ. ಅದೇ ಪ್ರಕಾರ ಪ್ರಪಂಚದ ಕುರಿತು ನಮ್ಮ ಜ್ಞಾನವು ಒಂದು ಸಂಕುಚಿತ ವಲಯಕ್ಕೆ ಸೀಮಿತವಾಗಿದೆ. ಅದರ ಪೂರ್ವಾಪರಗಳು ನಮಗೆ ಅಜ್ಞಾತವಾಗಿವೆ. ನಮ್ಮ ಜ್ಞಾನ ಅಪೂರ್ಣವಾಗಿದೆ. ನಮ್ಮ ಪಂಚೇಂದ್ರಿಯಗಳೂ ಅಶಕ್ತವಾಗಿವೆ. ವಾಸ್ತವಿಕತೆಯನ್ನು ಕಣ್ಣಾರೆ ಕಾಣಲು ನಮ್ಮಿಂದ ಸಾಧ್ಯವಿಲ್ಲ.

ಮೈದಾ ಮತ್ತು ಕಲ್ಲಿದ್ದಲಿನ ಹುಡಿಯನ್ನು ಬೆರೆಸಿದರೆ ಅದೊಂದು ಬೂದು ಬಣ್ಣದ ಚೂರ್ಣವಾಗುವುದು. ಆದರೆ ಚೂರ್ಣದ ಕಣಕ್ಕೆ ಸಮಾನವಾಗಿ ಅದರಲ್ಲಿರುವ ಕೇವಲ ಸೂಕ್ಷ್ಮದರ್ಶಕದಿಂದ ವೀಕ್ಷಿಸಬಹುದಾದ ಕ್ರಿಮಿಗಳು, ಆ ಚೂರ್ಣವನ್ನು ಕಪ್ಪು ಮತ್ತು ಬಿಳಿ ಬಣ್ಣವಿರುವ ಬಂಡೆಗಳ ರಾಶಿಯೆಂದು ಭಾವಿಸುತ್ತೇವೆ. ಅದರ ಪರಿಶೋಧಕ ಪಟಲದಲ್ಲಿ ಬೂದು ಬಣ್ಣದ ಚೂರ್ಣವೆಂಬ ವಸ್ತುವೇ ಇಲ್ಲ.

ಮಾನವಕುಲದ ಜೀವನವನ್ನು ಭೂಮಂಡಲವು ಅಸ್ತಿತ್ವಕ್ಕೆ ಬಂದ ಕಾಲದೊಂದಿಗೆ ಹೋಲಿಸಿದಾಗ, ಹೇಳಲಾಗದಷ್ಟು ಕಿರಿದಾಗಿದೆ. ಭೂಮಂಡಲವು ಅಖಿಲ ವಿಶ್ವವೆಂಬ ಮಹಾ ಸಾಗರದಲ್ಲಿ ಒಂದು ಹನಿ ನೀರಿಗಿಂತಲೂ ನಗಣ್ಯವಾಗಿದೆ. ಹೀಗಿರುತ್ತಾ, ಪ್ರಪಂಚದ ವಾಸ್ತವಿಕತೆಯ ಕುರಿತು ಮಾನವನು ರೂಪಿಸಿರುವ ಅಭಿಪ್ರಾಯಗಳಿಗೆ ಕತ್ತಲೆಯಲ್ಲಿ ಪರದಾಡುವುದಕ್ಕಿಂತ ಹೆಚ್ಚಿನ ಬೆಲೆಯಿಲ್ಲ. ಪ್ರಪಂಚದ ವಿಸ್ತಾರದ ಬಗ್ಗೆ ಊಹಿಸಲು ಪ್ರಯತ್ನಿಸಿದಾಗ ನಮ್ಮ ಅಜ್ಞಾನದ ಪರಾಕಾಷ್ಠೆ ಮನವರಿಕೆಯಾಗುತ್ತದೆ. ಸೂರ್ಯನು ಎಂಟು ಲಕ್ಷ ಕೋಟಿ ವರುಷಗಳಿಂದ ಅಸ್ತಿತ್ವದಲ್ಲಿದೆಯೆಂದು ಭಾವಿಸೋಣ. ನಾವು ವಾಸವಾಗಿರುವ ಭೂಮಿಯ ವಯಸ್ಸು 200 ಕೋಟಿ ವರುಷಗಳು ಮತ್ತು ಜೀವನದ ಕುರುಹು ಪ್ರಕಟಗೊಂಡು ಮೂರು ಕೋಟಿ ವರುಷಗಳು ಕಳೆಯಿತೆಂದೂ ಭಾವಿಸೋಣ. ಭೂಮಿಯಲ್ಲಿ ಬುದ್ಧಿ ಜೀವಿಯಾದ ಮಾನವನ ಇತಿಹಾಸ ಆರಂಭವಾಗಿ 20,000 ವರುಷಗಳಿಗಿಂತ ಹೆಚ್ಚು ಕಾಲ ಸಂದಿಲ್ಲ. ಹಾಗಾದರೆ ಮಾನವನು ಜ್ಞಾನ ಸಂಪಾದನೆಗಾಗಿ ಬಳಸಿದ ಕೆಲವಾರು ಸಹಸ್ರ ವರುಷಗಳು, ಯಥಾರ್ಥದಲ್ಲಿ ಪ್ರಾಪಂಚಿಕ ರಹಸ್ಯಗಳನ್ನು ತಿಳಿಯುವುದಕ್ಕೆ ಅಗತ್ಯವಿರುವ ಕಾಲದ ಅತಿ ನಗಣ್ಯ ಭಾಗವೆಂಬ ಸತ್ಯವು

ಎಲ್ಲರಿಗೂ ಸುಲಭದಲ್ಲಿ ಅರ್ಥವಾಗಬಹುದು. ಪ್ರಪಂಚದ ಸುದೀರ್ಘ ಭೂತಕಾಲ ಮತ್ತು ಅಜ್ಞಾತ ಭವಿಷ್ಯದ ನಡುವೆ ಮಾನವ ಜೀವನವು ಕೇವಲ ತೃಣವಾಗಿದೆ. ಪೂರ್ವಾಪರಗಳನ್ನು ತಿಳಿಯದ ಕ್ಷಣಿಕ ಮಧ್ಯಂತ- ಇದು ನಮ್ಮ ಅಸ್ತಿತ್ವ! ಪ್ರಪಂಚದ ವಿಸ್ತಾರವು ಅಪಾರ. ಅದನ್ನು ಕಂಡುಕೊಳ್ಳಲು ನಮ್ಮ ಬುದ್ಧಿ ತೀರಾ ಅಪರ್ಯಾಪ್ತ. ನಮ್ಮ ಸೀಮಿತ ಸಾಮರ್ಥ್ಯಗಳಿಂದ ಅದನ್ನು ತಿಳಿಯುವುದು ಅಸಾಧ್ಯ ಎಂಬುದನ್ನು ಅಸಹಾಯಕ ಪ್ರಜ್ಞೆಯಿಂದ ನಮ್ಮ ಬುದ್ಧಿಯು ಒಪ್ಪಿಕೊಳ್ಳುವುದು ಅನಿವಾರ್ಯವಾಗಿದೆ.

ಹೀಗೆ ನಮ್ಮ ಜ್ಞಾನ ಮತ್ತು ಅಧ್ಯಯನ ಪಾರಾಯಣಗಳು ನಮ್ಮನ್ನು, ಉತ್ತರ ಅನಿವಾರ್ಯವಾಗಿರುವ ಅನೇಕ ಪ್ರಶ್ನೆಗಳ ಮುಂದೆ ತಂದು ನಿಲ್ಲಿಸುತ್ತದೆ. ಅವುಗಳಿಗೆ ಉತ್ತರ ಕಂಡು ಹಿಡಿಯಲಾಗದ ಮಾನವ ಜೀವನವು ಸಂಪೂರ್ಣ ನಿರರ್ಥಕವೆಂದು ತೋರುತ್ತದೆ. ಆದರೂ ಅವುಗಳ ಬಗ್ಗೆ ಆಲೋಚಿಸಿದಾಗ, ಅವುಗಳಿಗೆ ನಮ್ಮ ಬುದ್ಧಿಯಿಂದ ಉತ್ತರ ಕಂಡು ಹಿಡಿಯುವುದು ಅಸಾಧ್ಯವೆಂದು ನಮಗೆ ಮನವರಿಕೆಯಾಗುತ್ತದೆ. ವಾಸ್ತವಿಕತೆಯನ್ನು ಕಾಣುವ ಕಣ್ಣುಗಳಾಗಲೀ ನೇರವಾಗಿ ತಿಳಿಯುವ ಹೃದಯವಾಗಲೀ ನಮಗಿಲ್ಲ.

ಈ ಸಂದರ್ಭದಲ್ಲಿ ಓರ್ವ ವ್ಯಕ್ತಿಯು ನಮ್ಮ ಮುಂದೆ ಬಂದು ಹೀಗೆ ಹೇಳುತ್ತಾನೆ. ಯಾವುದರ ಬಗ್ಗೆ ನೀವು ತಿಳಿಯಬಯಸುತ್ತಿರುವಿರೋ ಆ ಸತ್ಯಜ್ಞಾನ ನನಗೆ ನೀಡಲ್ಪಟ್ಟಿದೆ. ಅದು ಹೀಗಿದೆ:

*"ಪ್ರಪಂಚಕ್ಕೆ ಓರ್ವ ದೇವನಿದ್ದಾನೆ. ಆತನೇ ಅಖಿಲ ಪ್ರಪಂಚದ ಸೃಷ್ಟಿಕರ್ತ ಮತ್ತು ವಿಧಾಯಕ. ಆತನು ತನ್ನ ಅಸಾಮಾನ್ಯ ಸಾಮರ್ಥ್ಯದಿಂದ ಇದನ್ನು ನಿಯಂತ್ರಿಸುತ್ತಿದ್ದಾನೆ. ನಿಮಗೆ ಲಭ್ಯವಾಗಿರುವುದೆಲ್ಲವೂ ಆತನ ದಾನವಾಗಿದೆ. ಅವುಗಳ ಸಂಪೂರ್ಣ ಅಧಿಕಾರ ಆತನಿಗೆ ಮಾತ್ರವಿದೆ. ಭೌತಿಕ ಲೋಕದಲ್ಲಿ ಯಾವ ರೀತಿಯ ವಿರೋಧಾಭಾಸವೂ ಇಲ್ಲದೆ ಅಚ್ಚುಕಟ್ಟಾಗಿ ಅದರ ಕರ್ತವ್ಯ ನಿರ್ವಹಣೆಯಾಗುತ್ತದೆ. ತದ್ವಿರುದ್ಧವಾಗಿ ಮಾನವ ಲೋಕವು ಅಪೂರ್ಣತೆಯ ಕಲಸುಮೇಲೋಗರವಾಗಿ ಕಾಣಿಸುತ್ತಿರುವುದಕ್ಕೆ, ಮಾನವನಿಗೆ ಸ್ವಾತಂತ್ರ್ಯ ನೀಡಿ ಆತನನ್ನು ಪರೀಕ್ಷಿಸುತ್ತಿರುವುದೇ ಕಾರಣವಾಗಿದೆ. ಭೌತಿಕ ಲೋಕದಲ್ಲಿ ನೇರವಾಗಿ ಜಾರಿಯಾಗುತ್ತಿರುವ ನಿಯಮಾವಳಿಯನ್ನು ಮಾನವನು ಸ್ವಜೀವನದಲ್ಲಿ ಸ್ವೇಚ್ಛೆಯಿಂದ ಅಂಗೀಕರಿಸಬೇಕೆಂದು ನಿಮ್ಮ ಪ್ರಭುವು ಬಯಸುತ್ತಾನೆ. ಈ ಸೃಷ್ಟಿಕರ್ತ ಮತ್ತು ನಿಯಾಮಕನಾದ ದೇವನೇ ನಿಮ್ಮ ಕೃತಜ್ಞತೆಗೆ ಅರ್ಹನಾಗಿದ್ದಾನೆ.*

*ನಿಮಗೆ ಅಭಯ ನೀಡಲು ಕೇವಲ ಆತನಿಂದಲೇ ಸಾಧ್ಯ. ಮರಣದ ಬಳಿಕ ಆತನು ನಿಮಗೆ ಅನಶ್ವರವಾದ ಜೀವನವೊಂದನ್ನು ಸಜ್ಜುಗೊಳಿಸಿದ್ದಾನೆ. ಅಲ್ಲಿ ನಿಮ್ಮ ಎಲ್ಲ ಆಶೋತ್ತರಗಳೂ ನಿರೀಕ್ಷೆ ಮತ್ತು ಅಭೀಷ್ಟಗಳೂ ಸಾಕ್ಷಾತ್ಕರಿಸಲ್ಪಡುವುವು. ಅಲ್ಲಿ ಸತ್ಯ ಮತ್ತು ಮಿಥ್ಯವನ್ನು ಬೇರ್ಪಡಿಸಲಾಗುವುದು. ಸನ್ಮಾರ್ಗಿಗಳಿಗೆ ಅವರ ಸತ್ಕರ್ಮಗಳ ಮತ್ತು ದುರ್ಮಾರ್ಗಿಗಳಿಗೆ ಅವರ ದುಷ್ಕೃತ್ಯಗಳ ಪ್ರತಿಫಲ ನೀಡಲಾಗುವುದು. ಆತನು ನನ್ನ ಮೂಲಕ ನಿಮಗೆ ಗ್ರಂಥವನ್ನು ಕಳುಹಿಸಿ ಕೊಟ್ಟಿದ್ದಾನೆ. ಅದರ ಹೆಸರೇ ಕುರ್‌ಆನ್. ಅದನ್ನು ಅಂಗೀಕರಿಸುವವರು ವಿಜೇತರು ಮತ್ತು ತಿರಸ್ಕರಿಸುವವರು ಪರಾಜಿತರು."*

ಇದು ಮುಹಮ್ಮದ್‌ರ(ಸ) ಧ್ವನಿ! ಸಾವಿರದ ನಾನ್ನೂರು ವರುಷಗಳ ಹಿಂದೆ ಅರೇಬಿಯಾದ ಮರುಳುಗಾಡಿನಲ್ಲಿ ಮೊಳಗಿದ ಆ ಧ್ವನಿಯು ಇಂದಿಗೂ ನಮ್ಮನ್ನು ಆಹ್ವಾನಿಸುತ್ತಿದೆ. ವಾಸ್ತವಿಕತೆಯನ್ನು ತಿಳಿಯಬಯಸುವಿರಾದರೆ, ಈ ಶಬ್ದವನ್ನು ಆಲಿಸಿರಿ ನನ್ನ ಮಾತುಗಳ ಬಗ್ಗೆ ಆಲೋಚಿಸಿರೆಂಬುದು ಅದರ ಸಂದೇಶವಾಗಿದೆ.*

ಈ ಕರೆಯು ವಾಸ್ತವಿಕತೆಯ ನೈಜ ವಿವರಣೆಯೇ? ನಾವು ಅದನ್ನು ನಂಬಬೇಕಾಗಿದೆಯೆ? ಇದರ ಸತ್ಯಾಸತ್ಯತೆಯನ್ನು ನಿರ್ಧರಿಸಲು ನಾವು ಅವಲಂಬಿಸಬೇಕಾದ ಆಧಾರ ಯಾವುವು?

ಪ್ರಸ್ತುತ ವಾಸ್ತವಿಕತೆಯನ್ನು ಕಣ್ಣಾರೆ ಕಂಡರೆ ಮಾತ್ರ ನಂಬುತ್ತೇವೆಂದು ಕೆಲವರು ವಾದಿಸುತ್ತಾರೆ. ಸತ್ಯವು ಅವರ ನಗ್ನ ದೃಷ್ಟಿಗೆ ಗೋಚರಿಸಬೇಕು. ಆದರೆ ಇದು ಒಬ್ಬನು ಗಣಿತ ಶಾಸ್ತ್ರದ ವಿನಾ ಖಗೋಳ ಶಾಸ್ತ್ರದ ಅಧ್ಯಯನ ನಡೆಸಿ, ಕೇವಲ ನಗ್ನ ದೃಷ್ಟಿಗೆ ಗೋಚರಿಸುವ ಖಗೋಳ ಶಾಸ್ತ್ರದ ಸಂಶೋಧನೆಯನ್ನು ಮಾತ್ರ ಅಂಗೀಕರಿಸುವೆನೆಂದು ಹೇಳುವುದಕ್ಕೆ ಸಮಾನವಾಗಿದೆ. ಗಣಿತಶಾಸ್ತ್ರದ ಆಧಾರಗಳು ಅವರಿಗೆ ಅಂಗೀಕಾರಾರ್ಹವಲ್ಲ! ಮಾನವನಿಗೆ ತನ್ನ ಸಾಮರ್ಥ್ಯದ ಕುರಿತು ಸರಿಯಾದ ತಿಳುವಳಿಕೆಯಿಲ್ಲವೆಂದು ಈ ವಿಚಾರಧಾರೆ ಸಾಬೀತು ಪಡಿಸುತ್ತದೆ.

ಮಾನವನ ಅನ್ವೇಷಣಾ ಸಾಮರ್ಥ್ಯವು ತೀರಾ ಪರಿಮಿತವಾಗಿದೆ. ವಾಸ್ತವಿಕತೆಯು ನಮ್ಮ ಮಟ್ಟಿಗೆ ಅನ್ವೇಷಣೆಗೆ ಮೀರಿದ ವಸ್ತುವಾಗಿದೆ. ನಮಗೆ ಅದನ್ನು ಊಹಿಸಲು

---

* *ಇತರ ಪ್ರವಾದಿಗಳು ಬೋಧಿಸಿದ ಸಂದೇಶದ ಸಾರಾಂಶವೂ ಇದೇ ಆಗಿತ್ತು.*

ಸಾಧ್ಯವಿದ್ದರೂ ಕಣ್ಣಿಂದ ನೋಡಲು ಸಾಧ್ಯವಿಲ್ಲ. ಅಗ್ನಿ, ನೀರು, ಮಣ್ಣು ಮತ್ತು ವಾಯು ಎಂಬೀ ನಾಲ್ಕು ವಸ್ತುಗಳು ಸೇರಿ ಈ ಜಗತ್ತು ನಿರ್ಮಾಣವಾಯಿತೆಂದು ಭಾವಿಸುವ ಒಂದು ಕಾಲವಿತ್ತು. ಇನ್ನೊಂದರ್ಥದಲ್ಲಿ ವಾಸ್ತವಿಕತೆಯು ದೃಗ್ಗೋಚರ ವಸ್ತುವೆಂದು ಪ್ರಾಚೀನ ಮಾನವನು ಭ್ರಮಿಸಿದ್ದನು. ಆದರೆ ನವೀನ ಸಂಶೋಧನೆಗಳು ಆತನ ತಪ್ಪನ್ನು ಬಹಿರಂಗಪಡಿಸಿವೆ. ಎಲ್ಲ ವಸ್ತುಗಳೂ ಅಂತಿಮ ವಿಶ್ಲೇಷಣೆಯಲ್ಲಿ ಅತಿ ಸೂಕ್ಷ್ಮವಾದ ಪರಮಾಣುಗಳೆಂದು ಈಗ ನಮಗೆ ತಿಳಿದಿದೆ. ಪರಮಾಣುವನ್ನು ಒಂದು ಸಾಮಾನ್ಯ ಸೇಬು ಹಣ್ಣಿಗೆ ಹೋಲಿಸಿದಾಗ, ಸೇಬು ಹಣ್ಣು ನಮ್ಮ ಭೂಮಿಗಿಂತ ಎಷ್ಟು ಕಿರಿದಾಗಿದೆಯೋ, ಸೇಬಿನ ಮಟ್ಟಿಗೆ ಅಣುವು ಅದಕ್ಕಿಂತಲೂ ಕಿರಿದಾಗಿದೆ. ಅಣುವೂ ಒಂದು ರೀತಿಯ ಸೌರಮಂಡಲ. ಅದಕ್ಕೊಂದು ಕೇಂದ್ರವಿದೆ. ಕೇಂದ್ರದಲ್ಲಿ ಪ್ರೋಟೋನ್ ಮತ್ತು ನ್ಯೂಟ್ರೋನ್‌ಗಳಿವೆ. ಈ ಕೇಂದ್ರದ ಸುತ್ತಲೂ ಎಲೆಕ್ಟ್ರೋನ್ ವಿಭಿನ್ನ ಪಥದಲ್ಲಿ ಚಲಿಸುತ್ತಿವೆ. ಸೂರ್ಯನ ಸುತ್ತಲೂ ಗ್ರಹಗಳು ಚಲಿಸುತ್ತಿರುವಂತೆ ಸೆಂಟಿ ಮೀಟರಿನ ಸಹಸ್ರಾರು ಕೋಟಿಗಳಲ್ಲೊಂದಂಶ ವ್ಯಾಸವಿರುವ ಹಾಗೂ ಕೇಂದ್ರದ ಸುತ್ತಲೂ ಸೆಕೆಂಡಿಗೆ ಕೋಟಿಗಟ್ಟಲೆ ಬಾರಿ ತಿರುಗುತ್ತಿರುವಂತಹ ಒಂದು ಇಲೆಕ್ಟ್ರೋನ್‌ನ ಕುರಿತು ಊಹಿಸುವುದೇ ವ್ಯರ್ಥ ಸಾಹಸವೆನಿಸೀತು? ಅದೇ ವೇಳೆ ಇದು ಆಂತರಿಕ ಲೋಕದ ಅಂತಿಮ ಗಡಿಯೇ? ಈ ಲೋಕಗಳೊಳಗೆ ಇದಕ್ಕಿಂತ ಸೂಕ್ಷ್ಮವಾದ ಲೋಕಗಳಿರುವ ಸಾಧ್ಯತೆಯ ಬಗ್ಗೆ ತಿಳಿಯಲು ನಮ್ಮಿಂದ ಸಾಧ್ಯವಾಗಿಲ್ಲ.

ನಮ್ಮ ಅನ್ವೇಷಣಾ ಬಲವು ಎಷ್ಟೊಂದು ದುರ್ಬಲವೆಂದು ಇದರಿಂದ ವ್ಯಕ್ತವಾಗುತ್ತದೆ. ಪರಸ್ಪರ ಒಂದುಗೂಡಿ ಕೇಂದ್ರವನ್ನು ನಿರ್ಮಿಸುವ ಪ್ರೋಟೋನ್ ಮತ್ತು ನ್ಯೂಟ್ರೋನ್ ಅಣುಗಳು ಹೀಗೆ ಅಸ್ತಿತ್ವದಲ್ಲಿವೆಯೆಂಬುದು ಇನ್ನೊಂದು ಪ್ರಶ್ನೆ. ಪ್ರೋಟೋನ್ ಮತ್ತು ನ್ಯೂಟ್ರೋನ್‌ಗಳು ಕೇಂದ್ರದಿಂದ ಹೊರ ಹೋಗುವುದಿಲ್ಲವೇಕೆ? ಅವುಗಳನ್ನು ಪರಸ್ಪರ ಬಂಧಿಸುವ ಶಕ್ತಿ ಯಾವುದು? ವಿಜ್ಞಾನಿಗಳು ಹೀಗೆ ಅಭಿಪ್ರಾಯ ಪಡುತ್ತಾರೆ: ಆ ಭೌತಿಕ ಅಣುಗಳ ಮಧ್ಯೆ ಒಂದು ಶಕ್ತಿಯು ಅಸ್ತಿತ್ವದಲ್ಲಿದೆ. ಅದುವೇ ಕೇಂದ್ರದ ವಿದ್ಯುತ್ ಮತ್ತು ವಿದ್ಯುತ್ ರಹಿತ ಅಣುಗಳನ್ನು ಪರಸ್ಪರ ಬಂಧಿಸಿಡುತ್ತದೆ. ಅದನ್ನು ಬೈಂಡಿಂಗ್ ಎನರ್ಜಿ (Binding energy) ಎಂದು ನಾಮಕರಣ ಮಾಡಲಾಗಿದೆ. ಅರ್ಥಾತ್, ವಸ್ತುವು ಅದರ ಅಂತಿಮ ವಿಶ್ಲೇಷಣೆಯಲ್ಲಿ ಕೇವಲ ಶಕ್ತಿಯಾಗಿದೆ. ಈ ಶಕ್ತಿಯು ಗೋಚರ ವಸ್ತುವೇ? ಯಾವುದಾದರೊಂದು

ಸೂಕ್ಷ್ಮದರ್ಶಕದ ಮೂಲಕ ಅದನ್ನು ನೋಡಲು ಸಾಧ್ಯವಿದೆಯೇ? ಎಂಬುದು ನನ್ನ ಪ್ರಶ್ನೆ. ವಾಸ್ತವಿಕತೆಯು ಅಗೋಚರ ವಸ್ತು. ಮಾನವ ದೃಷ್ಟಿಯಿಂದ ಅದನ್ನು ನೋಡಲು ಸಾಧ್ಯವಿಲ್ಲವೆಂಬ ಸತ್ಯವನ್ನು ಆಧುನಿಕ ವಿಜ್ಞಾನವೂ ಒಪ್ಪಿದೆಯೆಂದು ಇದರಿಂದ ವ್ಯಕ್ತವಾಗುತ್ತದೆ.

ಹಾಗಿದ್ದರೆ ದೇವ ಪ್ರವಾದಿಯು ತಿಳಿಸುವ ಸತ್ಯವನ್ನು ಮುಟ್ಟಿ ನೋಡಲು ಸಾಧ್ಯವಾದರೆ ಮಾತ್ರ ನಾವು ನಂಬುವೆವೆಂಬ ಶರ್ತವು ಸಂಪೂರ್ಣ ಅರ್ಥಹೀನವೆಂಬುದು ವ್ಯಕ್ತ. ಇದು ಭಾರತದ ಚರಿತ್ರೆಯನ್ನು ಕಲಿಯುವ ಓರ್ವ ವಿದ್ಯಾರ್ಥಿಯು ಈಸ್ಟ್ ಇಂಡಿಯಾ ಕಂಪೆನಿಯ ಸ್ಥಿತಿಗತಿಗಳನ್ನು ಓದುವಾಗ, ಕಂಪೆನಿಯಲ್ಲಿದ್ದ ಎಲ್ಲ ಜನರನ್ನು ಕಣ್ಣ ಮುಂದೆ ತಂದು ನಿಲ್ಲಿಸಬೇಕು. ಗತಕಾಲೀನ ಘಟನೆಗಳೆಲ್ಲವೂ ನನ್ನ ಮುಂದೆ ಪುನರಾವರ್ತಿಸಬೇಕು. ಹಾಗಿದ್ದರೆ ಮಾತ್ರ ನಾನು ಅದನ್ನು ನಂಬುವೆನೆಂದು ಅಧ್ಯಾಪಕರೊಡನೆ ವಾದಿಸುವುದಕ್ಕೆ ಸಮಾನವಾಗಿದೆ.

ಹಾಗಿದ್ದರೆ, ಈ ಸಂದೇಶವು ಸತ್ಯವೋ, ಅಸತ್ಯವೋ, ಈ ಸಂದೇಶವನ್ನು ನಾವು ಅಂಗೀಕರಿಸಬೇಕೋ ಬೇಡವೋ ಎಂಬ ನಿರ್ಧಾರವನ್ನು ಯಾವ ಆಧಾರದಲ್ಲಿ ಕೈಗೊಳ್ಳಬೇಕು? ನನ್ನ ದೃಷ್ಟಿಯಲ್ಲಿ ಈ ಸಂದೇಶಗಳ ಪರಿಶೀಲನೆಗೆ ಮೂರು ವಿಶಿಷ್ಟ ಅಂಶಗಳಿವೆ.

1. ಅದರ ವಿವರಣೆಯು ಸತ್ಯದೊಂದಿಗೆ ಎಷ್ಟರ ಮಟ್ಟಿಗೆ ಹೊಂದಿಕೊಳ್ಳುತ್ತದೆ?
2. ಜೀವನದ ಪರಿಣಾಮದ ಕುರಿತು ಅದರ ವಾದವು ಕೇವಲ ವಾದವೋ, ಅಥವಾ ಸಾಧಾರವೋ?
3. ಅದು ಪ್ರಸ್ತಾಪಿಸಿರುವ ವಚನಗಳಿಗೆ ದೇವ ವಚನವೆಂದು ಕರೆಯಲ್ಪಡುವ ಏನಾದರೂ ವೈಶಿಷ್ಟ್ಯವಿದೆಯೇ?

ಈ ಮೂರು ಅಂಶಗಳಿಂದ ದೇವಪ್ರವಾದಿಯ ಚಟುವಟಿಕೆಗಳನ್ನು ಪರಿಶೀಲಿಸಿದಾಗ ಅವು ಈ ಮೂರು ಅಂಶಗಳನ್ನು ಯಶಸ್ವಿಯಾಗಿ ಒಳಗೊಂಡಿದೆಯೆಂದು ಮನವರಿಕೆಯಾಗಿದೆ.

1. ದೇವ ಪ್ರವಾದಿಯು ಪ್ರಪಂಚದ ಕುರಿತು ನೀಡಿದ ವಿವರಣೆಯಲ್ಲಿ ಪ್ರಶ್ನೆಯ ಎಲ್ಲ ಸಂಕೀರ್ಣತೆಗಳಿಗೂ ಪರಿಹಾರವಿದೆ. ನಮ್ಮ ಬಾಹ್ಯಾಂತರಂಗಗಳಲ್ಲಿ ಏಳುವ ಎಲ್ಲ ಪ್ರಶ್ನೆಗಳಿಗೂ ಅದು ಅತ್ಯುತ್ತಮ ಉತ್ತರವಾಗಿದೆ.

2. ಜೀವನದ ಪರಿಣಾಮಕ್ಕೆ ಸಂಬಂಧಿಸಿದ ವಾದಕ್ಕೂ ಸಂದೇಹಾತೀತವಾದ ಪುರಾವೆ ಅವರ ಬಳಿ ಇದೆ. ಭಾವೀ ಜೀವನದಲ್ಲಿ ಜರಗುವುದೆಂದು ಎಚ್ಚರಿಕೆ ನೀಡುವ ಪರಿಣಾಮದ ಒಂದು ಮಾದರಿಯು ಇಂದಿನ ಜೀವನದಲ್ಲಿ ಅವರು ನಮಗೆ ತೋರಿಸಿ ಕೊಡುತ್ತಾರೆ.

3. ದೇವದತ್ತವೆಂದು ಅವರು ವಾದಿಸುವ ವಚನದಲ್ಲಿ ಕೆಲವು ಅದ್ವಿತೀಯ ವೈಶಿಷ್ಟ್ಯಗಳು ಕಂಡು ಬರುತ್ತವೆ. ಖಂಡಿತವಾಗಿಯೂ ಇದು ಮಾನವಾತೀತವಾದ ಶಕ್ತಿಯೊಂದರ ವಚನ. ಮಾನವ ವಚನವು ಹಾಗಿರಲು ಸಾಧ್ಯವಿಲ್ಲವೆಂದು ಒಪ್ಪಬೇಕಾಗುವುದು.

**ಇನ್ನು ಈ ಮೂರು ಅಂಶಗಳಿಂದ ಪ್ರವಾದಿಯವರ(ಸ) ಬೋಧನೆಗಳನ್ನು ನಾವು ಪರಿಶೀಲಿಸೋಣ.**

ಮಾನವ ಮನಃಶಾಸ್ತ್ರಕ್ಕೆ ಸಂಪೂರ್ಣವಾಗಿ ಸರಿ ಹೊಂದುವುದೇ ಅದರ ಪ್ರಥಮ ವೈಶಿಷ್ಟ್ಯ. ಅಂದರೆ ಮಾನವನು ಹುಟ್ಟಿದ ಪ್ರಕೃತಿಯಲ್ಲಿಯೇ ಈ ವಿವರಣೆಯೂ ಇದೆ. ಈ ವಿವರಣೆಯ ಮೂಲಾಧಾರವು ದೇವಾಸ್ತಿತ್ವದ ಮೇಲೆ ಕಟ್ಟಲ್ಪಟ್ಟಿದೆ. ದೇವ ಪ್ರತಿಜ್ಞೆಯು ಮಾನವ ಪ್ರಕೃತಿಯಲ್ಲಿ ವಿಲೀನವಾಗಿದೆ. ಅದರ ಎರಡು ಪ್ರಬಲ ಲಕ್ಷಣಗಳಿವೆ.

1. ಮಾನವೇತಿಹಾಸದ ತಿಳಿಯಲ್ಪಟ್ಟ ಎಲ್ಲಾ ಕಾಲಗಳಲ್ಲಿಯೂ ಕೇವಲ ಬಹುಮಂದಿ ಮಾತ್ರವಲ್ಲ, ಸಾಮಾನ್ಯವಾಗಿ ಎಲ್ಲರೂ ದೇವಾಸ್ತಿತ್ವವನ್ನು ಒಪ್ಪಿಕೊಂಡಿದ್ದಾರೆ. ಬಹುಮಂದಿ ಮಾನವರು ದೇವ ಕಲ್ಪನೆಯನ್ನು ಕೈಬಿಟ್ಟ ಯಾವೊಂದು ಕಾಲವೂ ಕಳೆದುಹೋಗಿಲ್ಲ. ದೇವ ಕಲ್ಪನೆಯು ಮಾನವ ಪ್ರಕೃತಿಯ ಅತಿ ಪ್ರಬಲ ಕಲ್ಪನೆಯಾಗಿದೆಯೆಂದು ಪುರಾತನ ಕಾಲದಿಂದೀಚೆಗಿನ ಮಾನವೇತಿಹಾಸವು ಒಕ್ಕೊರಳಿನಿಂದ ಸಾಕ್ಷ್ಯ ವಹಿಸುತ್ತದೆ.

2. ಮಾನವನಿಗೆ ಏನಾದರೂ ಸಂದಿಗ್ಧ ಪರಿಸ್ಥಿತಿ ಎದುರಾದಾಗ ಆತನ ಆತ್ಮಸಾಕ್ಷಿಯು ಆತನಿಗರಿವಿಲ್ಲದೆಯೇ ದೇವನನ್ನು ಕೂಗುತ್ತದೆ. ಮಾನವನು ಅನ್ಯ ಸಹಾಯ ಗೋಚರಿಸದೆಡೆಯಲ್ಲಿ ದೇವ ಸಹಾಯವನ್ನು ಹುಡುಕುತ್ತಾನೆ. ಪಾಮರ, ಪಂಡಿತ, ಆಸ್ತಿಕ, ನಾಸ್ತಿಕ, ಪ್ರಗತಿಪರ, ಸಂಪ್ರದಾಯವಾದಿ ಹೀಗೆ ಯಾರೇ ಆಗಿದ್ದರೂ ಸಾಮಾನ್ಯ ಮಾನವ ಸಾಮರ್ಥ್ಯಗಳೆಲ್ಲವೂ ವಿಫಲವಾದ ಸನ್ನಿವೇಶದಲ್ಲಿ, ಸರ್ವಶಕ್ತಿಗಳಿಗಿಂತ ಮಿಗಿಲಾದ ಶಕ್ತಿ ಮತ್ತು ಸರ್ವಶಕ್ತಿಗಳ ಮೂಲವಾದ ಅಸ್ತಿತ್ವವನ್ನು

ಆತನು ಕರೆದು ಪ್ರಾರ್ಥಿಸುತ್ತಾನೆ. ಸಂದಿಗ್ಧ ಪರಿಸ್ಥಿತಿಗಳಲ್ಲಿ ದೇವನನ್ನು ಕೂಗಿ ಕರೆಯಲು ಮಾನವನು ನಿರ್ಬಂಧಿತನಾಗಿದ್ದಾನೆ. ಸ್ಟಾಲಿನನ ಜೀವನದಲ್ಲಿ ಇದರ ಸ್ವಾರಸ್ಯಪೂರ್ಣ ಉದಾಹರಣೆ ನಮಗೆ ದೊರೆಯುತ್ತದೆ. ದ್ವಿತೀಯ ಜಾಗತಿಕ ಯುದ್ಧದ ಕುರಿತು ಚರ್ಚಿಲರು ಬರೆದ ಗ್ರಂಥದ ನಾಲ್ಕನೇ ಸಂಪುಟದ 433ನೇ ಪುಟದಲ್ಲಿ ಅದನ್ನು ಹೇಳಲಾಗಿದೆ. ಹಿಟ್ಲರನು ಯುರೋಪಿಗೆ ಸಂಪೂರ್ಣ ದುಃಸ್ವಪ್ನವಾಗಿದ್ದ 1941ರ ಸಂದಿಗ್ಧ ವೇಳೆಯಲ್ಲಿ ಚರ್ಚಿಲ್‌ರು ಮಾಸ್ಕೋಕ್ಕೆ ಹೋಗಿದ್ದರು. ಮೈತ್ರಿ ಕೂಟದ ಸೇನಾ ಚಟುವಟಿಕೆಗಳ ಬಗ್ಗೆ ಚರ್ಚಿಲ್ ತನ್ನ ಕಾರ್ಯಕ್ರಮಗಳ ವಿವರವನ್ನು ಸ್ಟಾಲಿನ್‌ರಿಗೆ ವಿವರಿಸುತ್ತಲಿದ್ದರು; ವಿವರಣೆಯು ಒಂದು ವಿಶಿಷ್ಟ ಹಂತಕ್ಕೆ ತಲಪಿದಾಗ, ಸ್ಟಾಲಿನ್ ಆವೇಶಭರಿತನಾಗಿ, "ದೇವನು ಈ ಯೋಜನೆಯನ್ನು ಯಶಸ್ವಿಗೊಳಿಸಲಿ" ಎಂದು ಹೇಳಿಬಿಟ್ಟನು.

ಅದರೊಂದಿಗೆ ಪ್ರವಾದಿ ಸಂದೇಶದ ಇನ್ನೊಂದು ವೈಶಿಷ್ಟ್ಯವು ಮಾನವನು ತಿಳಿಯಬಯಸುವ ಹಾಗೂ ಪ್ರಪಂಚದ ಅಧ್ಯಯನ ನಡೆಸುವಾಗ ಮನದಲ್ಲಿ ಉದಯವಾಗುವ ಎಲ್ಲ ಪ್ರಶ್ನೆಗಳಿಗೂ ಅದರಲ್ಲಿ ಸಮರ್ಪಕ ವಿವರಣೆಯಿರುವುದಾಗಿದೆ. ಪ್ರಪಂಚವು ಆಕಸ್ಮಿಕವಾಗಿರಲು ಸಾಧ್ಯವಿಲ್ಲ. ಅದಕ್ಕೋರ್ವ ನಿರ್ಮಾಪಕ ಖಂಡಿತವಾಗಿಯೂ ಅಗತ್ಯವೆಂಬ ತೀರ್ಮಾನಕ್ಕೆ ಪ್ರಪಂಚದ ಅಧ್ಯಯನವು ನಮ್ಮನ್ನು ತಲಪಿಸಿತ್ತು. ಆದರೆ ನಂತರ ಉದ್ಭವಿಸುವ, ಆ ಸೃಷ್ಟಿಕರ್ತನಾರೆಂಬ ಪ್ರಶ್ನೆಗೆ ಪ್ರವಾದಿಯ ವಿವರಣೆಯಲ್ಲಿ ಸ್ಪಷ್ಟ ಉತ್ತರವಿದೆ. ಪ್ರಪಂಚವು ಕೇವಲ ಒಂದು ಭೌತಿಕ ಯಂತ್ರವಲ್ಲ. ಅದನ್ನು ನಡೆಸುತ್ತಿರುವ ಅಸಾಮಾನ್ಯ ಬುದ್ಧಿಯು ಅದರ ಹಿಂದೆ ಕಾರ್ಯೋನ್ಮುಖವಾಗಿದೆಯೆಂದು ನಮಗೆ ಭಾಸವಾಗುತ್ತಿತ್ತು. ಈ ಪ್ರಶ್ನೆಗೂ ಪ್ರಸ್ತುತ ವಿವರಣೆಯಲ್ಲಿ ಉತ್ತರವಿದೆ. ನಾವು ನಮ್ಮ ವಿಧಾತನನ್ನು ಹುಡುಕುತ್ತಿದ್ದೆವು. ನಮಗೆ ಅಭಯ ಕೇಂದ್ರವಾಗಬಲ್ಲ ಮೂಲವನ್ನು ಅರಸುತ್ತಿದ್ದೆವು. ಅದು ಯಾರೆಂಬ ಪ್ರಶ್ನೆಗೂ ಪ್ರಸ್ತುತ ವಿವರಣೆಯು ಉತ್ತರ ನೀಡುತ್ತದೆ. ಮಾನವ ಜೀವನವು ಇಷ್ಟೊಂದು ಸಂಕ್ಷಿಪ್ತವಾಯಿತೇಕೆಂದು ನಾವು ಅಚ್ಚರಿ ಪಡುತ್ತಿದ್ದೆವು. ಅದು ಸುದೀರ್ಘವಾಗಿರಲೆಂದು ನಾವು ಬಯಸುತ್ತಿದ್ದೆವು. ನಮ್ಮ ಸಕಲ ಆಶೆ-ಆಕಾಂಕ್ಷೆಗಳು ಈಡೇರಬಲ್ಲ ಅತಿ

---

* *ಡಾ| ಸೈಯದ್ ಅಬ್ದುಲ್ಲತೀಫ್: 'ದಿ ಮೈಂಡ್ ಅಲ್ ಕುರ್‌ಆನ್ ಬಿಲ್ಡ್ಸ್'*

ವಿಶಾಲವಾದ ರಂಗವನ್ನು ನಾವು ಅನ್ವೇಷಿಸುತ್ತಿದ್ದೆವು. ಪ್ರವಾದಿಯ(ಸ) ವ್ಯಾಖ್ಯಾನದಲ್ಲಿ ಅದಕ್ಕೂ ಉತ್ತರವಿದೆ. ಸತ್ಯಾಸತ್ಯಗಳು ಸ್ಪಷ್ಟವಾಗಿ ವಿಭಜಿಸಲ್ಪಡಬೇಕು. ಸಜ್ಜನರು ಮತ್ತು ದುರ್ಜನರು ಬೇರ್ಪಡಬೇಕು. ಪ್ರತಿಯೊಬ್ಬರಿಗೂ ಅರ್ಹವಾದ ಸ್ಥಾನ ನೀಡಲ್ಪಡಬೇಕು. ಇದು ಮಾನವ ಪ್ರಕೃತಿಯ ಅನಿವಾರ್ಯ ಬೇಡಿಕೆಯಾಗಿದ್ದಿತು. ಈ ಬೇಡಿಕೆಯ ಉತ್ತರವೂ ಪ್ರಸ್ತುತ ವಿವರಣೆಯಲ್ಲಿದೆ. ಸಂಕ್ಷಿಪ್ತದಲ್ಲಿ, ಅದು ಜೀವನಕ್ಕೆ ಸಂಬಂಧಪಟ್ಟ ಎಲ್ಲ ಪ್ರಶ್ನೆಗಳ ಸಮಗ್ರ ಉತ್ತರವಾಗಿದೆ. ಅದಕ್ಕಿಂತ ಉತ್ತಮವಾದ ಉತ್ತರವನ್ನು ನಮ್ಮಿಂದ ಊಹಿಸಲೂ ಅಸಾಧ್ಯ. ಅದು ಪ್ರಪಂಚದ ಅಧ್ಯಯನವು ನಮ್ಮಲ್ಲಿ ಮೂಡಿಸುವ ಎಲ್ಲಪ್ರಶ್ನೆಗಳಿಗೂ ಪರಿಹಾರವಾಗಿದೆ.

ಪ್ರವಾದಿ ಸಂದೇಶದ ದ್ವಿತೀಯ ಸುಸ್ಪಷ್ಟ ವೈಶಿಷ್ಟ್ಯವು, ಜೀವನದ ಪರಿಣಾಮದ ಕುರಿತು ಅವರು ಪ್ರತಿಪಾದಿಸಿದ ಸಿದ್ಧಾಂತದ ಒಂದು ಜ್ವಲಂತ ಮಾದರಿಯು ಇಂದಿನ ಜೀವನದಲ್ಲಿ ಅವರು ನಮಗೆ ತೋರಿಸಿ ಕೊಟ್ಟಿರುವುದಾಗಿದೆ. ಮರ್ದಕ ಮತ್ತು ಮರ್ದಿತರನ್ನೊಳಗೊಂಡ ಈ ಲೋಕವು ಇದೇ ರೀತಿ ಕೊನೆಗೊಳ್ಳಲಾರದು. ಅದರ ಪರಿಣಾಮ ಹಂತದಲ್ಲಿ ಪ್ರಪಂಚದ ಪ್ರಭುವು ಹಸ್ತಕ್ಷೇಪ ನಡೆಸಿ, ಸಜ್ಜನರನ್ನೂ ದುರ್ಜನರನ್ನೂ ವಿಂಗಡಿಸುತ್ತಾನೆ.

ಅದಕ್ಕೆ ನಮಗೆ ಇಲ್ಲಿ ನಿಗದಿಯಾಗಿರುವ ಅವಧಿಯು ಮುಗಿಯುವ ವಿಳಂಬವೇ ಇರುವುದೆಂದು ಅದು ನಮಗೆ ತಿಳಿಸುತ್ತದೆ.

ಪ್ರವಾದಿವರ್ಯರು(ಸ) ಕೇವಲ ಇಷ್ಟನ್ನೇ ಹೇಳಿ ಸಾಕು ಮಾಡಲಿಲ್ಲ. ನಾನು ಪ್ರತಿಪಾದಿಸುತ್ತಿರುವುದರ ಸ್ಪಷ್ಟ ಸಾಕ್ಷ್ಯವೆಂಬ ನೆಲೆಯಲ್ಲಿ ಬರಲಿರುವ ದೇವನ್ಯಾಯ ಶಾಸನದ ಒಂದು ಮಾದರಿಯನ್ನು ಪ್ರಪಂಚದ ಪ್ರಭುವು ನನ್ನ ಮೂಲಕ ಈ ಲೋಕದಲ್ಲಿಯೇ ತೋರಿಸಿಕೊಡುತ್ತಾನೆ. ನನ್ನ ಮೂಲಕ ಸತ್ಯವನ್ನು ಗೆಲ್ಲಿಸಿ ಅಸತ್ಯವನ್ನು ಸೋಲಿಸುತ್ತಾನೆ. ದೇವಾನುಸಾರಿಗಳಿಗೆ ವಿಜಯ ಮತ್ತು ಉತ್ಕೃಷ್ಟ ಪದವಿ ನೀಡುವನು, ಧಿಕ್ಕಾರಿಗಳನ್ನು ನೀಚರು ಮತ್ತು ನಿಂದ್ಯರಾಗಿಸಿ ದೇವಶಿಕ್ಷೆಗೆ ಗುರಿಪಡಿಸುವನೆಂದೂ ಅವರು ಎಚ್ಚರಿಕೆ ನೀಡಿದ್ದರು. ಜನರು ಎಷ್ಟೇ ವಿರೋಧಿಸಿದರೂ, ಸರ್ವಶಕ್ತಿಯನ್ನು ಪ್ರಯೋಗಿಸಿದರೂ ಅದು ಸಂಭವಿಸಿಯೇ ಸಿದ್ಧ. ಪರಲೋಕದ ಆವಿರ್ಭಾವವು ಸುನಿಶ್ಚಿತ ಮತ್ತು ಅನಿಷೇಧ್ಯವಾಗಿರುವಂತೆಯೇ ಅದರ ಮಾದರಿಯು ನನ್ನ ಜೀವನದಲ್ಲಿ ತೋರಿಸಲ್ಪಡುವುದು ಅನಿವಾರ್ಯವಾಗಿದೆ. ಇದು ಬರಲಿರುವ ದಿನದ ಸಂಕೇತವಾಗಿದೆ.

ಪ್ರಪಂಚದ ವ್ಯವಸ್ಥೆಯು ಸತ್ಯಾಧಿಷ್ಠಿತ ಮತ್ತು ನಾನು ಪ್ರತಿನಿಧೀಕರಿಸುವ ಶಕ್ತಿಯು ಅಜೇಯವೆಂಬುದರ ದೃಷ್ಟಾಂತವಾಗಿರುವುದು! ಅದೊಂದು ದಿನ ಆ ಶಕ್ತಿಯು ಮಾನವ ಕುಲವನ್ನು ತನ್ನ ಸನ್ನಿಧಿಯಲ್ಲಿ ಹಾಜರುಪಡಿಸಿ ಶಾಶ್ವತ ತೀರ್ಪನ್ನು ಕೊಡುವುದು!

ಈ ಪಂಥಾಹ್ವಾನ ನೀಡುವಾಗ ಪ್ರವಾದಿಯು ಒಂಟಿಯಾಗಿದ್ದರು. ಜನತೆಯು ಸಂಪೂರ್ಣವಾಗಿ ಅವರ ಕಡು ವೈರಿಯಾಗಿತ್ತು. ಜನ್ಮ ಭೂಮಿಯೂ ಅವರಿಗೆ ಸ್ಥಳ ನೀಡಲಿಲ್ಲ. ಅತಿ ಸಮೀಪದ ಸಂಬಂಧಿಕರೂ ಅವರನ್ನು ಕೈಬಿಟ್ಟಿದ್ದರು. ಯಾವೊಂದು ಭೌತಿಕ ಉಪಕರಣವೂ ಅವರ ಬಳಿಯಿರಲಿಲ್ಲ. ಅಂತಹ ಓರ್ವ ವ್ಯಕ್ತಿಯು ಸಧೈರ್ಯ ಮತ್ತು ಆತ್ಮವಿಶ್ವಾಸದಿಂದ ಹೀಗೆ ಘೋಷಿಸುತ್ತಾರೆ. "ನಾನು ಜಯ ಗಳಿಸುತ್ತೇನೆ. ನನ್ನ ಮೂಲಕ ದೇವನ ನ್ಯಾಯಪೀಠವು ಭೂಮಿಯಲ್ಲಿ ಸ್ಥಾಪನೆಗೊಳ್ಳುವುದು!" ಶ್ರೋತೃಗಳು ಅವರನ್ನು ಗೇಲಿ ಮಾಡುತ್ತಾರೆ. ಆದರೂ ಪೂರ್ಣ ಗಾಂಭೀರ್ಯದೊಂದಿಗೆ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಾರೆ. ಬಹುಮಂದಿ ಅವರನ್ನು ವಧಿಸಲು ನಿರ್ಧರಿಸುತ್ತಾರೆ. ಅವರ ಎಲ್ಲ ಉಪಜೀವನ ಮಾರ್ಗಗಳನ್ನು ಹಾಳುಗೆಡಹುತ್ತಾರೆ. ಅವರನ್ನು ದೇಶ ತೊರೆಯಲು ನಿರ್ಬಂಧಿಸುತ್ತಾರೆ ಮಾತ್ರವಲ್ಲ, ಅವರ ಕೊಲೆಗಾಗಿ ಸರ್ವಸಾಮರ್ಥ್ಯವನ್ನೂ ಬಳಸುತ್ತಾರೆ. ಆದರೆ ಈ ಎಲ್ಲ ಪ್ರಯತ್ನಗಳೂ ವಿಫಲವಾದುವು! ಒಂದೆಡೆ ಬೆರಳೆಣಿಕೆಯ ಅಲ್ಪಸಂಖ್ಯಾತರು, ಇನ್ನೊಂದೆಡೆ ಭಾರೀ ಬಹುಸಂಖ್ಯಾತರು. ಒಂದೆಡೆ ಸಕಲ ಭೌತಿಕ ಸಾಧನ ಸಲಕರಣೆಗಳು ಇನ್ನೊಂದೆಡೆ ಏನೂ ಇಲ್ಲ. ಒಂದೆಡೆ ಆಪ್ತರ ಮತ್ತು ಸಹಸಮುದಾಯಗಳ ಸಹಾಯ ಸಹಕಾರ, ಇನ್ನೊಂದೆಡೆ ಆಪ್ತರ ಮತ್ತು ಅನ್ಯರ ಜಂಟಿ ವಿರೋಧ! ಇಂತಹ ಅತ್ಯಂತ ಪ್ರತಿಕೂಲ ವಾತಾವರಣದಲ್ಲಿ ಅವರ ಅನುಯಾಯಿಗಳೇ ಸ್ವಯಂ ದಿಗ್ಭ್ರಮೆಗೊಳ್ಳುತ್ತಾರೆ. ಆದರೆ ಅವರು ಸದಾ ಒಂದೇ ಮಾತನ್ನು ಹೇಳುತ್ತಿರುತ್ತಾರೆ. *"ತಾಳ್ಮೆ ವಹಿಸಿರಿ. ದೇವನ ತೀರ್ಮಾನವು ಬಂದೇ ತೀರುವುದು, ಯಾವೊಂದು ಶಕ್ತಿಯಿಂದಲೂ ಅದನ್ನು ತಡೆಹಿಡಿಯಲು ಸಾಧ್ಯವಿಲ್ಲ!"*

ಈ ಪಂಥಾಹ್ವಾನ ನೀಡಿದ 25 ವರ್ಷಗಳಲ್ಲಿ ಅವರ ಭವಿಷ್ಯವಾಣಿಯು ಸಂಪೂರ್ಣ ಸಾಕ್ಷಾತ್ಕಾರವಾಗುತ್ತದೆ. ಅವರು ತಮ್ಮ ಚಟುವಟಿಕೆಗಳನ್ನು ಯಾವೊಂದು ವಾದದಿಂದ ಆರಂಭಿಸಿದ್ದರೋ, ಆ ವಾದವು ಸಂಪೂರ್ಣವಾಗಿ ಪ್ರತ್ಯಕ್ಷವಾಗುವ ಅಭೂತಪೂರ್ವ ಘಟನೆಯು ಜರಗುತ್ತದೆ. ವಿರೋಧಿಗಳಿಗೆ ಅವರಲ್ಲಿ ಯಾವುದೇ ಹೆಚ್ಚು ಕಡಿಮೆ ಮಾಡಲು ಸಾಧ್ಯವಾಗಲಿಲ್ಲ. ಸತ್ಯಾಸತ್ಯವು ಬೇರ್ಪಡಿಸಲ್ಪಟ್ಟಿತು. ದೇವನ ಆಜ್ಞಾಪಾಲಕರಿಗೆ ಸ್ಥಾನಮಾನ ಮತ್ತು ವಿಜಯ ಲಭಿಸಿತು. ಧಿಕ್ಕಾರಿಗಳ ಶಕ್ತಿ ನಾಶವಾಯಿತು.

ಅವರು ಕೇವಲ ಪ್ರಜೆಗಳಾಗಿ ಮಾರ್ಪಟ್ಟರು!

ಹೀಗೆ ಪ್ರಸ್ತುತ ಸಂದೇಶವು ಮಾನವ ಪರಿಣಾಮದ ಕುರಿತು ನೀಡಿದ ಎಚ್ಚರಿಕೆಯ ಮಾದರಿಯು ಲೋಕಾಂತ್ಯದ ವರೆಗೆ ಒಂದು ನೀತಿ ಪಾಠವಾಗಿ ಉಳಿಯಿತು. ಆ ಮಾದರಿಯು ಪರಲೋಕದಲ್ಲಿ ಮಾನವರೆಲ್ಲರನ್ನೂ ದೇವನ ನ್ಯಾಯಾಲಯದಲ್ಲಿ ಹಾಜರುಪಡಿಸಿ, ಅವರ ಕುರಿತು ಅಂತಿಮ ತೀರ್ಮಾನ ಕೈಗೊಳ್ಳುವ ವೇಳೆ ಪೂರ್ಣವಾಗುವುದು.

ಪ್ರವಾದಿಯ ವಾದವು ಸತ್ಯವೆಂಬುದಕ್ಕೆ ದೇವ ವಚನವೆಂದು ಅವರು ಉದ್ಧರಿಸಿದ ವಾಕ್ಯಗಳು ಮೂರನೇ ಸಾಕ್ಷಿಯಾಗಿವೆ. ಈ ವಾಕ್ಯಗಳು ಆವಿಷ್ಕೃತಗೊಂಡು ಶತಮಾನಗಳು ಕಳೆದುವು. ಅವರ ಶ್ರೇಷ್ಠತೆ ಮತ್ತು ಸತ್ಯತೆಯನ್ನು ತಿಳಿಯಲು ಒಂದು ವಿಷಯ ಧಾರಾಳ ಸಾಕು. ಆ ಪ್ರತಿಪಾದನೆಯ ಒಂದಕ್ಷರವೂ ಈ ತನಕ ತಪ್ಪೆಂದು ಸಾಬೀತಾಗಿಲ್ಲ. ಮಾನವ ನಿರ್ಮಿತವಾದ ಯಾವೊಂದು ಕೃತಿಯೂ ಅಂತಹ ಲೋಪಗಳಿಂದ ಮುಕ್ತವಾಗಿಲ್ಲ.

ಇದನ್ನೇ ಇನ್ನೊಂದು ಮಾತಿನಲ್ಲಿ ಕುರ್‌ಆನ್ ದೇವ ಗ್ರಂಥವೆಂಬುದಕ್ಕೆ ಕುರ್‌ಆನೇ ಸಾಕ್ಷಿಯೆಂದೂ ಹೇಳಬಹುದು. ಇದಕ್ಕೆ ಹಲವು ಅಂಶಗಳಿದ್ದರೂ ಕೇವಲ ಮೂರು ಅಂಶಗಳನ್ನು ಇಲ್ಲಿ ಪ್ರತಿಪಾದಿಸುತ್ತೇನೆ.

**1.** ಕುರ್‌ಆನ್‌ನ ಅಸಾಮಾನ್ಯ ಪ್ರತಿಪಾದನಾ ಶೈಲಿ

**2.** ವಿರೋಧಾಭಾಸಗಳಿಂದ ಮುಕ್ತವಾದ ಅದರ ತತ್ವ

**3.** ಅದರ ಅನಶ್ವರತೆ

**1.** ಪವಿತ್ರ ಕುರ್‌ಆನ್ ಅಸಾಮಾನ್ಯ ಗ್ರಂಥವಾಗಿದೆ. ಅದರ ಕರ್ತನು ಮಾನವನಿಗೆ ಅಪ್ರಾಪ್ತವಾದ ಉನ್ನತ ಸ್ಥಾನದಿಂದ ಮಾತನಾಡುತ್ತಿರುವನೆಂದು ಅದನ್ನು ಓದುವ ಯಾರಿಗೂ ಸುಲಭದಲ್ಲಿ ತಿಳಿಯಬಹುದು. ಅದರ ವಾಕ್ಯಗಳ ಗಾಂಭೀರ್ಯ, ನಿರರ್ಗಳತೆ, ಅದರ ವಿಧಿ ನಿರ್ಣಾಯಕ ವಿವರಣಾ ಶೈಲಿಗಳು ಅತ್ಯದ್ಭುತ ರೀತಿಯಲ್ಲಿ ಮಾನವ ವಚನಗಳಿಗಿಂತ ಭಿನ್ನವಾಗಿವೆ. ಅಂದರೆ ಅದು ಮಾನವ ಧ್ವನಿಯಲ್ಲ. ಅದು ಪ್ರಪಂಚದ ಪ್ರಭುವಿನ ಧ್ವನಿಯೆಂದು ಸುಲಭದಲ್ಲಿ ಗ್ರಹಿಸಬಹುದು. ಅದು ದೇವಗ್ರಂಥ. ಅದರ ಮೂಲಕ ದೇವನು ತನ್ನ ದಾಸರನ್ನು ಅಭಿಸಂಬೋಧಿಸುತ್ತಿರುವನೆಂದು ಅದರ ಸುಸ್ಪಷ್ಟ ಹಾಗೂ ಶ್ರೇಷ್ಠ ವಚನಗಳು ಸ್ವಯಂ ಸಾರುತ್ತಿವೆ. ಕುರ್‌ಆನ್‌ನಲ್ಲಿ ಪ್ರಪಂಚದ ವಾಸ್ತವಿಕತೆಗಳನ್ನು ವಿವರಿಸಲಾಗಿದೆ. ಪ್ರಪಂಚದ ಪರಿಣಾಮದ ಕುರಿತು ವಿವರಣೆ

ನೀಡಲ್ಪಟ್ಟಿದೆ. ಜೀವನದ ಪ್ರತ್ಯಕ್ಷ ಹಾಗೂ ಪರೋಕ್ಷ ಸ್ಥಿತಿಗಳನ್ನು ಪ್ರತಿಪಾದಿಸಲಾಗಿದೆ. ಘಟನೆಯ ವಿವರಣೆಯು ಪ್ರತ್ಯಕ್ಷ ಪ್ರದರ್ಶನವೆಂಬಂತೆ ಸ್ಪಷ್ಟ ಮತ್ತು ಖಚಿತ ಶೈಲಿಯಲ್ಲಿದೆ. ಕುರ್‌ಆನನ್ನು ಓದುವಾಗ, ಅದು ಸತ್ಯಜ್ಞಾನವನ್ನು ನೀಡುತ್ತಿರುವುದರೊಂದಿಗೆ ಮಾನವನನ್ನು ಸತ್ಯದ ಮುಂದೆ ತಂದು ನಿಲ್ಲಿಸಿದಂತೆ ಭಾಸವಾಗುತ್ತದೆ. ಘಟನೆಯನ್ನು ಗ್ರಂಥದ ಪುಟಗಳಲ್ಲಿ ಓದುತ್ತಿರುವಾಗ, ಪರದೆಯಲ್ಲಿ ಕಣ್ಣಾರೆ ವೀಕ್ಷಿಸುತ್ತಿರುವಂತೆ ಭಾಸವಾಗುವುದು! ಇದು ಸತ್ಯವನ್ನು ನೇರವಾಗಿ ತಿಳಿಯುವ ಓರ್ವನ ಮಾತೆಂದು ಅದರ ಸುಸ್ಪಷ್ಟತೆ ಮತ್ತು ನಿಷ್ಕರ್ಷೆಯು ಸಾಬೀತುಪಡಿಸುತ್ತದೆ. ಹೀಗೆ ನೇರ ಜ್ಞಾನವಿಲ್ಲದ ಮಾನವನ ಮಾತುಗಳಲ್ಲಿ ಅಂತಹ ನಿಖರತೆಯಿರಲಾರದು. ಉದಾಹರಣೆಗಾಗಿ ಕುರ್‌ಆನ್‌ನ ಒಂದು ಸಣ್ಣ ಅಧ್ಯಾಯವನ್ನು ಇಲ್ಲಿ ಉದ್ಧರಿಸೋಣ:

*"ಆಕಾಶವು ಒಡೆದು ಸೀಳಾಗುವಾಗ, ನಕ್ಷತ್ರಗಳು ಚದರಿ ಹೋಗುವಾಗ, ಸಮುದ್ರಗಳು ಭೇದಿಸಲ್ಪಡುವಾಗ ಮತ್ತು ಸಮಾಧಿಗಳು ತೆರೆಯಲ್ಪಡುವಾಗ, ಪ್ರತಿಯೊಬ್ಬ ವ್ಯಕ್ತಿಗೆ ತಾನು ಮುಂದೆ ಕಳುಹಿಸಿದ ಮತ್ತು ಹಿಂದೆ ಬಿಟ್ಟಿರುವ ಕರ್ಮಗಳೇನೆಂಬುದು ತಿಳಿದು ಬರುವುದು.*

*ಓ ಮಾನವ! ಆ ನಿನ್ನ ಕರುಣಾಮಯಿ ಪ್ರಭುವಿನ ಬಗ್ಗೆ ನಿನ್ನನ್ನು ಮೋಸಕ್ಕೊಳಪಡಿಸಿದ ವಸ್ತು ಯಾವುದು? ಅವನು ನಿನ್ನನ್ನು ಸೃಷ್ಟಿಸಿದನು, ನಿನ್ನನ್ನು ನಖಶಿಕಾಂತ ಸರಿಪಡಿಸಿದನು, ನಿನ್ನನ್ನು ಸಂತುಲಿತಗೊಳಿಸಿದನು, ತಾನಿಚ್ಛಿಸಿದ ರೂಪದಲ್ಲಿ ನಿನ್ನನ್ನು ಜೋಡಿಸಿ ರಚಿಸಿದನು. ಖಂಡಿತ ಅಲ್ಲ. ವಾಸ್ತವದಲ್ಲಿ ನೀವು ಕರ್ಮಫಲವನ್ನು ಅಲ್ಲಗಳೆಯುತ್ತೀರಿ. ವಸ್ತುತಃ ನಿಮ್ಮ ಮೇಲೆ ಕಾವಲುಗಾರರು ನಿಯುಕ್ತರಾಗಿರುವರು. ನಿಮ್ಮ ಪ್ರತಿಯೊಂದು ಕೃತ್ಯವನ್ನೂ ಬಲ್ಲ ಗೌರವಾನ್ವಿತ ಬರಹಗಾರರು.*

*ನಿಸ್ಸಂದೇಹವಾಗಿಯೂ ಸಜ್ಜನರು ಪರಮ ಸುಖದಲ್ಲಿರುವರು. ಮತ್ತು ಖಂಡಿತವಾಗಿಯೂ ದುಷ್ಕರ್ಮಿಗಳು ನರಕಾಗ್ನಿಯಲ್ಲಿರುವರು. ಪ್ರತಿಫಲದ ದಿನ ಅವರು ಅದರೊಳಗೆ ಪ್ರವೇಶಿಸುವರು ಮತ್ತು ಅದರಿಂದ ಖಂಡಿತ ಮಾಯವಾಗಲಾರರು. ಪ್ರತಿಫಲದ ಆ ದಿನ ಏನೆಂಬುದು ನಿಮಗೇನು ಗೊತ್ತು? ಹೌದು, ಪ್ರತಿಫಲದ ಆ ದಿನ ಏನೆಂಬುದು ನಿಮಗೇನು ಗೊತ್ತು? ಅದು ಯಾರೂ ಯಾರಿಗೂ ಏನನ್ನೂ ಮಾಡಲು ಸಾಧ್ಯವಾಗದ ದಿನ. ಅಂದು ತೀರ್ಮಾನವೆಲ್ಲವೂ ಸರ್ವಸಂಪೂರ್ಣವಾಗಿ ಅಲ್ಲಾಹನ*

*ಅಧಿಕಾರದಲ್ಲಿರುವುದು."*

(ಅಲ್ ಇನ್‌ಫಿತಾರ್: 1-19)*

ಎಂತಹ ವಿಶ್ವಾಸಭರಿತ ವಚನ! ಜೀವನದ ಆದಿ ಮತ್ತು ಅಂತ್ಯವು ಇದರಲ್ಲಿ ಪ್ರತಿಪಾದಿಸಲ್ಪಟ್ಟಿದೆ. ಜೀವನ ಮತ್ತು ಪ್ರಪಂಚದ ಕುರಿತು ಬರೆಯಲ್ಪಟ್ಟಿರುವ ಯಾವ ಮಾನವ ಗ್ರಂಥವೂ ಈ ದೃಢ ವಿಶ್ವಾಸಕ್ಕೆ ಉಪಮೆಯಾಗುವುದಿಲ್ಲ. ಮಾನವನು ಸಹಸ್ರಾರು ವರ್ಷಗಳಿಂದ ಪ್ರಪಂಚದ ವಾಸ್ತವಿಕತೆಯ ಬಗ್ಗೆ ಆಲೋಚಿಸಿ ತಲೆಚಿಟ್ಟು ಮಾಡುತ್ತಿದ್ದಾನೆ. ದೊಡ್ಡ ದೊಡ್ಡ ತತ್ವಶಾಸ್ತ್ರಜ್ಞರೂ ವಿಜ್ಞಾನಿಗಳೂ ರಂಗಕ್ಕಿಳಿದರು. ಆದರೆ ಯಾರಿಗೂ ಇಷ್ಟೊಂದು ಖಚಿತವಾಗಿ ಮಾತಾಡುವ ಧೈರ್ಯ ಬಂದಿದೆಯೇ? ವಿಜ್ಞಾನಕ್ಕೆ ಇಂದಿಗೂ ಖಚಿತ ಜ್ಞಾನ ಲಭ್ಯವಾಗಿಲ್ಲವೆಂದು ಸ್ವಯಂ ವಿಜ್ಞಾನವೇ ಒಪ್ಪುತ್ತದೆ. ಆದರೆ ಸಮಗ್ರ ಜ್ಞಾನ ಮತ್ತು ಪರಮ ಸತ್ಯವನ್ನು ಗಳಿಸಲಾಗಿದೆಯೆಂಬ ಸ್ಥೈರ್ಯದಿಂದ ಕುರ್‌ಆನ್ ಮಾತಾಡುತ್ತದೆ.

**2.** ಪವಿತ್ರ ಕುರ್‌ಆನ್ ಅಭೌತಿಕ ಸತ್ಯಗಳಿಂದ ನಾಗರಿಕ ಸಮಸ್ಯೆಗಳ ವರೆಗಿನ ಎಲ್ಲ ಪ್ರಾಮುಖ್ಯ ವಿಷಯಗಳನ್ನು ಪ್ರತಿಪಾದಿಸಿದ್ದರೂ ಅದರಲ್ಲಿ ಎಲ್ಲಿಯೂ ವಿರೋಧಾಭಾಸ ಕಂಡುಬರುವುದಿಲ್ಲ. ಇದು ಕುರ್‌ಆನ್ ದೇವೋಕ್ತವೆಂಬುದಕ್ಕೆ ದ್ವಿತೀಯ ಆಧಾರವಾಗಿದೆ. ಕುರ್‌ಆನ್ ಅವತೀರ್ಣಗೊಂಡು ಸುಮಾರು ಒಂದೂವರೆ ಸಾವಿರ ವರ್ಷಗಳು ಕಳೆದುವು. ಈ ಕಾಲಾವಧಿಯಲ್ಲಿ ಮಾನವನು ಅನೇಕ ಹೊಸ ವಿಷಯಗಳನ್ನು ಅರಿತು ಕೊಂಡಿದ್ದಾನೆ. ಆದರೆ ಕುರ್‌ಆನ್‌ನ ಪ್ರತಿಪಾದನೆಗಳಲ್ಲಿ ಈ ತನಕ ಯಾವೊಂದು ವೈರುಧ್ಯವೂ ಕಂಡು ಬಂದಿಲ್ಲ. ಮಾತಿನಲ್ಲಿ ವೈರುಧ್ಯ ಮತ್ತು ಭಿನ್ನತೆಯಿಲ್ಲದ ಯಾವೊಬ್ಬ ತತ್ವಜ್ಞಾನಿಯನ್ನೂ ನಾವು ಕಂಡಿಲ್ಲ. ಈ ಕಾಲಾಂತರದಲ್ಲಿ ಸಹಸ್ರಾರು ತತ್ವಜ್ಞಾನಿಗಳು ರಂಗಕ್ಕೆ ಬಂದರು. ಸ್ವ-ಬುದ್ಧಿಯಿಂದ ಜೀವನ ಮತ್ತು ಪ್ರಪಂಚವನ್ನು ವ್ಯಾಖ್ಯಾನಿಸುವ ಅನೇಕ ಪ್ರಯತ್ನಗಳನ್ನು ಅವರು ನಡೆಸಿದರು. ಆದರೆ ಕಾಲ ವಿಳಂಬವಿಲ್ಲದೇ ಅವರ ಮಾತಿನಲ್ಲಿರುವ ವೈರುಧ್ಯವು ಬಹಿರಂಗವಾಯಿತು. ಕಾಲವು ಅವರನ್ನು ತಿರಸ್ಕರಿಸಿ ಮುಂದೆ ಸಾಗಿತು.

ಒಂದು ವಚನದಲ್ಲಿ ವೈರುಧ್ಯವಿಲ್ಲದಿರುವುದು ಅದು ಸತ್ಯದೊಂದಿಗೆ ಸಂಪೂರ್ಣ

---

* *ಮೂಲ ವಾಕ್ಯದ ಪ್ರಭಾವ ಅನುವಾದಕ್ಕಿರುವುದಿಲ್ಲವೆಂಬುದನ್ನು ಗಮನಿಸಬೇಕು.*

ಸರಿ ಹೊಂದುತ್ತದೆಂಬುದಕ್ಕೆ ಸಾಕ್ಷಿಯಾಗಿದೆ. ನೈಜ ಜ್ಞಾನವಿಲ್ಲದೆ ಅಥವಾ ಕೇವಲ ಆಂಶಿಕ ಜ್ಞಾನದಿಂದ ಯಾರಾದರೂ ವಾಸ್ತವಿಕತೆಯ ಕುರಿತು ಪ್ರತಿಪಾದಿಸುವಾಗ ಅವರಲ್ಲಿ ವೈರುಧ್ಯಗಳಿರುವುದು ಅನಿವಾರ್ಯ. ಒಂದು ಭಾಗವನ್ನು ವಿವರಿಸುವಾಗ ಇನ್ನೊಂದು ಭಾಗವು ಪರಿಗಣಿಸಲ್ಪಡದು. ಒಂದು ಕವಾಟನ್ನು ತೆರೆಯುವಾಗ ಇತರ ಕವಾಟಗಳು ಮುಚ್ಚಿ ಹೋಗುವುವು. ಜೀವಲೋಕದ ವಿವರಣೆಯ ಪ್ರಶ್ನೆಯು ಸಾರ್ವತ್ರಿಕ ವಾಗಿದೆ. ಅದರ ಕಗ್ಗಂಟು ಬಿಡಿಸುವುದಕ್ಕೆ ಸಮಸ್ತ ವಾಸ್ತವಿಕ ಜ್ಞಾನ ಅಗತ್ಯವಾಗಿದೆ. ಮಾನವನು ತನ್ನ ಸೀಮಿತ ಯೋಗ್ಯತೆಗಳಿಂದ ಸಕಲ ವಾಸ್ತವಿಕತೆಗಳ ಜ್ಞಾನ ಸಂಪಾದಿಸಲು ಸಾಧ್ಯವಿಲ್ಲ. ಅದರಿಂದ ಎಲ್ಲ ಅಂಶಗಳನ್ನು ಗಮನಿಸಲೂ ಸಾಧ್ಯವಿಲ್ಲ. ಆದ್ದರಿಂದ ಮಾನವ ನಿರ್ಮಿತ ತತ್ವಶಾಸ್ತ್ರಗಳಲ್ಲಿ ವೈರುಧ್ಯಗಳು ಕಂಡು ಬರುತ್ತವೆ. ಕುರ್‌ಆನ್ ಇಂತಹ ವೈರುಧ್ಯಗಳಿಂದ ಸಂಪೂರ್ಣ ಮುಕ್ತವಾಗಿರುವುದು ಅದರ ಜೀವಲೋಕದ ವಿವರಣೆಯೇ ಸರಿ, ಇತರೆಲ್ಲ ವಿವರಣೆಗಳೂ ತಪ್ಪೆನ್ನುವುದಕ್ಕೆ ಖಚಿತ ದಾಖಲೆಯಾಗಿದೆ. ಈ ವಿಷಯವನ್ನು ಉದಾಹರಣೆಯಿಂದ ಸ್ಪಷ್ಟಪಡಿಸುತ್ತೇನೆ.

1) ಜೀವನ ಎಂಬ ವಿಷಯದ ಕುರಿತು ಬರೆಯಲ್ಪಡುವ ಗ್ರಂಥದ ಒಂದು ಅಧ್ಯಾಯವು ಜೀವನದ ಕರ್ತವ್ಯಗಳನ್ನು ನಿರ್ಣಯಿಸುವಂಥದ್ದಾಗಿರಬೇಕು. ಈ ಕರ್ತವ್ಯಗಳ ನಿರ್ಣಯದಲ್ಲಿ ಅವುಗಳ ಎಲ್ಲ ಅಂಶಗಳನ್ನೂ ಸೂಕ್ತವಾಗಿ ಗಮನಿಸಬೇಕು. ಒಂದು ಅಂಶದ ಬಗ್ಗೆ ನೀಡುವ ತೀರ್ಮಾನವು ಇನ್ನೊಂದು ಅಂಶದೊಂದಿಗೆ ಸರಿಹೊಂದದ ದಿರುವುದು ಯುಕ್ತವಲ್ಲ. ಉದಾ: ಸ್ತ್ರೀ ಮತ್ತು ಪುರುಷರ ಸ್ಥಾನಮಾನಗಳ ನಿರ್ಣಯವು ನಾಗರಿಕ ಜೀವನದ ಪ್ರಮುಖ ಸಮಸ್ಯೆಯಾಗಿದೆ. ಸ್ತ್ರೀ-ಪುರುಷರಲ್ಲಿ ಸಂಪೂರ್ಣ ಸಮಾನತೆಯಿರಬೇಕು. ಜೀವನದ ಎಲ್ಲ ರಂಗಗಳಲ್ಲಿಯೂ ಉಭಯತ್ರರಿಗೆ ಸಮಾನ ಉದ್ಯೋಗಾವಕಾಶವಿರಬೇಕೆಂದು ಆಧುನಿಕ ನಾಗರಿಕ ಯುಗವು ನಿರ್ಧರಿಸಿದೆ. ಆದರೆ ಮಾನವ ಪ್ರಕೃತಿಗೆ ಸಂಬಂಧಿಸಿದ ಈ ನಾಗರಿಕ ತತ್ವವು ಒಂದು ಪ್ರಾಮುಖ್ಯ ವಾಸ್ತವಿಕತೆ ಯೊಡನೆ ಸಂಘರ್ಷಿಸುತ್ತದೆ. ಅರ್ಥಾತ್ ಜೀವಶಾಸ್ತ್ರದಂತೆ (Biology) ಉಭಯ ವರ್ಗಗಳಲ್ಲಿ ಸಮಾನತೆಯಿಲ್ಲ. ಉಭಯ ವರ್ಗಗಳು ಜೀವನದ ಹೊರೆಯನ್ನು ಏಕಪ್ರಕಾರ ವಾಗಿ ವಹಿಸಿಕೊಳ್ಳಲು ಸಾಧ್ಯವಿಲ್ಲ. ತದ್ವಿರುದ್ಧವಾಗಿ ನಾಗರಿಕ ಜೀವನದಲ್ಲಿ ಸ್ತ್ರೀ-ಪುರುಷರಿಗೆ ಕುರ್‌ಆನ್ ನಿರ್ಣಯಿಸಿರುವ ಸ್ಥಾನವು ಉಭಯತ್ರರ ಹುಟ್ಟು ಗುಣಕ್ಕೆ ಅನುರೂಪವಾಗಿದೆ. ಆದ್ದರಿಂದ ಕಾನೂನು ಮತ್ತು ವಾಸ್ತವಿಕತೆಯಲ್ಲಿ

ಯಾವುದೇ ವೈರುಧ್ಯವಿಲ್ಲ.

2) ಮಾರ್ಕ್ಸನು ಕ್ರಾಂತಿ ತತ್ವ ಸಿದ್ಧಾಂತವನ್ನು ಹೀಗೆ ವಿವರಿಸಿದ್ದಾನೆ. ನಕ್ಷತ್ರಗಳು ಸಾರ್ವತ್ರಿಕ ಆಕರ್ಷಣೆಯ ನಿಯಮದಿಂದ ಚಲಿಸುವಂತೆ ಸಾಮಾಜಿಕ ಪರಿವರ್ತನೆಗಳಿಗೆ ಪ್ರೇರಕವಾದ ಕೆಲವು ಐತಿಹಾಸಿಕ ನಿಯಮಗಳಿವೆ. ಈ ನಿಯಮಗಳು ನಿರಂತರ ಕ್ರಿಯಾಶೀಲವಾಗಿದೆ. ಆ ಪ್ರಕಾರ ಮಾನವ ಜೀವನದಲ್ಲಿ ಕ್ರಾಂತಿಯುಂಟಾಗುತ್ತದೆ. ಆದರೆ ಈ ತತ್ವಶಾಸ್ತ್ರವನ್ನು ಕ್ರೋಢೀಕರಿಸಿದ ವೇಳೆ ಆತನಿಗೆ ಈ ಘೋಷಣೆಯನ್ನು ಮೊಳಗಿಸಬೇಕಾಯಿತು: *'ಜಗತ್ತಿನ ಕಾರ್ಮಿಕರೇ ಒಂದಾಗಿರಿ!'*

ಈ ಎರಡು ಮಾತುಗಳೂ ಪರಸ್ಪರ ಭಿನ್ನವೆಂಬುದು ವ್ಯಕ್ತ. ಸಾಮಾಜಿಕ ಪರಿವರ್ತನೆಗಳು ಇತಿಹಾಸದ ಅನಿವಾರ್ಯ ನಿಯಮ ಫಲವೆಂದಾದರೆ, ರಾಜಕೀಯ ಹೋರಾಟವೇಕೆ? ರಾಜಕೀಯ ಹೋರಾಟದ ಮೂಲಕ ಕ್ರಾಂತಿಯುಂಟಾಗುವುದಾದರೆ ಇತಿಹಾಸದ ಅನಿವಾರ್ಯ ನಿಯಮದ ಅರ್ಥವೇನು? ಆದರೆ, ಕುರ್‌ಆನ್ ಮಾನವನ ಇಚ್ಛಾಶಕ್ತಿಯನ್ನು ಒಪ್ಪುತ್ತದೆ. ಅದರ ತತ್ವಸಿದ್ಧಾಂತ ಹೀಗಿದೆ: ಜೀವನದಲ್ಲಿ ಎದುರಿಸುವ ಘಟನೆಗಳು ಮಾನವ ಪ್ರಯತ್ನದ ಪರಿಣಾಮವಾಗಿದೆ. ಭೌತಿಕ ಲೋಕದಂತೆಯೇ ಆ ಘಟನೆಗಳಿಗೆ ಅನಿವಾರ್ಯ ಪ್ರೇರಣೆಯಿಲ್ಲ. ಬದಲಾಗಿ ಅವುಗಳಿಗೆ ಯಾವ ರೂಪವನ್ನು ನೀಡಲೂ ಮಾನವ ಪ್ರಯತ್ನಕ್ಕೆ ಸಾಧ್ಯವಿದೆ. ಪ್ರಕೃತಿಗೆ ಖಂಡಿತವಾಗಿಯೂ ಕೆಲವು ನಿಯಮಗಳಿವೆ. ಈ ನಿಟ್ಟಿನಲ್ಲಿ ಅವು ಪ್ರಮುಖ ಪಾತ್ರವಹಿಸುತ್ತಿರುವುದೂ ನಿಜ. ಆದರೆ ಮಾನವ ಪ್ರಯತ್ನಗಳೊಂದಿಗೆ ಸಹಕರಿಸಿ ಧ್ಯೇಯಕ್ಕೆ' ತಲಪಿಸುವುದೇ ಈ ಪಾತ್ರದ ಸ್ವರೂಪ. ಆದರೆ ಮಾನವ ಪ್ರಯತ್ನಗಳೇ ಆ ನಿಯಮಗಳ ಬಾಹ್ಯ ಪ್ರಕ್ರಿಯೆಯೆಂದು ಕುರ್‌ಆನ್ ಹೇಳುವುದಿಲ್ಲ. ಕುರ್‌ಆನ್‌ನ ಸಿದ್ಧಾಂತ ಮತ್ತು ಸಂದೇಶಗಳಲ್ಲಿ ಪರಸ್ಪರ ಯಾವ ವೈರುಧ್ಯವೂ ಇಲ್ಲ. ಕುರ್‌ಆನ್ ಅದರ ಸಿದ್ಧಾಂತಗಳನ್ನು ಕಾರ್ಯಗತಗೊಳಿಸುವಂತೆ ಜನರಿಗೆ ಕರೆ ನೀಡುವಾಗ ಅದರ ತತ್ವಶಾಸ್ತ್ರವನ್ನು ಸತ್ಯನಿಷ್ಠಗೊಳಿಸುತ್ತದೆಯೇ ವಿನಾ ತಿರಸ್ಕರಿಸುವುದಿಲ್ಲ. ತದ್ವಿರುದ್ಧವಾಗಿ ಮಾರ್ಕ್ಸನ ತತ್ವಸಿದ್ಧಾಂತವು ಅದರ ಕಾರ್ಯ ವಿಧಾನದೊಂದಿಗೆ ಸಂಘರ್ಷಿಸುತ್ತದೆ. ವಾಸ್ತವದಲ್ಲಿ ಕಮ್ಯೂನಿಸ್ಟ್ ಪಕ್ಷಗಳ ಅಸ್ತಿತ್ವವು ಮಾರ್ಕ್ಸ್‌ನ ತತ್ವಸಿದ್ಧಾಂತದ ನಿಷೇಧವಾಗಿದೆ. ಕಮ್ಯೂನಿಸ್ಟ್ ನೀತಿ ಸಂಹಿತೆಯ ಕೊನೆಯ ವಾಕ್ಯವು ಅದರ ಆರಂಭದ ವಾಕ್ಯವನ್ನು ಖಂಡಿಸುತ್ತದೆ. ಕುರ್‌ಆನಿನ ಶಿಕ್ಷಣಗಳನ್ನು ಮಾನವೀಯ ತತ್ವಗಳೊಂದಿಗೆ ಹೋಲಿಸಿದಾಗ ಇಂತಹ ಅನೇಕ ಉದಾಹರಣೆಗಳನ್ನು

ಕಾಣಬಹುದು.

**3.** ಪವಿತ್ರ ಕುರ್‌ಆನಿನ ತೃತೀಯ ವೈಶಿಷ್ಟ್ಯವು ಹೀಗಿದೆ: ಸುಮಾರು ಒಂದೂವರೆ ಸಾವಿರ ವರ್ಷಗಳಿಂದ ಅದು ಲೋಕದಲ್ಲಿ ಅಸ್ತಿತ್ವದಲ್ಲಿದೆ. ಈ ಮಧ್ಯೆ ಅದೆಷ್ಟೋ ಪ್ರತಿಕ್ರಾಂತಿಗಳು ನಡೆದಿವೆ. ಇತಿಹಾಸದಲ್ಲಿ ಅದೆಷ್ಟೋ ಕ್ರಿಯೆಗಳು ನಡೆದುವು; ಕಾಲವು ಅದೆಷ್ಟೋ ಬದಲಾವಣೆಗಳನ್ನು ತಂದುವು! ಹಾಗಿದ್ದರೂ ಕುರ್‌ಆನ್‌ನ ಒಂದು ವಾಕ್ಯವಾದರೂ ಅಸಂಬದ್ಧವೆಂದು ಸಾಬೀತುಗೊಂಡಿಲ್ಲ. ಎಲ್ಲಾ ಕಾಲದಲ್ಲಿಯೂ ನ್ಯಾಯಬದ್ಧ ಸಾಧ್ಯತೆ ಮತ್ತು ನಾಗರಿಕ ಬೇಡಿಕೆಗಳನ್ನು ಸಮನ್ವಯಗೊಳಿಸಿ ಅದು ಅವ್ಯಾಹತವಾಗಿ ಮುಂದುವರಿಯುತ್ತಿದೆ. ಅದರ ಬೋಧನೆಗಳ ಸಾರ್ವತ್ರಿಕತೆಯು ಎಲ್ಲಿಯೂ ಕೊನೆಗೊಳ್ಳುವುದಿಲ್ಲ. ಬದಲಾಗಿ ಪ್ರತಿಯೊಂದು ಕಾಲದ ಸಮಸ್ಯೆಗಳನ್ನು ಮೈಗೂಡಿಸಿ ಮುಂದೆ ಹೋಗುತ್ತವೆ. ಇದು ಈ ತನಕ ಯಾವುದೇ ಮಾನವ ಗ್ರಂಥಗಳಿಗೆ ದೊರೆಯದ ವೈಶಿಷ್ಟ್ಯವಾಗಿದೆ. ಎಲ್ಲಾ ಮಾನವ ನಿರ್ಮಿತ ನೀತಿ ಶಾಸ್ತ್ರಗಳೂ ಕೆಲವೇ ದಿನಗಳಲ್ಲಿ ಅವುಗಳ ತಪ್ಪುಗಳನ್ನು ಬಹಿರಂಗ ಪಡಿಸುತ್ತವೆ. ಆದರೆ ಶತಮಾನಗಳ ಪ್ರವಾಹದಲ್ಲಿ ಈ ಗ್ರಂಥದ, ಅರ್ಥಾತ್ ಕುರ್‌ಆನ್‌ನ ಸತ್ಯತೆಯಲ್ಲಿ ಯಾವ ಬದಲಾವಣೆಯೂ ಆಗಿಲ್ಲ.

ಅರೇಬಿಯಾದ ಅನಾಗರಿಕ ಅಸಂಘಟಿತ ಗೋತ್ರಗಳನ್ನು ಒಂದುಗೂಡಿಸಿ, ಇಸ್ಲಾಮೀ ರಾಷ್ಟ್ರಕೂಟವನ್ನು ಕಟ್ಟಿ ಬೆಳೆಸುವ ಸಮಸ್ಯೆ ಎದುರಾದಾಗ ಪ್ರಸ್ತುತ ನೀತಿ ಸಂಹಿತೆ ಅವತೀರ್ಣವಾಗುತ್ತಿತ್ತು. ಆದರೆ ಆ ಬಳಿಕ ಶತಮಾನಗಳ ತನಕ ಇಸ್ಲಾಮೀ ರಾಷ್ಟ್ರಗಳ ಬೇಡಿಕೆಗಳನ್ನು ಅದು ಪೂರೈಸುತ್ತಾ ಬಂತು. ಆಧುನಿಕ ಮುನ್ನಡೆಯ ಹಂತದಲ್ಲಿಯೂ ಕಾಲಕ್ಕೆ ತಕ್ಕಂತೆ ಮುನ್ನಡೆಯುವ ಯೋಗ್ಯತೆ ಅದಕ್ಕಿದೆ. ಮಾತ್ರವಲ್ಲ ನಿಜಾರ್ಥದಲ್ಲಿ ಅದು ಜೀವನದ ಸಮಸ್ಯೆಗಳಿಗೆ ಪರಿಹಾರ ನೀಡುವ ಏಕೈಕ ವ್ಯವಸ್ಥೆಯಾಗಿದೆ. ಸಾವಿರಾರು ವರುಷಗಳ ಹಿಂದೆಯೇ ಅದರ ಶ್ರೇಷ್ಠತೆಯನ್ನು ಸಾಬೀತುಪಡಿಸಿದ್ದ ಆ ದಿವ್ಯಗ್ರಂಥವು ಇಂದಿಗೂ ಎಲ್ಲಾ ತತ್ವಜ್ಞಾನಗಳನ್ನು ಮೀರಿ ನಿಂತಿದೆ.

ಕುರ್‌ಆನ್ ರೂಢಿಸಿದ ಸಿದ್ಧಾಂತ, ವ್ಯಕ್ತಿ ಮತ್ತು ಸಮಾಜದ ಚಟುವಟಿಕೆಗೆ ಸಮರ್ಪಿಸಿದ ನಿರ್ದೇಶಗಳು ಇಂದಿಗೂ ಹಳತಾಗಿಲ್ಲ. ಅವುಗಳಲ್ಲಿ ಯಾವ ಕೊರತೆಯನ್ನೂ ಬೊಟ್ಟು ಮಾಡಲು ಸಾಧ್ಯವಿಲ್ಲ. ಈ ಕಾಲಾಂತರದಲ್ಲಿ ಅದೆಷ್ಟೋ ತತ್ವಶಾಸ್ತ್ರಗಳು ಹುಟ್ಟಿ ಸತ್ತಿವೆ. ಅದೆಷ್ಟೋ ಪದ್ಧತಿಗಳು ಆಗಿ ಹೋಗಿವೆ. ಆದರೆ ಖುರ್‌ಆನೀ ಸಿದ್ಧಾಂತದ

ಸತ್ಯತೆ ಮತ್ತು ಅದರ ಕರ್ಮ ಪದ್ಧತಿಯ ಕಾರ್ಯದಕ್ಷತೆ ಇಂದಿಗೂ ಸರ್ವಾಂಗೀಕೃತವಾಗಿದೆ. ಅದರ ಸತ್ಯತೆ ಮತ್ತು ಕಾರ್ಯ ದಕ್ಷತೆಯು ವಾಯು ಮತ್ತು ನೀರಿನಂತೆ ತ್ರಿಕಾಲಾಬಾಧಿತವಾಗಿದೆ.

ಇಲ್ಲಿ ಎರಡು ಅಂಶಗಳನ್ನು ಉದಾಹರಣೆ ಸಹಿತ ಸ್ಪಷ್ಟಪಡಿಸುತ್ತೇನೆ: ಪ್ರಪಂಚದ ನಿಯಾಮಕ ಶಕ್ತಿಯು, ಇಚ್ಛಾನುಸಾರ ಅದನ್ನು ಚಲಾಯಿಸುತ್ತಿರುವ ಒಂದು ಶಕ್ತಿಯೆಂದು ಕುರ್‌ಆನ್ ವಾದಿಸಿತು. ಕುರ್‌ಆನ್ ಈ ವಾದವನ್ನು ಯುರೋಪಿನ ಜ್ಞಾನೋದಯಕ್ಕಿಂತ ಮುಂಚೆಯೇ ಪ್ರತಿಪಾದಿಸಿದೆ. ತದನಂತರ ಅನೇಕ ತತ್ವಜ್ಞಾನಿಗಳೂ ವಿಜ್ಞಾನಿಗಳೂ ಬಂದರು. ಪ್ರಪಂಚವು ಸ್ವಯಂ ಚಲಿಸುತ್ತಿರುವ ಕೇವಲ ಭೌತಿಕ ಯಂತ್ರವೆಂದು ಅವರೆಲ್ಲರೂ ಆವೇಶದಿಂದ ವಾದಿಸಿದರು. ಇನ್ನೂರು ವರುಷಗಳ ತನಕ ಈ ಸಿದ್ಧಾಂತವು ಮಾನವ ಮನದಲ್ಲಿ ಆಧಿಪತ್ಯ ಸ್ಥಾಪಿಸಿತ್ತು. ವೈಜ್ಞಾನಿಕ ಪ್ರಗತಿಯು ಕುರ್‌ಆನ್‌ನ ವಾದವನ್ನು ನಿರಾಕರಿಸುವಂತೆ ತೋರಿತು. ಆದರೆ, ಜೀವನ ಮತ್ತು ಪ್ರಪಂಚವನ್ನು ಕೇವಲ ಭೌತಿಕ ನಿಯಮಗಳಿಂದ ವಿವರಿಸಲು ಸಾಧ್ಯವಿಲ್ಲವೆಂದು ಪ್ರಪಂಚದ ಅಧ್ಯಯನದಿಂದಲೇ ವಿಜ್ಞಾನಿಗಳಿಗೆ ಕ್ರಮೇಣ ಮನವರಿಕೆಯಾಯಿತು. ಈಗ ವಿಜ್ಞಾನವು ಪ್ರತಿನಿತ್ಯ ಕುರ್‌ಆನಿನ ಸಿದ್ಧಾಂತದತ್ತ ಮರಳುತ್ತಿದೆ. ಪ್ರಪಂಚವನ್ನು ಸದುದ್ದೇಶಪೂರ್ವಕವಾಗಿ ಚಲಾಯಿಸುತ್ತಿರುವ ಒಂದು ಬುದ್ಧಿಯು ಅದರ ಹಿಂದಿದೆಯೆಂದು ಒಪ್ಪಿಕೊಳ್ಳಲು ವಿಜ್ಞಾನ ನಿರ್ಬಂಧಿತವಾಗಿದೆ. ಪ್ರಸಿದ್ಧ ವಿಜ್ಞಾನಿ ಸರ್ ಜೇಮ್ಸ್ ಜೀನ್ಸ್ ಈ ಬದಲಾವಣೆಯನ್ನು ವಿವರಿಸುತ್ತಾ ಹೀಗೆ ಬರೆದಿದ್ದಾನೆ:

*"...ವಿಜ್ಞಾನದ ನದಿಯು ಕಳೆದ ಕೆಲವು ವರುಷಗಳಿಂದ ಅತಿಕ್ಷಿಪ್ರವಾಗಿ ಒಂದು ಹೊಸ ತಿರುವನ್ನು ಪಡೆದಿದೆ. ಯಾಂತ್ರಿಕ ಸ್ವರೂಪದ ಒಂದು ಅಂತಿಮ ವಾಸ್ತವಿಕತೆಯತ್ತ ನಾವು ಸಾಗುತ್ತಿರುವೆವೆಂದು ಮೂರು ವರುಷಗಳ ಹಿಂದೆ ನಾವು ನಂಬಿದ್ದೆವು. ಅಥವಾ ಭಾವಿಸಿದ್ದೆವು. ಪ್ರಪಂಚವು ಆಕಸ್ಮಿಕವಾಗಿ ಒಂದುಗೂಡಿದ ಅವ್ಯವಸ್ಥಿತ ಅಣು ಸಮೂಹವೆಂದು ಭಾಸವಾಗಿತ್ತು. ಕುರುಡು ಮತ್ತು ಉದ್ದೇಶರಹಿತ ಶಕ್ತಿಗಳ ಪ್ರಜ್ಞಾರಹಿತ ಕ್ರಿಯೆಗೊಳಗಾಗಿ ಸ್ವಲ್ಪ ಸಮಯ ನಿರರ್ಥಕವಾಗಿ ನರ್ತಿಸುವುದೇ ಅವರ ಕೆಲಸ. ಅದು ಕೊನೆಗೊಂಡಾಗ ಕೇವಲ ನಿರ್ಜೀವ ಪ್ರಪಂಚವು ಉಳಿಯುತ್ತವೆ. ಕೇವಲ ಯಾಂತ್ರಿಕ ಲೋಕದಲ್ಲಿ ಪ್ರಸ್ತುತ ಕುರುಡು ಶಕ್ತಿಗಳ ಚಟುವಟಿಕೆಗಳ ನಡುವೆ, ಜೀವನವು ಸಂಪೂರ್ಣ ಆಕಸ್ಮಿಕವೆಂಬ ನೆಲೆಯಲ್ಲಿ ಅಂಕುರಿಸಿತು. ಪ್ರಪಂಚದ ಸ್ವಲ್ಪ ಭಾಗ ಅಥವಾ ಅಂತಹ*

*ಹಲವು ಭಾಗಗಳು ತಾತ್ಕಾಲಿಕವಾಗಿ ಸಕ್ರಿಯವಾದುವು. ಹೀಗೆಂದು ಭಾವಿಸಲಾಗಿತ್ತು. ಆಧುನಿಕ ವಿಜ್ಞಾನಗಳ ಹಿನ್ನೆಲೆಯಲ್ಲಿ, ನಿಸರ್ಗ ವಿಜ್ಞಾನದ ಮಟ್ಟಿಗೆ, ವಿಜ್ಞಾನವು ಒಂದು ವಿಷಯದ ಬಗ್ಗೆ ಸಹಮತ ಹೊಂದಿದೆ. ವಿಜ್ಞಾನಧಾರೆಯು ನಮ್ಮನ್ನು ಯಾಂತ್ರಿಕೇತರ ವಾಸ್ತವಿಕತೆಯೆಡೆಗೆ ಸಾಗಿಸುತ್ತದೆ."*

ಅವರು ಮುಂದುವರಿಯುತ್ತಾ ಹೀಗೆ ಬರೆದಿದ್ದಾರೆ:

*"ನಾವು ಅವಸರದಿಂದ ರೂಪಿಸಿದ ಪೂರ್ವ ಅಭಿಪ್ರಾಯಗಳ ಮರುಪರಿಶೀಲನೆ ನಡೆಸಬೇಕೆಂದು ನವೀನ ವಿಜ್ಞಾನವೇ ನಮ್ಮನ್ನು ಒತ್ತಾಯಿಸುತ್ತವೆ. ಅಂದರೆ, ಜೀವನದೊಂದಿಗೆ ಯಾವ ಸಂಬಂಧವೂ ಇಲ್ಲದ ಅಥವಾ ಜೀವನ ಕ್ರಮದೊಂದಿಗೆ ಜಿಗುಪ್ಸೆ ತೋರುವಂತಹ ಪ್ರಪಂಚವೊಂದಕ್ಕೆ ನಾವು ಆಕಸ್ಮಿಕವಾಗಿ ತಲುಪಿದವೆಂಬ ಅಭಿಪ್ರಾಯವನ್ನು, ನಮ್ಮ ವೈಯಕ್ತಿಕ ಮನಸ್ಸಿಗೆ ಅತ್ಯಂತ ನಿಕಟವಾದ ವಿಧಾಯಕ ಶಕ್ತಿ ಅಥವಾ ನಿಯಾಮಕ ಶಕ್ತಿಯ (Designing or controling power) ಕುರಿತು ಪ್ರಪಂಚವು ನಮಗೆ ದೃಷ್ಟಾಂತಗಳನ್ನು ಒದಗಿಸುತ್ತಿವೆಯೆಂದು ಈಗ ಕಂಡು ಹಿಡಿಯಲಾಗಿದೆ."* (Modern Scientific thought P: 104)

ಇನ್ನು ಎರಡನೆಯ ಅಂಶವಾದ ಕಾರ್ಯದಕ್ಷತೆಯ ಉದಾಹರಣೆಯನ್ನು ನೋಡೋಣ: ಇಸ್ಲಾಮ್ ನಿರ್ಮಿಸಿರುವ ಸಾಮಾಜಿಕ ಜೀವನದ ಕಾನೂನಿನಲ್ಲಿ ಪುರುಷನಿಗೆ ನಾಲ್ಕರು ಪತ್ನಿಯರ ತನಕ ವಿವಾಹವಾಗುವ ಅನುಮತಿ ನೀಡಲ್ಪಟ್ಟಿದೆ. ಪಾಶ್ಚಾತ್ಯ ಸಂಸ್ಕೃತಿಯು ರೂಢಿಯಾದಾಗ ಪ್ರಸ್ತುತ ಸಂಸ್ಕೃತಿಯನ್ನು ಬಹಳವಾಗಿ ಗೇಲಿ ಮಾಡಿತು. ತಮೋಯುಗದ ಕಿರಾತ ಕಾನೂನೆಂದು ಅದನ್ನು ಆಕ್ಷೇಪಿಸಲಾಯಿತು. ಪಾಶ್ಚಾತ್ಯರ ದೃಷ್ಟಿಯಲ್ಲಿ ಪ್ರಸ್ತುತ ಕಾನೂನು ಸ್ತ್ರೀಯರಿಗೆ ಬಗೆದ ಮಹಾದ್ರೋಹವಾಗಿತ್ತು. ಅದರ ಆಧಾರದಲ್ಲಿ ಒಂದು ಪ್ರಗತಿಶೀಲ ನಾಗರಿಕ ಪದ್ಧತಿಯನ್ನು ಕಟ್ಟಲು ಸಾಧ್ಯವಿಲ್ಲವೆಂದು ಅವರು ಅಬ್ಬರಿಸಿದರು. ಕ್ರೈಸ್ತ ಧರ್ಮದಲ್ಲಿ ಅದಕ್ಕೆ ಧಾರಾಳ ಅವಕಾಶವಿದ್ದರೂ ಪಾಶ್ಚಾತ್ಯ ನಾಗರಿಕತೆಯು ಒಂದೇ ಏಟಿನಲ್ಲಿ ಅದನ್ನು ಹೊರ ಹಾಕಿತು. ಓರ್ವ ಪತ್ನಿಯಿರುತ್ತಾ, ಇನ್ನೋರ್ವಳನ್ನು ವಿವಾಹವಾಗುವ ಸಂಪ್ರದಾಯವು ಅತ್ಯಂತ ಹೀನ ಮತ್ತು ದುರ್ವ್ಯಯವೆಂದು ಅವರು ಪರಿಗಣಿಸಿದರು. ಅದರ ವಿರುದ್ಧ ಅವರು ಭಾರೀ ಪ್ರಚಾರ ನಡೆಸಿದರು. ತನ್ನಿಮಿತ್ತ ಇಂದು ಯಾರಿಗೂ ಅವರ ಪರಿಸರದಲ್ಲಿ ಪ್ರಸ್ತುತ ಸಂಪ್ರದಾಯವನ್ನು ಅಂಗೀಕರಿಸುವ ಧೈರ್ಯವಿಲ್ಲ. ಓರ್ವ ಸ್ತ್ರೀಯು ಪತಿಯ ಎರಡನೇ

ಅಥವಾ ಮೂರನೇ ಪತ್ನಿಯಾಗಿರುವುದನ್ನು ಆಕೆಗೆ ಊಹಿಸಲೂ ಸಾಧ್ಯವಾಗುವುದಿಲ್ಲ.

ಆದರೆ ಪರಿಸ್ಥಿತಿಯು ಮುಖ್ಯವಾಗಿ ಮಹಾ ಯುದ್ಧಾನಂತರದ ಪರಿಸ್ಥಿತಿಯು ಬಹುಪತ್ನಿತ್ವವು ವಾಸ್ತವದಲ್ಲಿ ಕಾರ್ಯಯೋಗ್ಯ ಅಗತ್ಯವೆಂದು ಮನವರಿಕೆ ಮಾಡಿಕೊಟ್ಟಿತು. ಕೆಲವೊಮ್ಮೆ ಕೆಲವು ವ್ಯಕ್ತಿಗಳು, ಕೆಲವೊಮ್ಮೆ ಇಡೀ ಸಮೂಹವೇ ಎರಡರಲ್ಲೊಂದು ವಿಷಯವನ್ನು ಆರಿಸುವ ಅನಿವಾರ್ಯ ಪರಿಸ್ಥಿತಿ ಉದ್ಭವಿಸುತ್ತದೆ. ಒಂದೋ ವ್ಯಭಿಚಾರವನ್ನು ಅಂಗೀಕರಿಸಬೇಕು. ಅಂದರೆ ನಾಗರಿಕ ಪದ್ಧತಿಯನ್ನು ಸಂಪೂರ್ಣವಾಗಿ ಗಂಡಾಂತರಕ್ಕೆ ಸಿಲುಕಿಸಬೇಕು. ಅದಲ್ಲವಿದ್ದರೆ ಬಹುಪತ್ನಿತ್ವ ಸಂಪ್ರದಾಯವನ್ನು ಸ್ವೀಕರಿಸಬೇಕು. ಇದರಿಂದ ಸಮಸ್ಯೆಯು ಉತ್ತಮ ರೀತಿಯಲ್ಲಿ ಪರಿಹಾರವಾಗುತ್ತದೆ. ದ್ವಿತೀಯ ಜಾಗತಿಕ ಯುದ್ಧದ ಬಳಿಕ ಯುದ್ಧದಲ್ಲಿ ಪಾಲ್ಗೊಂಡ ಎಲ್ಲ ರಾಷ್ಟ್ರಗಳಲ್ಲಿಯೂ ಸ್ತ್ರೀಯರ ಸಂಖ್ಯಾನಿಷ್ಪತ್ತಿ ಹೆಚ್ಚಿತು. ಯುದ್ಧದಲ್ಲಾದ ಪ್ರಾಣ ಹಾನಿಯಿಂದ ಪುರುಷರ ಸಂಖ್ಯೆಯು ಕಡಿಮೆಯಾಗಿ ಸ್ತ್ರೀಯರ ಸಂಖ್ಯೆ ಹೆಚ್ಚಿತು. ಇದರ ಭವಿಷ್ಯತ್ ಪರಿಣಾಮಗಳು ಇಂದಿಗೂ ಉಳಿದುಕೊಂಡಿವೆ. 1955ರ ಜನಗಣತಿಯಂತೆ ಜಪಾನಿನಲ್ಲಿ ಸ್ತ್ರೀ ಪುರುಷರ ನಿಷ್ಪತ್ತಿಯು 8:1 ಇತ್ತು. ಯುದ್ಧದ ಪ್ರಬಲ ಆಘಾತವು ಜಪಾನಿನಲ್ಲಿ ವ್ಯಕ್ತವಾಯಿತು. ಅದೆಷ್ಟೋ ಸ್ತ್ರೀಯರು ವಿಧವೆಯಾದರು. ಅಸಂಖ್ಯಾತ ಮಕ್ಕಳು ಅನಾಥರಾದರು. ಹುಡುಗಿಯರಿಗೆ ಪತಿಯರು ದೊರೆಯುವುದೇ ದುಸ್ತರವಾಯಿತು. ತನ್ನಿಮಿತ್ತ ಆ ರಾಷ್ಟ್ರಗಳಲ್ಲಿ ನಿರಾಶ್ರಿತ ಜಾರಸಂತಾನಗಳ ಸಂಖ್ಯೆಯು ಮಿತಿ ಮೀರಿ ಏರಿತು. ಅನಾಥರಿಗೆ ಆಶ್ರಯದಾತರಿಲ್ಲ. ಪತಿಯಿಲ್ಲದ ಸ್ತ್ರೀಯರು ತಮ್ಮ ನೈಸರ್ಗಿಕ ಪ್ರೇರಣೆಯಿಂದ ಕಾಮ ತೃಪ್ತಿಗಾಗಿ ಅನೈತಿಕ ಮಾರ್ಗಗಳನ್ನು ಅನಿವಾರ್ಯವಾಗಿ ಅವಲಂಬಿಸಬೇಕಾಯಿತು. ಹೆಚ್ಚೇಕೆ? ಜರ್ಮನಿಯಲ್ಲಿ ಕೆಲವು ಸ್ತ್ರೀಯರ ಮನೆ ಬಾಗಿಲಿನಲ್ಲಿ ಈ ರೀತಿಯ ಫಲಕಗಳನ್ನು ಕಾಣಬಹುದಾಗಿದ್ದಿತು: "Wanted an evening guest" (ರಾತ್ರಿ ಕಳೆಯಲು ಓರ್ವ ಅತಿಥಿ ಬೇಕಾಗಿದ್ದಾರೆ).

ಪಾಶ್ಚಾತ್ಯ ಮನವು ಈ ತನಕ ತಪ್ಪನ್ನು ಒಪ್ಪಿಕೊಂಡಿಲ್ಲದಿದ್ದರೂ ಘಟನೆಗಳು ಅದನ್ನು ಅವರು ಒಪ್ಪುವಂತೆ ಮಾಡಿದೆ. ವಿವಾಹದ ಬಗ್ಗೆ ತಮ್ಮ ನೀತಿಯು ಸಮಾಜವನ್ನು ಅನೈತಿಕತೆಗೆ ದೂಡಿ ಅನೇಕ ಅಪರಾಧಗಳಿಗೆ ಪ್ರೇರಕವಾಗಿದೆಯೆಂದು ಪಾಶ್ಚಾತ್ಯರು ಮನಗಾಣಬೇಕಾದ ಕಾಲವು ಕಳೆದು ಹೋಗಿದೆ. ಅದೇ ವೇಳೆ ಇಸ್ಲಾಮೀ ನೀತಿಯು ಪ್ರಸ್ತುತ ಸಮಸ್ಯೆಯನ್ನು ಅತ್ಯಂತ ಸುಲಲಿತವಾಗಿ ನಿವಾರಿಸಿ, ಸಮಾಜವನ್ನು ಅನೇಕ

ಕಷ್ಟ-ನಷ್ಟಗಳಿಂದ ಪಾರುಗೊಳಿಸುತ್ತದೆ.

ಇವು ಕುರ್‌ಆನ್‌ನ ಸಿದ್ಧಾಂತ ಮತ್ತು ನಿಯಮಗಳ ಅನಶ್ವರತೆಯನ್ನು ಎತ್ತಿ ತೋರಿಸುವ ಎರಡು ಉದಾಹರಣೆಗಳು. ಮಾನವ ನಿರ್ಮಿತ ಸಿದ್ಧಾಂತ ಮತ್ತು ಕಾನೂನುಗಳು ಹುಟ್ಟುತ್ತವೆ- ಅಳಿಯುತ್ತವೆ. ಆದರೆ ಕುರ್‌ಆನ್ ಪ್ರಥಮ ದಿನ ಹೇಳಿರುವ ಮಾತುಗಳು ಅಂತಿಮ ದಿನದವರೆಗೂ ಸತ್ಯವಾಗಿ ಉಳಿಯುವುದೆಂಬುದನ್ನು ಈ ಉದಾಹರಣೆಗಳು ಸ್ಪಷ್ಟಪಡಿಸುತ್ತವೆ. ಕುರ್‌ಆನ್ ಅಂದು ಯಾವ ರೀತಿಯಲ್ಲಿ ಸತ್ಯವಾಗಿದ್ದಿತೋ, ಇಂದಿಗೂ ಅದೇ ಪ್ರಕಾರ ಸತ್ಯವಾಗಿದೆ. ಓರ್ವ ತ್ರಿಕಾಲ ಜ್ಞಾನಿಯ ಮನದಿಂದ ಕುರ್‌ಆನ್ ಪ್ರವಹಿಸಿರುವುದೇ ಅದರ ದಿವ್ಯತ್ವದ ಜ್ವಲಂತ ಉದಾಹರಣೆಯಾಗಿದೆ.

ಬಂಧುಗಳೇ! ನಮ್ಮ ಅಧ್ಯಯನವು ಈಗ ನಮಗೆ ಸತ್ಯದ ಕವಾಟವನ್ನು ತೆರೆದುಕೊಟ್ಟಿದೆ. "ನಾವು ಯಾರು? ಪ್ರಪಂಚವೇನು?" ಎಂಬ ಪ್ರಶ್ನೆಯಿಂದ ನಾವು ನಮ್ಮ ಅನ್ವೇಷಣೆಯ ಪಯಣವನ್ನು ಆರಂಭಿಸಿದ್ದೆವು. ಅನೇಕ ಮಂದಿ ಅದಕ್ಕೆ ಉತ್ತರ ಹೇಳಲು ಪ್ರಯತ್ನಿಸಿದರು. ಆದರೆ ಅದು ಸತ್ಯವನ್ನು ಸರಿಯಾಗಿ ವಿವರಿಸುವುದಿಲ್ಲವೆಂಬುದನ್ನು ನಾವು ಮನಗಂಡೆವು. ಹೀಗಿರಲು ಅರೇಬಿಯಾದಿಂದ ಮೊಳಗಿದ ದಿವ್ಯವಾಣಿಯು ನಮ್ಮ ಕಿವಿಗಳಿಗೆ ತಲಪಿತು. ಆ ಕುರಿತು ನಾವು ಆಲೋಚಿಸಿದೆವು. ಅದನ್ನು ಪ್ರಪಂಚದ ಚೌಕಟ್ಟಿನಲ್ಲಿಟ್ಟು ಪರಿಶೀಲಿಸಿದೆವು. ಮಾನವೇತಿಹಾಸದಲ್ಲಿ ಅದನ್ನು ತಿಕ್ಕಿ ನೋಡಿದೆವು. ನಿಸರ್ಗದ ಆಳಕ್ಕೆ ಇಳಿದು ಅದನ್ನು ತಿಳಿಯಲು ಪ್ರಯತ್ನಿಸಿದೆವು. ಪ್ರಪಂಚ, ಇತಿಹಾಸ, ಮನಃಶಾಸ್ತ್ರವು ಒಕ್ಕೊರಳಿನಿಂದ ಅದನ್ನು ಸಮರ್ಥಿಸುತ್ತಿವೆ. ನಮ್ಮ ವಿಜ್ಞಾನ ಮತ್ತು ಸದ್ವಿವೇಕವು ಸಂಪೂರ್ಣವಾಗಿ ಅದನ್ನು ಬೆಂಬಲಿಸುತ್ತಿವೆಯೆಂದು ನಾವು ಮನಗಂಡೆವು. ನಾವು ಯಾವುದರ ಅನ್ವೇಷಣೆಗಾಗಿ ಹೊರಟಿದ್ದೆವೋ, ಆ ಸತ್ಯವನ್ನು ಕಂಡು ಹಿಡಿದಿದ್ದೇವೆ. ಇನ್ನು ಅದರ ಬಗ್ಗೆ ನಮ್ಮ ನಿಲುವೇನು? ಆ ಬಗ್ಗೆ ನಾವು ನಿರ್ಧಾರ ಕೈಕೊಳ್ಳಬೇಕಾಗಿದೆ.